ಬೆಲೆ: ಎರಡು ಆಣೆ

ಕರ್ಮವೀರ

ಸಂಪಾದಕರು :
ಹ. ರಾ. ಪುರೋಹಿತ, ಎಂ. ಎ.
)——ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ——(
Editor:
H. R. Purohit, M. A.

—(ಸಂಪುಟ ೧೯)— ಹುಬ್ಬಳ್ಳಿ ಸೋಮವಾರ ತಾರೀಖು ೮—೧೨—೧೯೪೭ —(ಸಂಚಿಕೆ ...

ಸ್ವತಂತ್ರ ಹಿಂದುಸ್ತಾನದ ಮೊದಲ ಮುಂಗಡ ಪತ್ರಿಕೆ

ಕೊರತೆ ತುಂಬಲು ಹೊಸ ತೆರಿಗೆಯಿಲ್ಲ— ಉತ್ಪಾದನದ ಹೆಚ್ಚಳ ಮತ್ತು ಸರಕಾರಕ್ಕೆ ಸಾಲ ಕೊಡುವ ಯೋಜನೆ— ಖಾಸಗಿ ಉದ್ದಿಮೆಗಳಿಗೆ ಪ್ರೋತ್ಸಾಹ— ನಿರಾಶ್ರಿತರಿಗೆ ಸಹಾಯ—

ಸ್ವತಂತ್ರ ಹಿಂದುಸ್ತಾನದ ಮೊದಲನೆಯ ಮುಂಗಡ ಪತ್ರಿಕೆ ಯಿಂದು ಹೊರಬಿದ್ದಿದೆ. ಅನೇಕ ವರ್ಷಗಳಿಂದ ಪರಹಸ್ತಗತವಾಗಿದ್ದ ದೇಶದ ಕೋಶವಿಂದು ಪುನಃ ಜನಪ್ರತಿನಿಧಿಗಳ ಕೈಯಲ್ಲಿ ಬಂದಿದೆ. ಸ್ವಾತಂತ್ರ್ಯೋದಯಕ್ಕಾಗಿ ದೇಶ ಮಾಡಿದತ್ಯಾಗ, ಅನುಭವಿಸಿದ ಕಷ್ಟನಷ್ಟ ಇವುಗಳ ಪರಿಣಾಮದಿಂದ ಪಾರಾಗಬೇಕಾದರೆ ಇನ್ನೂ ಹಲವಾರು ವರ್ಷಗಳು ಬೇಕಾಗಬಹುದು. ಈ ಹೊಸ ಮುಂಗಡ ಪತ್ರಿಕೆಯನ್ನು ರೂಪಿಸಿದವರು ಕೇಂದ್ರ ಸರಕಾರದ ಹಣಕಾಸಿನ ಮಂತ್ರಿಗಳಾದ ಷಣ್ಮುಖಂ ಚೆಟ್ಟಿಯವರು. ಇದೊಂದು ನಡುಗಾಲದ ಮುಂಗಡ ಪತ್ರಿಕೆ. ೧೯೪೭ ನೆಯ ಅಗಸ್ಟ ೧೫ ರಿಂದ ೧೯೪೮ ನೆಯ ಮಾರ್ಚ ೩೧ ರ ವರೆಗೆ. ಅಂದರೆ ೭॥ ತಿಂಗಳ ಆದಾಯ ವೆಚ್ಚಗಳನ್ನು ಇದು ಒಳಗೊಂಡಿದೆ.

ಮುಂಗಡ ಪತ್ರಿಕೆಯ ಸಾರ

ಆದಾಯ

(ಲಕ್ಷಗಟ್ಟಲೆಯಲ್ಲಿ)

ಸುಂಕ	೫೦,೫೦ / ೧,೬೫
ಕೇಂದ್ರ ಅಬಕಾರಿ ತೆರಿಗೆ	೨೨,೦೮
ಕಾರ್ಪೊರೇಶನ್ ತೆರಿಗೆ	೪೨,೭೧
ಆದಾಯ ಕರ	೭೭,೨೯
ಉಪ್ಪಿನ ಕರ	೫೦
ಅಫೀಮು	೮೯
ಬಡ್ಡಿ	೬೬
ಸಿವಿಲ್ ಅಡಳಿತ	೨,೨೬
ನಾಣ್ಯ ಮತ್ತು ನೋಟು	೧,೪೧
ಸಿವಿಲ್ ಕಾಮಗಾರಿ	೧೫
ಇತರ	೨,೭೨
ತಂತಿ ಟಪ್ಪಾಲು ಇಲಾಖೆಗಳಿಂದ	೨,೦೩
ರೇಲ್ವೆಯಿಂದ (ಆದಾಯ ತೆರಿಗೆ ಕಳೆದು, ಪ್ರಾಂತಗಳಿಗೆ ಕೊಡುವ ದೇಣಿಗೆ ತೆಗೆದು)	೩೦,೦೫
ಒಟ್ಟು ಆದಾಯ	೧೭೨,೮೦

ವ್ಯಯ

ಕಂದಾಯ ಸಂಗ್ರಹದ ಬಗ್ಗೆ	೫,೩೩
ನೀರಾವರಿ	೭
ಸಾಲಕೊಡಲು	೨೦,೫೨
ಸಿವಿಲ್ ಆಡಳಿತಕ್ಕೆ	೨೦,೨೪
ನಾಣ್ಯ ಮತ್ತು ನೋಟು	೧,೨೦
ಸಿವಿಲ್ ಕಾಮಗಾರಿ	೬,೨೧
ಪೆನ್ಶನ್	೧,೮೯
ಮಿಶ್ರ (ನಿರಾಶ್ರಿತರ ಬಗ್ಗೆ)	೨೨,೦೦
ಆಹಾರ ಧಾನ್ಯಕ್ಕಾಗಿ	೨೨,೫೨
ಇತರ	೨,೩೦
ಪ್ರಾಂತಗಳಿಗೆ ಗ್ರಾಂಟು	೪೫
ವಿಶೇಷ ಖರ್ಚು	೧,೯೨
ಸಂರಕ್ಷಣೆಗಾಗಿ	೯೨,೭೪
ಒಟ್ಟು ವೆಚ್ಚ	೧೯೭,೩೯
ಕೊರತೆ	೨೪,೫೯

ಮೇಲೆ ಹೇಳಿದ ೭॥ ತಿಂಗಳಲ್ಲಿಯ ಆದಾಯ ೧೭೧.೦೫ ಕೋಟಿ ರೂಪಾಯಿಗಳೆಂದೂ ವೆಚ್ಚ ೧೯೭.೩೯ ಕೋಟಿ ರೂಪಾಯಿಗಳೆಂದೂ ಅಂದಾಜು ಮಾಡಲಾಗಿದೆ. ಈ ಅಂದಾಜಿನಲ್ಲಿ ೨೬.೨೪ ಕೋಟಿ ರೂಪಾಯಿಗಳಷ್ಟು ಕೊರತೆ ಕಂಡುಬರು ತ್ತದೆ. ಪ್ರತಿಯೊಂದು ಮುಂಗಡಪತ್ರಿಕೆಯಲ್ಲೂ ಆದಾಯ ವೆಚ್ಚಗಳು ಸರಿಯಾಗಿರತಕ್ಕದ್ದು ಸ್ವಾಭಾವಿಕವಾದುದು. ಆದರೆ ದೇಶದಲ್ಲಿಯ ಅನೇಕ ಪಿಡುಗುಗಳ ಮೂಲಕ ಹೀಗೆ ಕೆಲವೊಂದು ಕೋಟಿಗಳಷ್ಟು ಕೊರತೆ ಬಂದಿದೆ. ಕಳೆದ ಮಾರ್ಚ ೧ನೆಯ ತಾರೀಖಿನಿಂದ ದೇಶದ ಆರ್ಥಿಕ ದಶೆ ಇಳಿಯುತ್ತ ಬಂದಿರುವುದು, ವಿಭಜನೆಯ ಪರಿಣಾಮದಿಂದ ನಿರಾಶ್ರಿತರಿಗಾಗಿ ವಿಶೇಷ ಖರ್ಚುಮಾಡಬೇಕಾಗಿ ಬಂದಿರುವುದು ಮತ್ತು ಹೊಸ ಪ್ರಾಂತಗಳಿಗೆ ಸಹಾಯವಾಗಿ ಹಣಕೊಡಬೇಕಾಗಿ ಬಂದಿರುವುದು ಹೀಗಾಗಲು ಕಾರಣಗಳೆಂದು ಹಣಕಾಸಿನ ಮಂತ್ರಿಗಳು ವಿಶದ ಪಡಿಸುತ್ತಾರೆ. ಮೇಲಿನ ಎರಡು ಸಂದರ್ಭಗಳಲ್ಲಿ ಸುಮಾರು ೨೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿ ಬರಬಹುದೆಂದು ಹೇಳಲಾಗುತ್ತದೆ. ಮತ್ತು ಪುನರ್ವಿಮರ್ಶಿಸಿದ ಮುಂಗಡ ಪತ್ರಿಕೆಯ ಕೊನೆಯ ರೂಪದಲ್ಲಿ ಒಟ್ಟಿನ ಮೇಲೆ ಸುಮಾರು ೫೦ ಕೋಟಿ ರೂಪಾಯಿಗಳಷ್ಟು ಕೊರತೆ ಕಂಡು ಬರಬಹುದು. ಪುನರ್ವಿಮರ್ಶಿಸಿದ ಪತ್ರಿಕೆಯನ್ನು ನಾಳಿನ ಫೆಬ್ರುವರಿಯಲ್ಲಿ ಶಾಸನಸಭೆಯ ಮುಂದಿಡಲಾಗುವುದೆಂದು ತಿಳಿಯುತ್ತದೆ. ಮೊದಲ ನಾಲ್ಕು ತಿಂಗಳ ಲೆಕ್ಕದಲ್ಲಿ ಪೂರ್ವ ಪಂಜಾಬಿಗೆ ೫ ಕೋಟಿ ರೂಪಾಯಿಗಳನ್ನು ಮುಂಗಡವಾಗಿ ಕೊಡಲಾಗಿದೆ ಮತ್ತು ೨೦.೩೯ ಕೋಟಿ ರೂಪಾಯಿಗಳನ್ನು ಗ್ರಾಂಟೆಂದೂ ೧೫ ಕೋಟಿ ರೂಪಾಯಿಗಳನ್ನೂ ಸಾಲವಾಗಿಯೂ ಪ್ರಾಂತ ಸರಕಾರಗಳಿಗೆ ಕೊಡಲಾಗಿದೆ. ಆದರೆ ಈ ಮುಂಗಡ ಪತ್ರಿಕೆಯಲ್ಲಿ ವ್ಯಾಪಾರ ಲಾಭ ತೆರಿಗೆಯ ಸುದ್ದಿಯನ್ನೇ ಎತ್ತದಿರುವುದು ಸಮರ್ಥನೀಯವಾಗಿಲ್ಲವೆಂದು ಕೆಲವರ ಅಭಿಪ್ರಾಯ.

ಕೊರತೆಯ ಕಾರಣ

ಕೊರತೆಯ ಮುಖ್ಯ ಕಾರಣವೆಂದರೆ, ದೇಶದಲ್ಲಿಯ ಸಾಮಾನುಗಳ ಮತ್ತು ಆಹಾರ ಪದಾರ್ಥಗಳ ಪೂರೈಕೆ ಬಹಳ ಅತೃಪ್ತಿಕರವಿರುವುದು. ಆಹಾರ ಧಾನ್ಯಗಳನ್ನು ಕೇಂದ್ರ ಸರಕಾರವಿಂದು ಪರದೇಶಗಳಿಂದ ತರಿಸುತ್ತಿದೆ. ಇದರ ಬಗ್ಗೆ ಮಾತಾಡುತ್ತ ಶ್ರೀ ಷಣ್ಮುಖಂ ಚೆಟ್ಟಿಯವರು, ಪದಾರ್ಥಗಳ ಉತ್ಪಾದನವನ್ನು ಹೆಚ್ಚಿಸಲು ತೀವ್ರ ಉಪಾಯಗಳನ್ನು ಕೈಕೊಳ್ಳಬೇಕೆಂದು ಸಲಹೆ ಮಾಡಿದರು. ಭಾರತದ ಒಟ್ಟು ಆಹಾರ ಧಾನ್ಯ ೪ ಕೋಟಿ ೫೦ ಲಕ್ಷ ಟನ್ನುಗಳಷ್ಟಾದರೆ, ತರಿಸಿಕೊಳ್ಳಬೇಕಾದ ಅಂತರ ಕೇವಲ ೨೭॥ ಲಕ್ಷ ಟನ್ನುಗಳಷ್ಟು ಮಾತ್ರ. ಇಷ್ಟನ್ನು ಇಲ್ಲೇ ಬೆಳೆಯಲು ಬಹಳ ದುಃಸ್ಸಾಧ್ಯವೆನಿಸದು. ಇದಲ್ಲದೆ ಸ್ಟರ್ಲಿಂಗ್ ಶಿಲ್ಕು ಮತ್ತು ಎಂಪೈರ್ ಡಾಲರ್ ಪೂಲುಗಳ ದೆಸೆಯಿಂದಲೂ ಕೆಲ ಮಟ್ಟಿಗೆ ಅನಿರ್ದಿಷ್ಟ ಪರಿಸ್ಥಿತಿಯ ಮೂಲಕ ಆದಾಯ ಪಡೆವ ಅನುಕೂಲವಿಲ್ಲದಾಗಿದೆಯೆಂದೂ ಹೇಳಲಾಯಿತು. ಆ ಸಂಬಂಧದ ಸದ್ಯದ ಒಪ್ಪಂದ ಇದೇ ಡಿಸೆಂಬರ್ ೩೧ ಕ್ಕೆ ಕೊನೆಗೊಳ್ಳುವುದೆಂದೂ ಅಷ್ಟರೊಳಗೆ ಅದನ್ನು ಪುನರುಜ್ಜೀವನ ಗೊಳಿಸಲು ಪ್ರಯತ್ನಿಸಲಾಗುವುದೆಂದೂ ತಿಳಿಯುತ್ತದೆ.

ಹೊಸ ತೆರಿಗೆಯಿಲ್ಲ

ಕೊರತೆಯನ್ನು ತುಂಬಿಸಲೆಂದು ಹೊಸ ತೆರಿಗೆಯನ್ನು ಹೇರಲು ಸೂಚಿಸದಿರುವುದು ಅಭಿನಂದನೀಯವಾಗಿದೆ. ಆಗಲೇ ಹೇರ ಬಹುವಾದ ಎಲ್ಲ ತೆರಿಗೆಗಳನ್ನೂ ಹೇರಿರುವಾಗ ಹೊಸ ತೆರಿಗೆ ಬಂದಿತ್ತೆಂದರೆ ಎಲ್ಲರಿಗೂ ಅಸಮಾಧಾನ ಉಂಟಾಗುತ್ತಿತ್ತು. ಆದರೆ ಹತ್ತಿಯ ನೂಲು ಮತ್ತು ಬಟ್ಟೆಗಳ ನಿರ್ಯಾತದ ಮೇಲಿನ ತೆರಿಗೆಯನ್ನು ಸ್ವಲ್ಪ ಸುಧಾರಿಸಲಾಗಿದೆ. ಇನ್ನು ಮೇಲೆ ... ಹದದ ಗಜ ಪತ್ತಿಯ ಬಟ್ಟೆಯ ಮೇಲೆ ... ಯಿಂದ ಒಂದು ರತ್ತಲು ತೂಕದ ... ಮೇಲೆ ೬ ಆಣೆಯಂತೆಯೂ ... ತೆರಿಗೆಯನ್ನು ಹೇರಲಾಗುವುದು. ಬಟ್ಟೆ ... ಕ್ಕೆ ೧೦ ಕ್ಕಿಂತ ಕಡಿಮೆಯಿಲ್ಲದಷ್ಟು ... ಅಂತ ಸೇರಿದ್ದಲ್ಲಿ ಅದಕ್ಕೆ ... ತೆರಿಗೆ ... ವೆಂದು ಸ್ಪಷ್ಟ ಪಡಿಸಲಾಗಿದೆ. ... ಮುಂದುವರಿದ ಕೊರತೆಗಾಗಿ ಹೊಸ ತೆರಿಗೆ ಹೇರ ಹೋಗುವುದು ಅನ್ಯಾಯವೆಂದು ಚೆಟ್ಟಿಯವರು ಅಭಿಪ್ರಾಯ ಪಟ್ಟಿದ್ದು ... ವಾಗಿದೆ.

ಅಂತಹ ಅನಿವಾರ್ಯ ಪ್ರಸಂಗ ಬಿದ್ದಲ್ಲಿ ಖರ್ಚನ್ನು ಕಡಿಮೆ ಮಾಡಲಾಗುವುದೆಂದೂ ... ಕೆಯ ಹಣವನ್ನು ಜನರಿಂದ ಸರಕಾರವು ... ಪಡೆಯುವುದೆಂದೂ ಮಂತ್ರಿಗಳು ಸ್ಪಷ್ಟಪಡಿಸಿದ್ದು ಮೆಚ್ಚುಗೆಗೆ ಪಾತ್ರವಾಗಿದೆ. ... ಪಡೆವಲ್ಲಿ ಕೈಗಾರಿಕೆ ವ್ಯಾಪಾರಾದಿಗಳಿಗೆ ... ಬೀಳುವಂತೆ ಹೆಚ್ಚು ಬಡ್ಡಿಯ ಆಸೆ ... ಪಡೆಯಲಾಗುವುದಿಲ್ಲವೆಂದು ಮಂತ್ರಿಗಳು ಸನವಿತ್ತುದು ಯುಕ್ತವಾಗಿದೆ. ಇದಲ್ಲದೆ ... ಸರಣವನ್ನು ತಡೆಯಲು ಉತ್ತಮ ... ರೋಪಾಯವಾದ ಸ್ವಲ್ಪ ಸ್ವಲ್ಪ ಹಣವನ್ನು ... ರಿಸುವ ಚಳವಳವನ್ನು ಸಾಗಿಸಲಾಗುವ ... ಅವರು ಸೂಚಿಸಿದ್ದು ಸೂಕ್ತವಾಗಿದೆ.

ಯುದ್ಧೋತ್ತರ ಯೋಜನೆ

ದೇಶದ ವಿಭಜನೆಯಿಂದ ಯುದ್ಧೋತ್ತರ ... ರ್ರಚನೆಗೂ ಆತಂಕ ಉಂಟಾಗಿದೆ. ... ನೆಯ ತಾರೀಖಿನಿಂದ ಅಗಸ್ಟ ೧೫ ರ ವರೆಗಿನ ... ಗಡ ಪತ್ರಿಕೆಯಲ್ಲಿ ಒಕ್ಕಟ್ಟಿನ ಗ್ರಾಂಟ ... ಳಿಗೆ ಯುಕ್ತವೆನಿಸುವ ಯೋಜನೆಗಳಿಗೆ ... ಮುಂಗಡ ಹಣ ದೊರೆಯ ಬಹುದೆಂದು ... ಗಳಿಗೆ ಹೇಳಿದ್ದರಿಂದಲೇ ಈಗ ಕೊ ... ಪ್ರಗತಿಯ ಗತಿ ಇಷ್ಟು ಮಂದವಾಗಿರುವುದು. ಈಗಲಾದರೂ ಕೇಂದ್ರ ... ರವು ಪ್ರಾಂತಗಳಿಗೆ ಮುಂಗಡ ಹಣ ... ವುದಾಗಿ ಹೇಳಿದೆ. ಆದರೆ ಹಣಕಾಸಿನ ... ಗಳ ಹೇಳಿಕೆಯನ್ನವಲೋಕಿಸಿದರೆ ಅದು ... ಸಿಕವಾದುದೆಂಬುದು ಸ್ಪಷ್ಟವಾಗುತ್ತದೆ. ... ಗಳಾದರೂ ಈ ವಿಷಯವನ್ನರಿತುಕೊಂಡು ... ಮಾರಾಟ ಕರ, ಆದಾಯ ತೆರಿಗೆ ... ತಮಗೆ ಅಗತ್ಯವಾದ ... ಅಗತ್ಯವಾದ ಹಣವನ್ನು ಕೂಡಿಸಿಕೊಳ್ಳ ... ಬೇಕಿದೆ. ಇದಲ್ಲದೆ ಶ್ರೀ. ಷಣ್ಮುಖಂ ... ಹೇಳಿದಂತೆ ಪ್ರಾಂತ ಸರಕಾರಗಳು ... ಆದಾಯವನ್ನು ನಾನಾ ಬಗೆಯಿಂದ ಹೆಚ್ಚಿಸಿಕೊಂಡು ... ಮುಖ್ಯವಾದುದೆಂಬುದನ್ನು ಗಮನದಲ್ಲಿಡತಕ್ಕದ್ದು.

ಖಾಸಗಿ ಉದ್ದಿಮೆಗಳು

ಇದರ ಮೇಲೆ ಖಾಸಗಿ ಉದ್ದಿಮೆ ... ಪದಾರ್ಥದ ತಯಾರಿಕೆಯನ್ನು ಹೆಚ್ಚಿಸ ... ಅವಶ್ಯಕತೆಗಳನ್ನು ... ಕೊಡುವುದಾಗಿ ಮಂತ್ರಿಗಳು ... ಸಲಹರಿಗೆ ಸಮಾಧಾನವಾಗಿದೆ. ... ದಡನೆಯ ಅಂಕಿಸ್ಟರದ ... ಬಳಕ ವರ್ಷಗಳವರೆಗೆ ಕೈಗಾರಿಕೆಯ ... ಸಂಸ್ಥೆಗಳಿಗೆ ಅವಕಾಶ ... ವೆಂದು ... ದ್ದಾರೆ. ... ವ್ಯಾಪಾರಿಗಳ ... ಉದ್ದಿಮೆದಾರರ ...

(೨ನೇ ಪುಟ ನೋಡಿರಿ)

ಸ್ವಾತಂತ್ರ್ಯದ ಚಂಡೀತಾಂಡವ

(ಭಾರತೀಯ ಸ್ವಾತಂತ್ರ್ಯದ ಬೆನ್ನಿಗೆ ಬಂದ ರಕ್ತಪಾತದ ಬಗೆಗೆ ಅಮೇರಿಕೆಯ ... "ಟೈಮು" ಪತ್ರಿಕೆಯ ವ್ಯಂಗ್ಯಚಿತ್ರ)

ರಶಿಯದಲ್ಲಿ ಸ್ವಂತ ಆಸ್ತಿ

ಲೇ:— ಶ್ರೀ ಎಂ. ಗೋವಿಂದಶೆಟ್ಟಿಯವರು

ಎಲ್ಲರೂ ದೇಶಕ್ಕೋಸ್ಕರ, ಸಮಾಜಕ್ಕೋಸ್ಕರ ಶ್ರಮಿಸಬೇಕೆಂಬುದು ರಶಿಯದ ತತ್ವ. ಅದ್ದರಿಂದ ಆ ದೇಶದಲ್ಲಿ ಸ್ವಂತಕ್ಕೆ ಆಸ್ತಿಪಾಸ್ತಿಯನ್ನಿಟ್ಟುಕೊಳ್ಳಬಹುದೇ? ಎಂಬ ಶಂಕೆ ಹುಟ್ಟುವುದು ಸಹಜವಾಗಿದೆ. ರಶಿಯದಲ್ಲಿ ಸ್ವಂತ ಆಸ್ತಿಪಾಸ್ತಿಗಳಿಗೆ ಸ್ಥಳವೇ ಇಲ್ಲವೆಂದು ಅನೇಕರು ನಂಬಿಕೊಂಡಿದ್ದಾರೆ. ಅದ್ದರಿಂದ ಈ ವಿಷಯದಲ್ಲಿ ಯಥಾರ್ಥ ಸಂಗತಿಯನ್ನಿಲ್ಲಿ ಕೊಡಲಾಗಿದೆ.

ರಶಿಯದಲ್ಲಿ ಪ್ರಜೆಗಳು ತಮ್ಮ ತಮ್ಮ ಸ್ವಂತಕ್ಕೆ ಆಸ್ತಿಯನ್ನಿಟ್ಟುಕೊಳ್ಳಬಹುದು. ಅಂತಹ ಆಸ್ತಿಯನ್ನು ಆ ದೇಶದ ಕಾನೂನುಗಳು ಮಾನ್ಯ ಮಾಡುವದಲ್ಲದೆ ರಕ್ಷಿಸುವ ಭಾರವನ್ನು ಕೂಡ ಹೊತ್ತಿರುತ್ತವೆ. ಅವರವರ ವಾರಸದಾರರಿಗೆ ಆಯಾ ಆಸ್ತಿಗಳು ಸೇರುವುದಕ್ಕೂ ಸಹ ಅವಕಾಶ ಮಾಡಿಕೊಡಲಾಗಿದೆ.

ರಶಿಯದಲ್ಲಿರುವ ಬಹುಭಾಗದ ಆಸ್ತಿಯನ್ನೆಲ್ಲ ಎರಡು ವಿಧವಾಗಿ ವಿಂಗಡಿಸಬಹುದು. ಒಂದು, ರಾಷ್ಟ್ರದ ಸೊತ್ತು. ಇದು ಪ್ರಜೆಗಳಿಗೆಲ್ಲ ಸೇರಿದ್ದು. ಎರಡು ಸಹಕಾರ ಸಂಘಗಳು ಮತ್ತು ಸಾಮೂಹಿಕ ಸಹಕಾರದ ವ್ಯವಸಾಯ ಸಂಘಗಳಿಗೆ ಸೇರಿದ ಸೊತ್ತು. ಭೂಮಿ, ಭೂಗರ್ಭದ ಸಂಪತ್ತು, ಜಲ, ತರು, ಕೈಗಾರಿಕೆಯ ಉದ್ಯಮಗಳು, ವಾಹನ ಮತ್ತು ಸಂಚಾರ ಸೌಕರ್ಯಗಳು ಸಾರ್ವಜನಿಕರ ಪ್ರಯೋಜನಕ್ಕೆ ಮೀಸಲಾದ ಎಲ್ಲ ವಸ್ತುಗಳು, ಸ್ಥಳೀಯ ಸಂಸ್ಥೆಗಳ ಉದ್ಯಮಗಳು ಮತ್ತು ವಾಸದ ಮನೆಗಳಲ್ಲಿ ಬಹುಭಾಗದ ಮನೆಗಳು ಮೊದಲನೆಯ ವರ್ಗಕ್ಕೆ ಸೇರಿದವುಗಳು. ಅಂದರೆ ಇವೆಲ್ಲ ರಾಷ್ಟ್ರದ ಸೊತ್ತು.

ಸಾಮೂಹಿಕ ಸಹಕಾರ ವ್ಯವಸಾಯಸಂಘಗಳ ಜಮೀನು, ಮಾಲು, ಉತ್ಪತ್ತಿ ಸಾಧನಗಳು ಇವೆಲ್ಲ ಆಯಾ ಸಂಘಗಳ ಸದಸ್ಯರಿಗೆ ಸೇರಿದ ಸೊತ್ತುಗಳು-ಇದು ಮತ್ತೊಂದು ವರ್ಗ.

ಈ ಎರಡು ವಿಧವಾದ ಆಸ್ತಿಯನ್ನು ಬಿಟ್ಟು ಸಾಮೂಹಿಕ ಸಹಕಾರ ಸಂಘಗಳಿಗೆ ಸೇರದೆ ಇರುವ ಸಣ್ಣಪುಟ್ಟ ರೈತರ ಮತ್ತು ಉದ್ಯೋಗಿಗಳ ಆಸ್ತಿಗಳಿರುತ್ತವೆ. ಇಂತಹ ಆಸ್ತಿಗಳಲ್ಲಿ ಆಯಾ ರೈತ ಅಥವಾ ಕಸಬುದಾರನು ತನ್ನ ಆಸ್ತಿಯನ್ನು ತನ್ನ ಸ್ವಂತ ಶ್ರಮದಿಂದಲೇ ವೃದ್ಧಿಪಡಿಸಿಕೊಳ್ಳುವವನಾಗಿಯೂ ಇತರರ ಸಹಾಯವನ್ನು ಅಪೇಕ್ಷಿಸದೆ ನಡೆಸಿಕೊಳ್ಳುವವನಾಗಿಯೂ ಸರಕಾರಕ್ಕೆ ಭರವಸೆಯನ್ನು ಕೊಟ್ಟರೆ ಮಾತ್ರ ಅವನ ಆಸ್ತಿ ಅವನ ಸ್ವಂತಕ್ಕೆ ಸೇರಿದ್ದೆಂದು ಪರಿಗಣಿಸಲಾಗುವುದು.

ರಾಷ್ಟ್ರದ ಉದ್ಯಮಗಳ ಹುಟ್ಟುವಳಿಯೆಲ್ಲ ಈ ಕೆಳಗಿನ ರೀತಿಯಲ್ಲಿ ವಿನಿಯೋಗವಾಗುತ್ತವೆ. ಉತ್ಪತ್ತಿಯಲ್ಲಿ ಒಂದು ಭಾಗ ಗಿರಣಿಗಳ, ಕಾರಖಾನೆಗಳ ಮೇಲ್ವಿಚಾರಣೆಗೆ ಮತ್ತು ಹೊಸ ಗಿರಣಿ ಕಾರಖಾನೆಗಳ ನಿರ್ಮಾಣಕ್ಕೂ ವಿನಿಯೋಗಿಸಲ್ಪಡುವುದು. ಇನ್ನೂ ರಕ್ಷಣೆಗಾಗಿಯೂ ಆಪದ್ಧನ ಸಂಗ್ರಹಕ್ಕಾಗಿಯೂ ಕೆಲವು ಹಣ ತೆಗೆದಿಡಲಾಗುತ್ತದೆ. ದೇಶದ ಒಟ್ಟು ವರಮಾನದಲ್ಲಿ ಇನ್ನೊಂದು ಭಾಗದ ವರಮಾನವು ಸಾರ್ವಜನಿಕರ ಉಪಯೋಗಕ್ಕಾಗಿ ಮೀಸಲಾಗಿಡಲ್ಪಡುತ್ತದೆ. ಹೀಗೆ ಕಾದಿಟ್ಟುದರಲ್ಲಿ ಅರ್ಧ ಭಾಗ ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳಿಗೆ ವಿನಿಯೋಗಿಸಲ್ಪಡುವುದು. ಉಳಿದರ್ಧ ಭಾಗದ ವರಮಾನವನ್ನು ವ್ಯಕ್ತಿಗಳ ಉಪಯೋಗಕ್ಕಾಗಿ ಅಂದರೆ ಮಜೂರಿಗಾಗಿ ವಿನಿಯೋಗಿಸಲ್ಪಡುವುದು.

ಹೀಗೆ ಮಜೂರಿಗಾಗಿ ಕೊಡುವ ಹಣವನ್ನು ಆಯಾ ವ್ಯಕ್ತಿ ತನ್ನ ಮನಬಂದಂತೆ ವೆಚ್ಚ ಮಾಡಬಹುದು. ಇದು ಅವನ ಸ್ವಂತ ಹಣ. ಈ ಹಣದಿಂದ ತನ್ನ ಸ್ವಂತ ಬಳಕೆಗಾಗಿ ಯಾವ ಪದಾರ್ಥವನ್ನಾದರೂ ಕೊಂಡುಕೊಳ್ಳಬಹುದು. ಆದರೆ ಹೀಗೆ ಕೊಂಡ ಪದಾರ್ಥಗಳಿಂದ ತಾನು ದುಡಿಮೆ ಮಾಡಿಕೊಂಡು ಅವುಗಳನ್ನೇ ಬಂಡವಾಲ ಮಾಡಿಕೊಂಡು ಇನ್ನೊಬ್ಬನನ್ನು ಅದಕ್ಕಾಗಿ ಕೂಲಿಗಿಟ್ಟುಕೊಂಡು ದುಡಿಯಕೂಡದು. ರಶಿಯದ ಪ್ರತಿ ಪ್ರಜೆಯೂ ಮಜೂರಿಯಿಂದ ಬೇಕಾದಷ್ಟು ಹಣವನ್ನು ಶೇಖರಿಸಬಹುದು ಮತ್ತು ಅದರಲ್ಲಿ ಉಳಿಸಿ ಮಿಕ್ಕ ಹಣವನ್ನು ತನ್ನಲ್ಲೇ ಉಳಿಸಿಕೊಳ್ಳಬಹುದು. ಆದರೆ ಈ ಹಣವನ್ನು ಬಡ್ಡಿಯ ಸಾಲಕ್ಕೆ ಕೊಡಕೂಡದು. ಈ ಹಣದಿಂದ ಅವನ ಉಪಯೋಗಕ್ಕಾಗಿ ಮೋಟಾರು, ಹೊಲಿಗೆ ಯಂತ್ರ ಮುಂತಾದುವುಗಳನ್ನು ಮತ್ತು ಈ ಬಗೆಯ ಉತ್ಪತ್ತಿ ಸಾಧನದ ಸಾಮಗ್ರಿಗಳನ್ನು ಕೊಂಡುಕೊಳ್ಳಬಹುದು. ಆದರೆ ಈ ಸಾಧನಗಳಿಂದ [illegible] ಉಳಿಸಿ ಕೂಲಿ ಇಟ್ಟು ಹಡೆದುಕೊಳ್ಳುವುದು ನಿಷೇಧ. ಉದಾಹರಣೆಗೆ ವಾಚನಾಲಯದಿಂದ ಪುಸ್ತಕಗಳನ್ನು ಓದುವುದಕ್ಕೆ ಬಾಡಿಗೆ ಕೊಡುವುದು ನಿಷೇಧ. ಹಣವನ್ನು "ಸೇವಿಂಗ್ಸ್ ಬ್ಯಾಂಕು"ಗಳಲ್ಲಿ ನಿರ್ದಿಷ್ಟವಾದ ಬಡ್ಡಿಯ ದರದ ಮೇಲೆ ಇಡಬಹುದು. ಅಂತಹ ಸೇವಿಂಗ್ಸ ಬ್ಯಾಂಕುಗಳಿಗೆ ಸರಕಾರ ಹೊಣೆ ಕೊಡುತ್ತದೆ. ರಶಿಯದ ರಾಜ್ಯಾಂಗ ಶಾಸನದ ೧೦ ನೆಯ ವಿಧಿಯ ಪ್ರಕಾರ ತಮ್ಮ ತಮ್ಮ ಮಜೂರಿಯಿಂದ ತಮ್ಮ ಸ್ವಂತ ಬಳಕೆಗಾಗಿ ಯಾವ ಪದಾರ್ಥಗಳನ್ನು ಬೇಕಾದರೂ ಕೊಂಡು ಇಟ್ಟುಕೊಳ್ಳುವುದಕ್ಕೆ ಪ್ರತಿ ಪ್ರಜೆಗೂ ಕಾನೂನುಬದ್ಧವಾದ ಹಕ್ಕಿದೆಯೆಂದು ಸಾರಲಾಗಿದೆ. ಅಂತಹ ಆಸ್ತಿಯನ್ನು ಆ ಕಾನೂನು ರಕ್ಷಿಸುತ್ತದೆ.

ಪ್ರತಿ ಪ್ರಜೆಯೂ ತನ್ನ ಕುಟುಂಬದ ಉಪಯೋಗಕ್ಕಾಗಿ ಒಂದು ಮನೆಯನ್ನು ಮಾತ್ರವೇ ಇಟ್ಟುಕೊಳ್ಳಬಹುದು. ಆದರೆ ಆ ಮನೆಯಲ್ಲಿ ತಾನೇ ವಾಸವಾಗಿರಬೇಕೆಂಬ ನಿರ್ಬಂಧವೇನೂ ಇಲ್ಲ. ತಾನೂ ತನ್ನ ಕುಟುಂಬದವರೂ ಬೇರೇ ಕಡೆ ವಾಸವಾಗಿದ್ದಲ್ಲಿ ಆ ಮನೆಯನ್ನು ಬಾಡಿಗೆಗೆ ಕೊಡಬಹುದು. ಸ್ವಂತಕ್ಕಿರುವ ಮನೆ ಮತ್ತು ಇತರ ಆಸ್ತಿಗಳನ್ನು ಕೊಳ್ಳುವುದು, ಮಾರುವುದು ಅಡವಿಡುವುದು, ಧರ್ಮಮಾಡುವುದು ಅಥವಾ ವಾರಸುದಾರರಿಗೆ ಬಿಟ್ಟುಕೊಡುವುದೂ ಇವೆಲ್ಲ ಕಾನೂನು ಪ್ರಕಾರ ರಶಿಯದಲ್ಲಿ ರೂಢಿಯಲ್ಲಿರುವ ವ್ಯಕ್ತಿಗೆ ಸಂಬಂಧಪಟ್ಟ ಹಕ್ಕುಗಳು. ಆದರೆ ಮನೆಗಳನ್ನು ಕೊಳ್ಳುವುದಕ್ಕೆ ಮಾತ್ರ ಒಂದು ಪರಿಮಿತಿಯನ್ನಿಡಲಾಗಿದೆ. ಒಂದು ಮನೆ ಕೊಂಡುಕೊಂಡ ಮೂರು ವರ್ಷಗಳೊಳಗೆ ಮತ್ತೊಂದು ಮನೆಯನ್ನು ಕೊಳ್ಳಲಾಗುವುದಿಲ್ಲ. ತನ್ನ ಕುಟುಂಬದ ಉಪಯೋಗಕ್ಕಾಗಿ ಯಾವ ಪದಾರ್ಥವನ್ನು ಬೇಕಾದರೂ ಇಟ್ಟುಕೊಳ್ಳುವುದರಲ್ಲಿ ಯಾವ ನಿರ್ಬಂಧವೂ ಇಲ್ಲ. ಈ ರೀತಿಯ ಆಸ್ತಿಯ ಮಾರಾಟ, ಆಧಾರಭೋಗ್ಯ, ದಾನ ದತ್ತಕ ವಗೈರೆ ಹಕ್ಕುಗಳು ರಶಿಯದ ಪ್ರತಿ ಪ್ರಜೆಗೂ ಇದೆ.

ಗಂಡ ಹೆಂಡಿರು ಮಾತ್ರ ಆಸ್ತಿಯನ್ನಿಟ್ಟುಕೊಳ್ಳಲು ಅಧಿಕೃತರು. ಮನೆಯ ಇತರ ಕುಟುಂಬಿಗಳಿಗೆ ಆ ಅಧಿಕಾರವಿರುವುದಿಲ್ಲ. ಮದುವೆಯಾದ ನಂತರ ಕೂಡಿದ ಆಸ್ತಿಗೆಲ್ಲ ಅದು ಯಾರ ಹಣದಿಂದ ಕೊಂಡಿದ್ದರೂ ಸರಿಯೆ, ಗಂಡ ಹೆಂಡಿರಿಬ್ಬರೂ ಅದರ ಮಾಲಿಕರು ಆದರೆ ಅವರವರ ಸ್ವಂತ, ವೈಯಕ್ತಿಕ ಬಳಕೆಯ ಪದಾರ್ಥಗಳೂ ಅವರ ಸ್ವಂತ ಕಸಬಿಗೆ ಸಂಬಂಧಪಟ್ಟ ಪದಾರ್ಥಗಳೂ, ಅವರಿಬ್ಬರಲ್ಲಿ ಯಾರ ಕಸಬಿಗೆ ಸಂಬಂಧಪಟ್ಟಿರುವುವೋ ಅವರೇ ಆ ಪದಾರ್ಥಗಳ ಮಾಲೀಕರೆಂದು ವಿಧಿಸಲಾಗಿದೆ.

ಸಾಮೂಹಿಕ ವ್ಯವಸಾಯ ಸಂಘಗಳ ಸದಸ್ಯರ ವಾಸದ ಮನೆ, ಅದರ ಸುತ್ತಮುತ್ತಲೂ ಇರುವ ಭೂಮಿ ಅರ್ಧ ಎಕರೆಯಿಂದ ಎರಡೂವರೆ ಎಕರೆಗೆ ಮೀರದಂತೆ ಅವರ ದನಕರು, ಕುರಿ, ಕೋಳಿ ಮತ್ತು ವ್ಯವಸಾಯದ ಮುರಮುಟ್ಟು ಇವಕ್ಕೆಲ್ಲ ಆಯಾ ಮನೆಯವರೇ ಮಾಲೀಕರು. ಆ ಮನೆಯಲ್ಲಿ ಯಾರಾದರೂ ಮೃತಪಟ್ಟರೆ ಅಥವಾ ಹುಟ್ಟಿದರೆ ಮಾಲೀಕರ ಸಂಖೆಯಲ್ಲಿ ಮಾತ್ರ ಹೆಚ್ಚು ಕಡಿಮೆಯಾಗುತ್ತದೆ.

ಸೋವಿಯಟ್ ಕಾನೂನಿನ ಪ್ರಕಾರ ಮೃತ ಮಾಲೀಕನ ಸ್ವಂತ ಆಸ್ತಿಯನ್ನು ಮಕ್ಕಳು ಅಥವಾ ದತ್ತಪುತ್ರರು, ಮೃತರ ಗಂಡ ಅಥವಾ ಹೆಂಡತಿ, ನಿಶ್ಯಕ್ತರಾದ ಮಾತಾಪಿತೃಗಳು ಅಥವಾ ಮೃತನ ಮೇಲೆ ಆತನ ಮರಣಕ್ಕೆ ಒಂದು ವರ್ಷಕ್ಕೆ ಕಡಿಮೆ ಇಲ್ಲದಂತೆ ಆಧಾರಪಟ್ಟಿದ್ದ ಇತರ ನಿಶ್ಯಕ್ತ ವ್ಯಕ್ತಿಗಳು ವಾರಸದಾರರಾಗಿ ಪಡೆಯಬಹುದು. ಮಗ ಅಥವಾ ಮಗಳು ಮೃತಪಟ್ಟಲ್ಲಿ ಅವರ ಆಸ್ತಿ ಅವರ ಮಕ್ಕಳಿಗೇ ಸೇರುತ್ತದೆ. ಅವರಾದ ಮೇಲೆ ವಾರಿಸಿನಲ್ಲಿ ಎರಡನೆಯ ಸ್ಥಾನ ಶಕ್ತರಾದ ತಂದೆತಾಯಿಗಳಿಗೆ ಇಡಲಾಗಿದೆ. ಅವರ ನಂತರ ಕ್ರಮವಾಗಿ ಮೃತನ ಅಣ್ಣ ತಮ್ಮಂದಿರು ಅಕ್ಕ ತಂಗಿಯರು ಇವರಿಗೆ ಹೋಗುತ್ತದೆ.

ಯಾವ ಪ್ರಜೆಯೇ ಆಗಲಿ ತನ್ನ ಆಸ್ತಿಯನ್ನು ತನ್ನ ವಾರಸದಾರರ ಪೈಕಿ ಯಾರಿಗಾದರೂ ಮೃತ್ಯುಪತ್ರ ಮುಖೇನ ಬರೆದು ಕೊಡಬಹುದು. ಅಥವಾ ರಾಷ್ಟ್ರದ ಯಾವ ಸಂಸ್ಥೆಗಾದರೂ ಬಿಡಬಹುದು; ಆದರೆ ಹೀಗೆ ಬಿಟ್ಟುಕೊಡುವುದರಲ್ಲಿ ತನ್ನ ಅಪ್ರಾಯಸ್ಥ ಮಕ್ಕಳ ಅಥವಾ ಅವನ ಮೇಲೆ ಆಧರಿಸಿರುವ ವಾರಸುದಾರರ ಪಾಲಿಗೆ ಕಾನೂನು ಪ್ರಕಾರ ಬರುವ ಭಾಗವನ್ನು ಅದು ಬಾಧಿಸಲಾರದು. ವಾರಸುದಾರರು ಯಾರೂ ಇಲ್ಲದಿದ್ದಲ್ಲಿ ಅವನ ಆಸ್ತಿಯನ್ನು ಯಾರಿಗಾದರೂ ಕೊಡಬಹುದು. ವಾರಸುದಾರರು ಯಾರೂ ಇಲ್ಲದೆ, ಮೃತನು ಯಾರಿಗೂ ಆಸ್ತಿಯನ್ನು ಬರೆದಿಡದೆ ಇದ್ದಲ್ಲಿ ಅದು ರಾಷ್ಟ್ರಕ್ಕೇ ಸೇರಿ ಹೋಗುವುದು.

ಸಾದರ ಸ್ವೀಕಾರ

೧. ಕಲಾವಿದ (ಮಾಸಿಕ)

ಸಂಪಾದಕರು:-ಎಮ್. ಎಲ್. ಶೆಟ್ಟಿ ಕಲಾವಿದ ಆಫೀಸ, ಫಾಲ್ನೀರ ರೋಡ, ಮಂಗಳೂರ. ಪುಟಗಳು: ೪೬, ಬಿಡಿಸಂಚಿಕೆ ೬ ಆಣೆ. ವಾರ್ಷಿಕ ಚಂದಾ ೫—೦—೦.

ಈ ನವೀನ ಸಚಿತ್ರ ಮಾಸಿಕವು ತುಂಬಾ ಕಲಾಪೂರಿತವಾಗಿದೆ ಅಲ್ಲದೆ ಕನ್ನಡ ನಾಡಿನ ಕಲಾಸೇವೆ ಮತ್ತು ಪ್ರೋತ್ಸಾಹನೆಗೆ ಅರ್ಹವಾಗಿದೆ.

೨. ಹೋರಿ

ಲೇಖಕರು- ಹೊಯ್ಸಳ, ಪ್ರಕಾಶಕರು- ಕಾವ್ಯಾಲಯ. ಮೈಸೂರ. ಪುಟಗಳು- ೩೬. ಬೆಲೆ ೦—೮—೦.

೩. ಭಾವತರಂಗ

ಲೇಖಕರು- ಎಂ. ಗೋಪಾಲಕೃಷ್ಣ ಅಡಿಗ ಪ್ರಕಾಶಕರು- ಕಾವ್ಯಾಲಯ, ಮೈಸೂರ. ಪುಟಗಳು- ೮೦, ಬೆಲೆ ೧—೪—೦.

೪. ಷೋಡಶಿ

ಲೇಖಕರು- ಕು. ವೆಂ. ಪು. ಪ್ರಕಾಶಕರು- ಕಾವ್ಯಾಲಯ, ಮೈಸೂರ. ಪುಟಗಳು- ೮೦, ಬೆಲೆ- ಸಾ. ಪ್ರ. ೧-೮-೦. ಕ್ಯಾ. ಪ್ರ. ೨-೧೨-೦.

೫. ಪಕ್ಷಿಗಾನ

ಲೇಖಕರು- ಆನಂದ, ಪ್ರಕಾಶಕರು- ಕಾವ್ಯಾಲಯ, ಮೈಸೂರ. ಪುಟಗಳು- ೮೦ ಬೆಲೆ- ೧—೪—೦.

೬. ಕಾವ್ಯಸಮೀಕ್ಷೆ

ಲೇಖಕರು:- ತೀ. ನಂ. ಶ್ರೀಕಂಠಯ್ಯ ಪ್ರಕಾಶಕರು- ಕಾವ್ಯಾಲಯ ಮೈಸೂರ, ಪುಟಗಳು- ೧೩೬, ಬೆಲೆ- ಸಾ. ಪ್ರ. ೨—೦—೦, ಕ್ಯಾ. ಪ್ರ. ೩—೮—೦.

೭. ಸ್ವಾತಂತ್ರ್ಯೋದಯ ಮಹಾಪ್ರಗಾಥಾ

ಲೇಖಕರು- ಕು. ವೆಂ. ಪು. ಪ್ರಕಾಶಕರು- ಕಾವ್ಯಾಲಯ ಮೈಸೂರ ಪುಟಗಳು ೨೦ ಬೆಲೆ- ೦—೮—೦.

೮. ಕಾಂಗ್ರೆಸ ಸೇವಾದಲಕಾ ಸಂಕ್ಷಿಪ್ತ ಇತಿಹಾಸ (ಹಿಂದಿ)

ಲೇಖಕ- ನಂದಕುಮಾರ ದೇವಾಶಿಷ್ಯ. ಪ್ರಕಾಶಕರು- (ರಾಷ್ಟ್ರೀಯ ಪ್ರಕಾಶನ ಮಂದಿರ ಲಖನೌ) ಸಂಯುಕ್ತ ಪ್ರಾಂತೀಯ ಕಾಂಗ್ರೆಸ ಕಮೀಟಿ, ಲಖನೌ.

೯. ಸದ್ಗುರು ಪಂಚಾಯತನ ಪದ್ಯಮಾಲಾ (ದ್ವಿತೀಯ ಭಾಗ)

ಲೇಖಕರು. ಆತ್ಮಾರಾಮ ಪ್ರಕಾಶಕರು- ಶ್ರೀ. ಆತ್ಮಾರಾಮ ಅಮ್ಮನಳ್ಳಿ ಇವರು. ಸೀಗೇಹಳ್ಳಿಯ ಪರಮಾನಂದ ಮಠ. ಪುಟಗಳು- ೮೦. ಬೆಲೆ ೧-೮-೦.

೧೦ ಯುಗಪುರುಷ [ಮಾಸಿಕ]

ಸಂಪಾದಕರು. ತ್ರಿಮೂರ್ತಿಗಳು. ಪ್ರಕಾಶಕರು. ಕೆ. ಎ. ಉಡುಪಾ, ಯುಗಪುರುಷ ಆಫೀಸ. ಉಡುಪಿ. ಪುಟಗಳು- ೩೦. ಬಿಡಿ ಸಂಚಿಕೆ- ೦-೪-೦ ವಾರ್ಷಿಕ ಚಂದಾ ೩-೦-೦.

೧೧. ಸುವರ್ಣಕೀಟ

ಲೇಖಕರು- ಎಂ. ಗೋಪಾಲಕೃಷ್ಣ ಅಡಿಗ ಪ್ರಕಾಶಕರು- ವಿಶ್ವಸಾಹಿತ್ಯ, ಮೈಸೂರ. ಪುಟಗಳು ೯೬, ಬೆಲೆ ೦-೧೨-೦.

೧೨. ಜೀವನ ಸಂಗ್ರಾಮ

ಲೇಖಕರು:- ಪಿ. ಶೀನಶೆಟ್ಟಿ, ಪ್ರಕಾಶಕರು ಕಿರಿಯರ ಪ್ರಪಂಚ, ಉಡುಪಿ. ಪುಟಗಳು. ೧೨೦. ಬೆಲೆ ೧-೮-೦.

೧೩ ಪ್ರಜಾಮತ

(ದೀಪಾಳಿಯ ವಿಶೇಷ ಸಂಚಿಕೆ)

ಅನೇಕ ವಿಖ್ಯಾತ ಲೇಖಕರ ಕತೆ ಕವಿತೆ ಲೇಖನಗಳಿವೆ. ಎಲ್ಲ ಲೇಖಗಳೂ ಚಿತ್ರಿತವಾಗಿರುವದು ಈ ಸಂಚಿಯ ವೈಶಿಷ್ಟ್ಯ ಸುಂದರ ತ್ರಿವರ್ಣರಂಜಿತ ಮುಖಚಿತ್ರದಿಂದ ಸುಶೋಭಿತವಾದ ಈ ಸಂಚಿಕೆಯು ಸುಮಾರು ೨೦೦ಪುಟಗಳಷ್ಟು ತೋರವಾಗಿದೆ. ಇಷ್ಟಿದ್ದೂ ಇದಕ್ಕಿಷ್ಟು ಬೆಲೆ! ಕೇವಲ ಒಂದೂ ಕಾಲು ರೂಪಾಯಿ.

ಸ್ವತಂತ್ರ ಹಿಂದುಸ್ತಾನದ ಮೊದಲ ಮುಂಗಡ ಪತ್ರಿಕೆ

[ಮೊದಲನೆ ಪುಟದಿಂದ]

ಯಿತು. ಸರಕಾರೀ ಉದ್ದಿಮೆ ಮತ್ತು ಖಾಸಗಿ ಉದ್ದಿಮೆಗಳು ಜೊತೆಜೊತೆಗೇ ಸಾಗುತ್ತ ದೇಶದಲ್ಲಿಯ ಪದಾರ್ಥಗಳ ಕೊರತೆಯನ್ನು ನೀಗಿಸಿ ಜನರ ಕೊಳ್ಳುವ ಶಕ್ತಿಯನ್ನು ಹಹಬಂದಿಗೆ ತರುವಂತಾದುದು ಸ್ತುತ್ಯವೇ ಆಗಿದೆ. ಮತ್ತು ಸ್ಪಷ್ಟವಾದ ವಾಣಿಯಿಂದ ಮಂತ್ರಿಗಳು— 'ಯಾವ ಕಾರಣದಿಂದಲೂ ವ್ಯಾಪಾರದ ಪ್ರಗತಿಯನ್ನು ತಡೆಯುವುದು ಸರಕಾರದ ಧೋರಣವಲ್ಲ; ವ್ಯಾಪಾರಾದಿಗಳಿಗೆ ಸಲ್ಲುವ ಉಚಿತಾಯುದ ಹಣಕ್ಕೆ 'ಸರಕಾರ ಅಡ್ಡಬರುವುದಿಲ್ಲ' — ಎಂದುದಕ್ಕೆ ವ್ಯಾಖ್ಯೆಯೇ ಬೇಡ. ಈ ಎಲ್ಲ ಸಂಗತಿಗಳನ್ನು ಗಮನಿಸಿದರೆ ಕೇಂದ್ರ ಸರಕಾರವಿಂದು ವಸ್ತುಸ್ಥಿತಿಯನ್ನು ಚೆನ್ನಾಗಿ ಅರಿತುಕೊಂಡು ಒಳ್ಳೆಯ ಬುದ್ಧಿವಂತಿಕೆಯುಂಥ ಮುಂಗಡ ಪತ್ರಿಕೆಯನ್ನು ತಯಾರಿಸಿದೆ ಎನ್ನಲು ಯಾವ ಅಡ್ಡಿಯೂ ಇಲ್ಲ.

ಪಾಲೆಸ್ತಾನದ ವಿಭಜನೆಯ ತೀರ್ಪು

ಸಂ. ರಾ. ಸಂಘದ ಸಾಮಾನ್ಯ ಸದಸ್ಯರ ಸಭೆಯಲ್ಲಿ ೧೩ ವಿರುದ್ಧ ಮತ್ತು ೩೩ ಅನುಕೂಲ ಮತಗಳಿಂದ ಪಾಲೆಸ್ತಾನವನ್ನು ವಿಭಜಿಸಬೇಕೆಂದು ತೀರ್ಮಾನಿಸಲ್ಪಟ್ಟಿತು. ಭಾರತ ಪಾಕಿಸ್ತಾನ ಮತ್ತು ಅರಬ ರಾಷ್ಟ್ರಗಳ ಸದಸ್ಯರು ಸಭಾತ್ಯಾಗ ಮಾಡಿದರು. ಮತ ಕೊಡುವಲ್ಲಿ ೧೦ ಜನ ಸದಸ್ಯರು ತಟಸ್ಥರಾಗಿದ್ದರೆಂದೂ ಒಬ್ಬರು ಹಾಜರಿರಲಿಲ್ಲವೆಂದೂ ತಿಳಿದು ಬಂದಿದೆ.

ವಿಭಜನೆಯನ್ನು ಸಭೆ ಅಂಗೀಕರಿಸಿದ ಬಳಿಕ ಸಿರಿಯದ ಫರಿಸ್ ಅಲ್ ಖೌರಿಯವರು, ಅರಬರು ಮತ್ತು ಪ್ರಪಂಚದ ಎಲ್ಲ ಮುಸಲ್ಮಾನರೂ ಇದನ್ನು ವಿರೋಧಿಸುವರೆಂದು ಸಾರಿದರು; ಮತ್ತು 'ಏಶಿಯದ ೧೦೦ ಕೋಟಿ ಜನರು ಇದನ್ನು ಪ್ರತಿಭಟಿಸುವರು' ಎಂದು ಗರ್ಜಿಸಿದರು. ಆದರೆ ಈ ತೀರ್ಪಿನಿಂದ ಯೆಹೂದಿಗಳಿಗೆ ಬಹಳ ಆನಂದವುಂಟಾಗಿದೆ.

ಮತಗಣನೆ ನಡೆದ ನಂತರ ಪಾಕಿಸ್ತಾನದ ಪ್ರತಿನಿಧಿಗಳಾದ ಸರ್. ಜಾಫರುಲ್ಲಾ ಖಾನರೆದ್ದು — 'ಅದೃಷ್ಟವಂತೂ ನಿರ್ಣಯವಾಯಿತು, ನಾವೆಲ್ಲರೂ ನ್ಯಾಯವಾವುದೆಂಬುದನ್ನು ಕೆಲ ಮಿತ್ರರಿಗೆ ಮನಗಾಣಿಸಿ ಕೊಟ್ಟೆವು. ಆದರೆ ಸಭೆ ಮಾತ್ರ ಬೇರೆಯ ದಾರಿಯನ್ನೇ ಹಿಡಿಯಿತು. ಇದರಿಂದ ನಮಗೆ ವ್ಯಥೆಯಾದರೂ ಮನಸ್ಸಿನಲ್ಲೇನೂ ಕ್ಲೇಶವುಂಟಾಗಲಿಲ್ಲ. ಆದರೆ ಈ ನಿರ್ಣಯವನ್ನು ಅಮಲಿನಲ್ಲಿ ತರಲು ನಿಯಮಿಸುವ ಸಮಿತಿಯ ಸದಸ್ಯರ ಆಯ್ಕೆಗೆ ಮಾತ್ರ ಪಾಕಿಸ್ತಾನ ಮತಕೊಡದು' ಎಂದು ನುಡಿದರು.

ಅಂತೂ ಮಧ್ಯಪೂರ್ವದಲ್ಲೊಂದು ಕೋಲಾಹಲವೇಳುವುದು ಖಂಡಿತವಾದಂತಾಯಿತು. ತೀರ್ಪನ್ನು ಅಮಲಿನಲ್ಲಿ ತರಲು ಯಾವ ಸಾಧನವನ್ನು ಬಳಸಲಾಗುವುದೆಂಬದಿನ್ನೂ ನಿರ್ಧಾರವಾಗಿಲ್ಲ. ಸಿಟ್ಟಿನಿಂದ ಸಿಡಿದೆದ್ದ ಅರಬ ರಾಷ್ಟ್ರಗಳ ಹಿಂಸಾತ್ಮಕ ವಿರೋಧವನ್ನೆದುರಿಸುವುದು ಸಾಧಾರಣದ ಸಂಗತಿಯಲ್ಲ. ಅರಬ ಲೀಗಿನ ಪ್ರಧಾನ ಕಾರ್ಯದರ್ಶಿಯಾದ ಅಬ್ದುಲ್ ರಹ್ಮಾನ ಅಜ್ಜಂ ಪಾಷಾರವರು ಕೊಟ್ಟ ಬೆದರಿಕೆಗಳನ್ನು ಗಮನಿಸಿ ನಕ್ಕೆ ಮತ್ತು ಯೆಹೂದಿಗಳ ಕ್ರಾಂತಿಕಾರಕ ಸತ್ತ್ವವನ್ನವಲೋಕಿಸಿದರೆ ಪಾಲೆಸ್ತಾನದಲ್ಲಿ ನಾಳೆ ಹರಿಯಬಹುದಾದ ರಕ್ತದ ಕಾಲವೆಯನ್ನೆಣಿಸಿ ಹೌಹಾರುವಂತಾಗುತ್ತದೆ. ಈ ಸಂದರ್ಭದಲ್ಲಿ ಸಂ. ರಾ. ಸಂಘವು ಅಗತ್ಯವಿರುವಷ್ಟು ಪ್ರಬಲ ಸುಂದಿನಾ ಬಲದಿಂದ ಗದಿಹಾಕಿಸಿ ಯೆಹೂದಿಗಳ ಸರಕಾರದ ಸ್ಥಾನಭದ್ರತೆಯನ್ನು ಕಾದುಕೊಡುವ ಹೊಣೆ ಹೊರದಿದ್ದರೆ ಗತ್ಯಂತರವಿಲ್ಲ.

ಫ್ರಾನ್ಸಿನಲ್ಲಿ ಕ್ರಾಂತಿ?

ಹಿಂದಿನ ರಮೋದಿಯರ ಮಂತ್ರಿಮಂಡಲ ಮುಳುಗಿ ರಾಬರ್ಟ್‌ಶೂಮನ್ ಎಂಬವರ ಮಂತ್ರಿಮಂಡಲ ರಚಿತವಾದದ್ದು ಸುವೇದ್ಯವಿದೆ. ಇಟಲಿ ಮೊದಲಾದ ದೇಶಗಳಲ್ಲಿರುವಂತೆ ಫ್ರಾನ್ಸಿನಲ್ಲಾದರೂ ಬಲವಾದ ಕಮ್ಯುನಿಸ್ಟ್ ಪಕ್ಷವಿದೆ. ಅದರ ಚಟುವಟಿಕೆಗಳಿಂದು ವಿಶೇಷ ಪ್ರಬಲವಾಗಿ ಫ್ರೆಂಚ ಮುಖ್ಯ ಮಂತ್ರಿಗಳಾದ ಶೂಮನ್ನರು ಫ್ರೆಂಚ ರಾಷ್ಟ್ರ ಸಭೆಯಲ್ಲಿ ತಮಗೆ ವಿಶೇಷ ಪೋಲೀಸು ಅಧಿಕಾರವನ್ನು ಕೊಡಬೇಕೆಂದು ಕೇಳಿದುದಾಗಿ ತಿಳಿದು ಬಂದಿದೆ. ಈ ಗಡಿಬಿಡಿಗೆ ಕಾರಣವೆಂದರೆ ಇಡೀ ದೇಶದ ತುಂಬೆಲ್ಲ ಮುಷ್ಕರ, ಚಳವಳ ಮುಂತಾದ ಚಟುವಟಿಕೆಗಳಿಂದ ಸರಕಾರವನ್ನು ಅಸ್ತವ್ಯಸ್ತಗೊಳಿಸಲು ಕಮ್ಯುನಿಸ್ಟರು ಪ್ರಯತ್ನಿಸುತ್ತಿರುವುದು.

ಫ್ರಾನ್ಸಿನ ಕೇಂದ್ರ ಕಲ್ಲಿದ್ದಲು ನಗರದಲ್ಲಿ ಪ್ರದರ್ಶಕರು ಹಿಂಡುಹಿಂಡಾಗಿ ಕೂಡಿದಾಗ ಪೋಲೀಸರು ಬಂದು ನಗರ ಸಭಾಂಗಣವನ್ನು ಅವರು ಪ್ರವೇಶಿಸದಂತೆ ತಡೆಯಲು ಅಶ್ರುವಾಯುವನ್ನು ಉಪಯೋಗಿಸಬೇಕಾಗಿ ಬಂದುದಲ್ಲದೆ ಅವರನ್ನು ಚದುರಿಸಲು ಮಿಲಿಟರಿ ಕೂಡ ಬರಬೇಕಾಯಿತು; ಅವರು ಬಂದು ಟ್ಯಾಂಕುಗಳ ಮೂಲಕ ದಾರಿ ಮಾಡಿಕೊಂಡು ಹೋಗಬೇಕಾಯಿತು.

ಮೇಲಿನಂತಹ ಅನೇಕ ಚಟುವಟಿಕೆಗಳು ಒಂದರ ಮೇಲೊಂದರಂತೆ ಸಾಗುತ್ತಿವೆ. ರಾಷ್ಟ್ರ ಸಭೆಯಲ್ಲಿ ಶೂಮನ್ನರು ಮಾತಾಡುತ್ತಿರುವಾಗ ಕಮ್ಯುನಿಸ್ಟರು ಶೂಮನ್ನರಿಗೆ ಧಿಕ್ಕಾರವೆಂದು ಭಯಂಕರ ಗೂಳಿ ಎಬ್ಬಿಸಿದರು. ಸಭೆ ಕೇವಲ ೧೫ ನಿಮಿಷಗಳ ವರೆಗೆ ಮಾತ್ರ ನಡೆಯಿತು.

ಸಭೆಯಲ್ಲಿ ಶೂಮನ್ನರು ತಮಗೆ ವಿಶೇಷ ಪೋಲೀಸು ಅಧಿಕಾರಬೇಕೆಂದೂ, ಮುಷ್ಕರದ ಕಾಯಿದೆಗಳನ್ನು ಪುನರ್ನಿರ್ಮಿಸಬೇಕೆಂದೂ ಕೆಲಸ ಮಾಡುವವರಿಗೆ ಅಡಚಣೆಯನ್ನುಂಟು ಮಾಡುವವರಿಗೆ ಪ್ರತಿಬಂಧಕವನ್ನುಂಟು ಮಾಡುವ ಕಾಯ್ದೆಗಳಾಗಬೇಕೆಂದೂ ೩ ಸೂಚನೆಗಳನ್ನು ಮುಂದಿಟ್ಟರು. ಇದರ ಮೇಲೆ ಸಭೆ ಮುಂಬರಿಯಿತು.

ಜನರೆಲ್ಲ ಶೂಮನ್ನರ ಆಕಾಶವಾಣಿ ಭಾಷಣವನ್ನೇ ಇದಿರು ನೋಡುತ್ತಿದ್ದಾರೆ. ಈ ಕಮ್ಯುನಿಸ್ಟ್ ಚಟುವಟಿಕೆಗಳು ಚತುರ್ಥ ಕ್ರಾಂತಿಯ ಮುನ್ನೆಚ್ಚರಿಕೆಯೋ? ಎಂಬ ಪ್ರಶ್ನೆ ಎಲ್ಲೆಲ್ಲೂ ಕೇಳಬರುತ್ತಿದೆ.

ಚಿಯಾಂಗರ ಸಾಹಸ

ಪೀಪಿಂಗ್, ಟೀಂಟ್ಸಿನ್ ಮತ್ತು ಪಾಟಿಂಗ ಪಟ್ಟಣಗಳ ನಡುವಣ ಪ್ರದೇಶಗಳಲ್ಲಿ ಕಮ್ಯುನಿಸ್ಟ ದಳಗಳು ಅತ್ಯುಗ್ರದಾಳಿಗಾರಂಭಿಸಿದ್ದರಿಂದ ಜನರಲ್ ಚಿಯಾಂಗ್ ಕೈಶೇಕರೇ ಸ್ವತಃ ದಂಡನಾಯಕತ್ವ ವಹಿಸಿ ಸಮರದ ಮುಂಚೂಣಿಯಲ್ಲಿ ಮುನ್ನುಗ್ಗಬೇಕಾಯಿತೆಂದು ಹೇಳಲಾಗಿದೆ. ಇಷ್ಟರೊಳಗೆ ಚಿಯಾಂಗರು ತಮ್ಮ ಅಧಿಕಾರಿಗಳಾದ ಜನರಲ್ ಫ್ಯೂ ಚೋಯಿ, ಜನರಲ್ ಲಿತ್ಸುಂಗ್ ಜಿಯೂ ಮತ್ತು ಜನರಲ್ ಸನ್ ಲಿಯಂಗ್ ಚೇನ್ ಎಂಬವರೊಡನೆ ಸಮಾಲೋಚನೆ ಮಾಡಿ ಮೇಲಿನ ನಿರ್ಧಾರಕ್ಕೆ ಬಂದರೆಂದು ಗೊತ್ತಾಗುತ್ತದೆ. ಯುಷ್ಕೀನ್, ತ್ಸಿಂಗ್ ತಾವ್ಹೋ, ಶಾಂಟಿಂಗ್ ಮುಂತಾದ ಪ್ರದೇಶಗಳ ಪಟ್ಟಣಗಳಲ್ಲಿ ಸರಕಾರೀ ದಲಗಳಿಗೂ ಕಮ್ಯುನಿಸ್ಟ್ ದಾಳಿಗಾರರಿಗೂ ಖಾಡಾ ಖಾಡಿ ನಡೆದಿದೆ. ಸದ್ಯ ಕಮ್ಯುನಿಸ್ಟ್ ದಲಗಳು ಇಚುವಾನ್ ನಗರವನ್ನು ಆಕ್ರಮಿಸಲು ಪ್ರಯತ್ನಿಸುತ್ತಿರುವದಾಗಿ ತಿಳಿಯುತ್ತದೆ. ಅಲ್ಲದೆ ಮಂಚೂರಿಯಾದ ಹಾರ್ಬಿನ್ನಿನಲ್ಲಿ ಸೇರಿ ಅವರು ವ್ಲಾಡಿವೋಸ್ಟಾಕಿನಲ್ಲೊಂದು ಅಂತರ್ ರಾಷ್ಟ್ರೀಯ ಸುದ್ದಿಸಂಸ್ಥೆಯನ್ನು ಐರೋಪ್ಯ "ಕಾಮಿನ್ ಫಾರ್ಮ"ನಂತೆ ಮಾದರಿಯಲ್ಲಿ ಸ್ಥಾಪಿಸಿದುದಾಗಿಯೂ ತಿಳಿಯುತ್ತದೆ. ಚಿಯಾಂಗರ ಸಾಹಸಕ್ಕೆ ವಿಜಯಲಕ್ಷ್ಮಿ ಒಲಿಯುವಳೋ ಇಲ್ಲವೋ ಎಂಬುದಿನ್ನೂ ದುರೂಹ್ಯವೆಂಬಂತಿದೆ.

ಇರಾನಿನ ಮಂತ್ರಿಗಳ ಗುಪ್ತ ಸಭೆ

ಇರಾನಿನ ಮುಖ್ಯಮಂತ್ರಿಯಾದ ಘವಾಮುಸ್ ಸುಲ್ತಾನೆಯವರು ಮಂತ್ರಿಮಂಡಲದ ಅವಸರದ ಗುಪ್ತ ಸಭೆಯನ್ನು ಕರೆದಿರುವರು. ರಶಿಯ ಜೊತೆಗೆ ಮಾಡಿಕೊಂಡ ಎಣ್ಣೆಯ ಒಪ್ಪಂದಕ್ಕೆ ಇರಾಣದ ಪಾರ್ಲಿಮೆಂಟು ಒಪ್ಪಿಗೆಕೊಡಲು ನಿರಾಕರಿಸಿದ್ದರಿಂದ ರಶಿಯ ಸಿಟ್ಟಿಗೆದ್ದು ಅದರ ಪ್ರಚಾರ ಮತ್ತು ಚಟುವಟಿಕೆಗಳಿಂದ ಬಿಕ್ಕಟ್ಟುಂಟಾಯಿತೆಂದು ಹೇಳಲಾಗಿದೆ. ಇದನ್ನು ಬಿಡಿಸಲು ಈ ಗುಪ್ತ ಸಭೆ ಸೇರಿದ್ದಾಗಿಯೂ ಈಗಿನ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಟ್ಟು ಇರಾನ ಪಾರ್ಲಿಮೆಂಟಿನ ಅಧ್ಯಕ್ಷರಾದ ಫಕ್ರುರ ಹಿಕಮತರು ಅವರ ಬದಲು ಮುಖ್ಯಮಂತ್ರಿಗಳಾಗುವುದಾಗಿಯೂ ಸುದ್ದಿಯಿದೆ. ಇದಲ್ಲದೆ ಇದೇ ವಿಷಯಕ್ಕಾಗಿ ಕಳೆದ ೩೦ ರಲ್ಲಿ ಇರಾನಿ ಪಾರ್ಲಿಮೆಂಟಿನ ಗುಪ್ತ ಸಭೆ ಕೂಡ ಸೇರಿದ್ದಾಗಿ ತಿಳಿಯುತ್ತದೆ. ಅಜರ್ ಬೈಜಾನಿನಲ್ಲಿದ್ದ ಧನಿಕರೆಲ್ಲರೂ ರಶಿಯಕ್ಕೆ ಹೊರಟುಹೋದುದರಿಂದ ಆ ಪ್ರಾಂತದ ಆರ್ಥಿಕ ಜೀವನವೇ ಕುಂಠಿತವಾಗಿದೆ. ಇರಾನಿನಲ್ಲಿ ಕಮ್ಯುನಿಸ್ಟ್ ಪಕ್ಷದ ಚಟುವಟಿಕೆ ಪ್ರಬಲವಾದದ್ದರಿಂದ ರಾಜಕೀಯ ವರ್ಗದಲ್ಲಿ ಮತ್ತಷ್ಟು ಗಾಬರಿಯಾಗಿದೆ. ಅಂತೂ ರಶಿಯದ ಬೀಯ ಕರಡಿಯ ಹಾವಳಿ ಮಧ್ಯಪೂರ್ವದಲ್ಲಿ ಜೋರಾಗಿ ನಡೆಯಬಹುದಾಗಿ ತೋರುತ್ತದೆ. ಎಣ್ಣೆಯ ರಾಜಕಾರಣ ಎಣ್ಣೆಯಷ್ಟು ನಯವಾಗಿಲ್ಲವೆಂಬದು ಸ್ಪಷ್ಟವಾಯಿತು. ರಶಿಯವಂತೂ ಹಿಡಿದ ಪಟ್ಟನ್ನು ಬಿಡುವಂತಿಲ್ಲ. ಅಂದ ಮೇಲೆ ಇರಾನೀ ಸರಕಾರ ಹೇಗಾದರೂ ಒಪ್ಪಂದಕ್ಕೆ ಒಪ್ಪಲೇಬೇಕಾಗಬಹುದೆಂದು ಊಹಿಸಲಾಗಿದೆ. ಪಾರ್ಲಿಮೆಂಟಾದರೂ ಪರಿಸ್ಥಿತಿಯ ಒತ್ತಾಯಕ್ಕೊಳಗಾಗಿ ಬಗ್ಗಿ ಬರುವ ಸೂಚನೆಯೇ ಹೆಚ್ಚು. ಹಾಗೆ ಮಾಡದೆ ಹೋದರೆ ರಶಿಯದ ಚಟುವಟಿಕೆಗಳನ್ನು ಬಗ್ಗುಬಡಿಯಲು ಆಂಗ್ಲೋ—ಅಮೇರಿಕನ್ನರ ಸಹಾಯವನ್ನು ಇರಾನಿನ ಸರಕಾರ ಯಾಚಿಸಬೇಕಾಗಿ ಬಂದು ದೇವದಾನವ ದ್ವಂದ್ವದ ಅಂತರರಂಗ ಚಿತ್ರವಂಕಾಗಬಹುದು.

ದ. ಆಫ್ರಿಕದ ಹಿಂದೀಯರ ಸಮಸ್ಯೆ

ತಾ ೨೦ ರ ರಾತ್ರಿ ಸೇರಿದ ಸಂ. ರಾ. ಸಂಘದ ಸಾಮಾನ್ಯ ಸಭೆಯೆದುರು ದ. ಆಫ್ರಿಕದ ಹಿಂದೀಯರ ಸಮಸ್ಯೆಯು ಚರ್ಚೆಗೆ ತೆಗೆದುಕೊಳ್ಳಲ್ಪಟ್ಟಿತು. ಚರ್ಚೆಯನ್ನು ದ. ಆಫ್ರಿಕದ ಪ್ರತಿನಿಧಿಯಾದ ಹ್ಯಾರಿ ಲಾರೆನ್ಸರು ಪ್ರಾರಂಭಿಸಿ, ದುಂಡು ಮೇಜಿನ ಪರಿಷತ್ತನ್ನು ಕರೆಯುವುದರ ಸಲುವಾಗಿ ದ. ಆಫ್ರಿಕ ಸರಕಾರವು ತಾನು ಒಪ್ಪಂದವನ್ನು ಮುರಿದುದಾಗಿಯೂ ಸಂ. ರಾ. ಸಂಘದ ಠರಾವಿಗೆ ಭಂಗ ತಂದುದಾಗಿಯೂ ಒಪ್ಪಿಕೊಳ್ಳಬೇಕೆಂಬುದಾಗಿ ಹಿಂದುಸ್ತಾನ ಸರಕಾರಕ್ಕೆ ಅಪೇಕ್ಷೆಯಿಲ್ಲವೆಂದು ಪ್ರಮಾಣ ಮಾಡಿ ಹೇಳಿರಿ. ಶ್ರೀ ವಿಜಯಲಕ್ಷ್ಮಿ ಪಂಡಿತರಿಗೆ ಆಹ್ವಾನವಿತ್ತರು; ಮತ್ತು ಆ ವಿಷಯವೆಲ್ಲ ದ. ಆಫ್ರಿಕದ ಗೃಹಕೃತ್ಯಕ್ಕೆ ಸಂಬಂಧಿಸಿದ್ದು ಅದರಲ್ಲಿ ಕೈಹಾಕಲು ಸಂ. ರಾ. ಸಂಘಕ್ಕೆ ಹಕ್ಕಿಲ್ಲವೆಂದು ಅವರು ವಾದಿಸಿದರು.

ಅನಂತರ ಬೆಲ್ಜಿಯಂ, ಬ್ರೆಜಿಲ್ ಕ್ಯೂಬ, ಡೆನ್ಮಾರ್ಕ ಮತ್ತು ನಾರ್ವೆ ದೇಶಗಳ ಪ್ರತಿನಿಧಿಗಳು ಒಂದು ಸಂಯುಕ್ತ ಗೊತ್ತುವಳಿಯನ್ನು ಮಂಡಿಸಿ ಅದರಲ್ಲಿ ಹಿಂದುಸ್ತಾನ (ಪಾಕಿಸ್ತಾನದೊಡನೆ) ದ. ಆಫ್ರಿಕ ಸರಕಾರಗಳು ಈ ಸಮಸ್ಯೆಯನ್ನು ದುಂಡು ಮೇಜಿನ ಪರಿಷತ್ತಿನಿಂದಾಗಲೀ ಮಧ್ಯಸ್ಥಿಕೆಯಿಂದಾಗಲಿ, ಸೌಹಾರ್ದದಿಂದಾಗಲಿ ಅಥವಾ ಇನ್ನಾವುದಾದರೊಂದು ನೇರ ದಾರಿಯಿಂದಾಗಲಿ ಬಗೆಹಸಿಕೊಳ್ಳತಕ್ಕದೆಂದೂ ಇವಾವುದರಿಂದಲೂ ಸಾಧ್ಯವಾಗದಿದ್ದಲ್ಲಿ ಅವು ಆ ಪ್ರಶ್ನೆಯನ್ನು ಸಂ. ರಾ. ಸಂಘದ ತತ್ವಪಟವನ್ನದ ಅಂತರಾಷ್ಟ್ರೀಯ ನ್ಯಾಯಾಲಯಕ್ಕೆ ಒಪ್ಪಿಸಿ ಅದರ ತೀರ್ಪಿನಂತೆ ನಡೆದುಕೊಳ್ಳಬೇಕುಎಂಬುದಾಗಿಯೂ ವಿಶದ ಪಡಿಸಿದರು. ಈ ಪ್ರಶ್ನೆ ಕಡೆಯದಾಗಿ ಬಗೆಹರಿಯಬೇಕಾದರೆ ಎರಡೇ ಮಾರ್ಗಗಳಿವೆ. ಒಂದೇ ಮೇಲೆ ಹೇಳಿದ ಘಟನಾತ್ಮಕ ಮಾರ್ಗದಲ್ಲಿ ತೀವ್ರಗತಿಯಿಂದ ಸಾಗುವದು. ಇಲ್ಲವೆ ಹಿಂದುಸ್ತಾನ ಸರಕಾರವು ಇನ್ನೂ ಹೆಚ್ಚು ಹೆಚ್ಚು ಉಗ್ರವಾದ ಆರ್ಥಿಕ ಸಾಮಾಜಿಕ ಮುಂತಾದ ಬಹಿಷ್ಕಾರಗಳನ್ನು ಹಾಕಿ ರಾಜ ತಂತ್ರ ಜಾಲದಲ್ಲಿ ದ. ಆಫ್ರಿಕದ ಬಿಳಿಯರನ್ನು ಸಂಧಿಸಾಧಿಸಿ ಹಿಡಿದು ಹಾಕುವುದು. ಇವೆರಡನ್ನು ಬಿಟ್ಟರೆ, ಸ್ವತಃ ಸಮ್ಮದ್ಧಿಯಿಂದ ದ. ಆಫ್ರಿಕದ ಸ್ಮಟ್ಸ ಸರಕಾರವು ನ್ಯಾಯಾನ್ಯಾಯ ವಿವೇಕದಿಂದ ವರ್ತಿಸುವುದೆಂಬುದು ದುರೂಹ್ಯ.

ಡಚ್ ವಿಶ್ವವಿದ್ಯಾಲಯದಲ್ಲಿ ಫೆಲೋಶಿಪ್

ಡಚ್ ವಿಶ್ವವಿದ್ಯಾಲಯ ಇಲ್ಲವೆ ಹೈಸ್ಕೂಲಿನಲ್ಲಿ ಓದುವವರಿಗೆ ಡಚ್ ಸರಕಾರವು ಒಟ್ಟು ಐದು ಫೆಲೋಶಿಪ್ಪಿಗೆ ಅವಕಾಶ ಕೊಟ್ಟಿದೆ. ಅವರಲ್ಲಿ ಹಿಂದುಸ್ತಾನಕ್ಕೆ ಯುನೆಸ್ಕೋ (ಸಂ. ರಾ. ಸಂಘದ ವಿದ್ಯೆ, ವಿಜ್ಞಾನ ಮತ್ತು ಸಂಸ್ಕೃತಿ ಸಂಸ್ಥೆ) ದ ಮೂಲಕ ಒಂದು ದೊರೆತಿದೆ. ಫೆಲೋಶಿಪ್ಪಿಗೆ ಪುಕ್ಕಟೆ ಪಾಠ, ವಸತಿ ಮತ್ತು ಊಟಗಳು ಸೇರಿವೆ. ಪ್ರಯಾಣ ಖರ್ಚು ಮತ್ತು ಇತರ ವೆಚ್ಚಗಳನ್ನು ಕೊಡಲಾಗುವುದಿಲ್ಲ. ಅರ್ಜಿ ಹಾಕುವವರು ತಮಗೆ ತಕ್ಕ ಮಟ್ಟಿಗೆ ಡಚ್ ಭಾಷೆ ಬರುವದೆಂಬುದನ್ನು ಡಚ್ ಅಧಿಕಾರಿಗಳಿಗೆ ಮನಗಾಣಿಸಿಕೊಡಬೇಕು. ಆರಿಸಲ್ಪಟ್ಟ ವ್ಯಕ್ತಿಯು ತಾನು ತನ್ನ ಕರಬೇಕನ್ನು ತನ್ನ ದೇಶದ ಧನಸ್ತ್ರಿಸೆಗಾಗಿ ಕಡೆಯ ಪಕ್ಷ ೩ ವರ್ಷಗಳ ಕಾಲ ಬಳಸುವೆನೆಂಬುದಾಗಿ ಬರೆದು ಕೊಡತಕ್ಕದ್ದು. ಅದರ ಜೊತೆಗೆ ಸರಕಾರದ ಅಲ್ಲದೆ ಸಂಸ್ಥೆಯ ಒಂದು ಪತ್ರವು ೮ ಅಪೇಕ್ಷಕನ [illegible] ಗಳಿಗೆ ಬರುವುದೆಂಬುದನ್ನು ರುಜುವಾತು [illegible] ಬೇಕು. ಅಪೇಕ್ಷಿತ ಪತ್ರಗಳನ್ನು [illegible] ಕ್ಕೋಸ್ಕರ ಹಿಂದುಸ್ತಾನ ಸರಕಾರದ ವಿದ್ಯಾ [illegible] ವಿಭಾಗದಿಂದ ಪಡೆಯಬಹುದು.

ಪಶ್ಚಿಮ ಜರ್ಮನಿಯ ಪರಿಸ್ಥಿತಿ

[illegible]

[illegible]

ಭಾರತದಲ್ಲಿ ಅಮೇರಿಕೆಯ ರಾಯಭಾರಿ [illegible] ಗ್ರೇಡಿಯವರು [illegible]

...ಂದುಸ್ತಾನ--ಹೈದರಾಬಾದ ಯಥಾಸ್ಥಿತಿ ಒಪ್ಪಂದ

...ಹೈದರಾಬಾದ ಸರಕಾರದ ಚಟುವಟಿಕೆಗಳು ...ದು ಹಿಂದುಸ್ತಾನದಲ್ಲಿ ಎಲ್ಲರ ಲಕ್ಷ್ಯವನ್ನೂ ...ದುಕೊಂಡಿವೆ. ಸಂಸ್ಥಾನದ ಒಳನಾಡಿನಲ್ಲಿ ಕಲ್ಪ...ತೀತ ದಬ್ಬಾಳಿಕೆ ನಡೆದಿದೆ. ಸಂಸ್ಥಾನ ಸರಕಾ... ಪ್ರತಿಗಾಮೀ ಶಕ್ತಿಗೆ ಮಾರುವೋಗಿ ಘಾತ... ಪ್ರೋತ್ಸಾಹಿಸುವ ದೃಶ್ಯ, ಮುಚ್ಚುಮರೆ...ದೆ ಕಾಣಿಬಿಟ್ಟಿದೆ. ಹಿಂದುಸ್ತಾನ ಸರಕಾರದೊ... ಒಪ್ಪಂದದ ಮಾತುಕತೆ ನಡೆದಾಗಲೇ ಈ ...ನದ ಆಂತರಿಕ ಪರಿಸ್ಥಿತಿಯು ... ಹಿಂದೀಯರಿಗೆ ಹೀಗೆ ಭಯಾನಕವಾಗಿ...ತಿದೆ. ಈ ಒಪ್ಪಂದದ ಮಾತುಕತೆ ಸಹ ಒಂದು ...ತುಗಳ ಅಟೆದಂತೆ ಮುರಿದು ಮತ್ತೆ ಮೊದಲಿನ... ೨೯ ರಂದು ಮಧ್ಯಾನ್ಹದ ೧೨-೪೦ ಕ್ಕೆ ...ತೂ ಒಮ್ಮೆ ಕೊನೆಗಂಡಿತು. ಹಿಂದುಸ್ತಾ...ಪರವಾಗಿ ಈ 'ಯಥಾಸ್ಥಿತಿ' ಒಪ್ಪಂದಕ್ಕೆ ...ರ್ಡ ಮೌಂಟಬ್ಯಾಟನ್ನರು ಅಂಕಿತವಿಟ್ಟರು.

ಈ ಒಪ್ಪಂದವು ಭಯಾತ್ಮಿಯುವರ ಕರಡಿನಂ...ರ ಇದೆ. ಉದ್ದವಾಗಿ ನಡೆದ ಈ ಸಂಧಾನದ ...ಮಾತುಕತೆಗಳಲ್ಲಿ ಹಿಂದುಸ್ತಾನ ಸರ್ಕಾರವು ತುಂಬ ...ಯಿಂದ ಭಾಗವಹಿಸಿದೆ ಎಂಬ ಮಾತು ...ಮಹತ್ವದ್ದು. ಯಾಕಂದರೆ ನಿಜಾಮರು ಈ ...ದುವಲ್ಲಿ ಲಾರ್ಡ ಮೌಂಟಬ್ಯಾಟನ್ನರಿಗೆ ಬರೆದ ...ಪತ್ರದಲ್ಲಿ, ಪರಸ್ಪರರ ಪ್ರದೇಶಗಳಲ್ಲಿಯ...ಂಸಕ ಚಟುವಟಿಕೆಗಳನ್ನು ಮತ್ತು ಪ್ರಚಾ...ನ್ನು ಎರಡೂ ಸರಕಾರಗಳು ತಡೆಯಬೇಕೆಂದೂ ...ತಿ ಮತ ಪಂಥಗಳ ಪಕ್ಷಪಾತವಿಲ್ಲದೆ ತಾವು ಎಲ್ಲ ...ಗಳನ್ನು ರಕ್ಷಿಸುವ ಆಶ್ವಾಸನ ಕೊಡುವೆ...ಎಂದು ಬರೆದು ತಿಳಿಸಿದ್ದರೂ ಅವರ ರಾಜ್ಯದಲ್ಲಿ ...ಕಳೆ ಸಾಗಿಯೇ ಇತ್ತು. ಇರಲಿ.

ಒಪ್ಪಂದದ ಹುರುಳು

ಒಪ್ಪಂದದನ್ವಯ ನಿಜಾಮರಿಗೆ ವಿದೇಶ ...ಏಜೆಂಟ ಜನರಲ್ಲರನ್ನು ನಿಯಮಿಸುವ ಅಧಿ...ದೊರೆತಿದೆ. ಬ್ರಿಟಿಶರಿದ್ದಾಗಲೂ ನಿಜಾಮ...ಈ ಅಧಿಕಾರವಿತ್ತು. ಈ ಏಜೆಂಟರು ಮೊದ...ಕೆಯೇ ಆರ್ಥಿಕ ಮತ್ತು ವ್ಯಾಪಾರ ವಿಷಯ...ನ್ನು ಮಾತ್ರ, ಅದೂ ಹಿಂದುಸ್ತಾನದ ಪ್ರತಿನಿ... ಮೇಲ್ವಿಚಾರಣೆಯಲ್ಲಿ ನೋಡತಕ್ಕದ್ದು. ...ದೆ ಶಗಳಲ್ಲಿ ಶಸ್ತ್ರಗಳನ್ನು ಕೊಂಡುಕೊಳ್ಳಲು ...ಮರಿಗೆ ಅಧಿಕಾರವಿಲ್ಲ. ಈ ವಿಷಯದಲ್ಲಿ ...ಸ್ತಾನವೇ ಅವರ ನ್ಯಾಯವಾದ ಬೇಡಿಕೆ ...ಪೂರೈಸುವದು.

...ರ್ಚ ತಂತಿ ಹಾಗೂ ಟೆಲಿಫೋನ ಇವುಗಳ ...ಮ ಬಗ್ಗೆ ಹೊಸದಾಗಿ ಮಾತುಕತೆ ನಡೆ...ತು.

...ಸ್ತಾನ ಸರಕಾರದ ಅಧಿಕಾರಿಗಳಿಗೆ ಬೇರೆ ...ಕಲ್ಪಿಸಿಕೊಟ್ಟ ... ರಿಯಾಯಿತಿಗಳನ್ನು ...ರಿಗೆ ಕೊಡಲಾಗುವದು.

...ಟು ಮತ್ತು ನಾಣ್ಯಗಳ ವಿಷಯವನ್ನು ಈ ...ದ ಕಕ್ಷೆಯಲ್ಲಿ ತಂದಿಲ್ಲ. ಮೊದಲಿನಂತೆ ...ದ ನಾಣ್ಯ ನಡೆಯುವವು.

...ದರಾಬಾದದಲ್ಲಿರುವ ತನ್ನ ಸೈನ್ಯವನ್ನು ...ಸ್ತಾನವು ಫೆಬ್ರುವರಿ ಒಳಗಾಗಿ ಹಿಂತೆಗೆದು...ವದು.

...ಮರು ತಾವು ಪಾಕಿಸ್ತಾನದಲ್ಲಿ ಸೇರು...ದೆಂದೂ ಅಭಿಮತ ವ್ಯಕ್ತಮಾಡಿರುವರು.

ಒಪ್ಪಂದದ ಕರಾರುಗಳು

...ಂದದ ಕರಾರುಗಳ ವಿವರಗಳ ಪೂರ್ತಿ...ಗಿರುವದು.

...ಂದುಸ್ತಾನದ ಮತ್ತು ಹೈದರಾಬಾದ ...ರ ನಡುವೆ ೧೯೪೭ ನವೆಂಬರ ೨೯ ನೆಯ ...ಗಿನಂತೆ ಒಪ್ಪಂದವಾಯಿತು.

...ರಸ್ಪರರ ಹಿತದ ಸಲುವಾಗಿ ಸಹಕಾರ ... ಸ್ನೇಹದಿಂದ ಕಾರ್ಯಮಾಡುವದು ಹಿಂದು... ಮತ್ತು ಹೈದರಾಬಾದ ಹಾಗೂ ನರ್ಮದದ(?) ... ಸರಕಾರಗಳ ಉದ್ದೇಶ ಹಾಗೂ ...ವಿಸುವದರಿಂದ, ಉಭಯತರಲ್ಲಿ ಶಾಶ್ವತ ... ಇನ್ನೂ ಸಾಧ್ಯವಾಗದ್ದರಿಂದ ಮತ್ತು ...ಒಪ್ಪಂದವಾಗುವವರೆಗೆ ಈಗಿನ ಒಪ್ಪಂದ ... ಆಡಳಿತೆಗಳ ವ್ಯವಸ್ಥೆಯನ್ನು ಉಳಿಸಿ...ದು ಉಭಯ ಪಕ್ಷಗಳ ಹಿತಕ್ಕನು...ಗಿರುವದರಿಂದ ಈ ರೀತಿ ಒಪ್ಪಿಕೊಳ್ಳ...

...ಂ ೧: ೧೯೪೭ ಅಗಸ್ಟ ೧೫ರ ಮೊದಲು ...ಮತ್ತು ನಿಜಾಮ ಸರಕಾರಗಳ ನಡುವೆ ... ವಿದೇಶ ವ್ಯವಹಾರ, ಸಂಪರ್ಕ ಮೊದ...ಗಳಿಗಾಗಿ(?) ...ಗೆಂದು ... ವಿಷಯ ...ವ್ಯವಸ್ಥೆಯೇ ಇನ್ನು ಮುಂದೆ ಹೊಸ ...

ಹೈದರಾಬಾದ ಸರಕಾರಗಳ ನಡುವೆ ಉಳಿಯು...ವದು.

(೧) ಈ ಒಪ್ಪಂದವಾಗಿದ್ದರೂ ಹೈದರಾಬಾದದ ಆಂತರಿಕ ಶಾಂತಿಸ್ಥಾಪನೆಗಾಗಿ ನಿಜಾಮರ ಸಹಾಯಕ್ಕೆ ಸೈನ್ಯ ಕಳಿಸುವ ಹೊಣೆ ಅಥವಾ ಹಕ್ಕು ಮತ್ತು (೨) ಯುದ್ಧ ಕಾಲದಲ್ಲಿಯಲ್ಲದೆ ಇನ್ನಿತರ ಸಮಯದಲ್ಲಿ ಸಂಸ್ಥಾನದಲ್ಲಿ ಹಿಂದೀ ಸೈನ್ಯವಿಡುವ ಹೊಣೆ ಅಥವಾ ಹಕ್ಕು ಹಿಂದುಸ್ತಾನ ಸರಕಾರಕ್ಕೆ ಪ್ರಾಪ್ತವಾಗಲಾರದು. ಈ ಯುದ್ಧ ಕಾಲದಲ್ಲಿ ಹೈದರಾಬಾದದಲ್ಲಿಟ್ಟ ಸೈನ್ಯವನ್ನು ಯುದ್ಧ ನಿಂತ ಆರು ತಿಂಗಳಲ್ಲಿ ಹಿಂತೆಗೆದುಕೊಳ್ಳಲಾಗುವದು.

ಕಲಮು ೨: ಈ ಒಪ್ಪಂದವನ್ನು ಯಶಸ್ವಿಯಾಗಿ ಕಾರ್ಯಕಾರಿ ಮಾಡುವಂತೆ ಹೈದರಾಬಾದ ಮತ್ತು ದಿಲ್ಲಿಯಲ್ಲಿ ತಂತಮ್ಮ ಏಜೆಂಟ ಜನರಲ್ಲರನ್ನು ನೇಮಿಸಲು ಹಿಂದುಸ್ತಾನ ಮತ್ತು ಹೈದರಾಬಾದ ಸರಕಾರಗಳು ಒಪ್ಪುತ್ತವೆ.

ಕಲಮು ೩: (೧) ಈ ಒಪ್ಪಂದವು ಪರಿಷ್ಠಾಧಿಕಾರಕ್ಕೆ ಬಾಧೆ ತರಲಾರದು ಹಾಗೂ ಪರಿಷ್ಠಾಧಿಕಾರದ ಹೊಸ ಸಂಬಂಧ ಸ್ಥಾಪಿಸಲಾರದು. (೨) ಈ ಒಪ್ಪಂದದ ಅವಧಿ ಮುಗಿದನಂತರ ಈ ಒಪ್ಪಂದ ಹಾಗೂ ಅದರನ್ವಯ ಕೈಕೊಂಡ ಉಪಾಯಗಳು ಯಾರೊಬ್ಬರ ಹಿತಕ್ಕಾಗಿ ಅಥವಾ ಹಕ್ಕು ಕಸಿದುಕೊಳ್ಳಲು ಮಾಡಲ್ಪಟ್ಟಿತ್ತೆಂದು ತಕರಾರು ಮಾಡತಕ್ಕದಲ್ಲ.

ಕಲಮು ೪: ಈ ಒಪ್ಪಂದದ ಬಗ್ಗೆ ತಂಟೆಗಳು ಉಂಟಾದರೆ ಉಭಯತರೂ ಒಬ್ಬೊಬ್ಬರನ್ನು ನಿಯಮಿಸಿ ಈ ಇಬ್ಬರು ಮಧ್ಯಸ್ಥರ ನಿರ್ಣಯಕ್ಕೆ ಒಪ್ಪಿಸಬೇಕು. ಆ ಇಬ್ಬರು ಮಧ್ಯಸ್ಥರು ಓರ್ವ ನಿರ್ಣಾಯಕನನ್ನು ಆರಿಸಿಕೊಳ್ಳಬೇಕು.

ಕಲಮು ೫: ಈ ಒಪ್ಪಂದ ಕೂಡಲೆ ಅಸ್ತಿತ್ವದಲ್ಲಿ ಬಂದು ಒಂದು ವರ್ಷ ಇರತಕ್ಕದ್ದು.

ಈ ಕರಾರುಗಳನ್ನೊಪ್ಪಿ ಹಿಂದುಸ್ತಾನದ ಗವ್ಹರ್ನರ ಜನರಲ್ ಮತ್ತು ಹೈದರಾಬಾದ ನಿಜಾಮರು ಅಂಕಿತವಿಟ್ಟಿದ್ದಾರೆ.

ಮೀರ ಉಸ್ಮಾನ ಅಲಿಖಾನ
(ಹೈದರಾಬಾದ ಮತ್ತು ವರ್ಹಾಡ ನಿಜಾಮರು)
ಮೌಂಟಬ್ಯಾಟನ್ ಆಫ್ ಬರ್ಮಾ
(ಹಿಂದುಸ್ತಾನದ ಗವ್ಹರ್ನರ ಜನರಲ್)

ನಿಜಾಮ ಮೌಂಟಬ್ಯಾಟನ್ ಪತ್ರವ್ಯವಹಾರ

ಹೈದರಾಬಾದ ಹಿಂದುಸ್ತಾನಗಳ ನಡುವೆ ಯಥಾಸ್ಥಿತಿ ಒಪ್ಪಂದಕ್ಕೆ ಸಹಿ ಹಾಕುವ ಮೊದಲು ಹೈದರಾಬಾದ ನಿಜಾಮರ ಹಾಗೂ ಹಿಂದುಸ್ತಾನದ ಗವ್ಹರ್ನರ ಜನರಲ್ ಲಾರ್ಡ ಮೌಂಟಬ್ಯಾಟನ್ನರ ನಡುವೆ ಪತ್ರವ್ಯವಹಾರ ನಡೆದಿತು. ಅದರ ಸಾರಾಂಶ ಹೀಗೆ:

ನಿಜಾಮರ ಪತ್ರ

ಹೈದರಾಬಾದ ಮತ್ತು ಹಿಂದುಸ್ತಾನ ಸರಕಾರಗಳ ಸಂಬಂಧದ ವಿಷಯದಲ್ಲಿ ಕಾಯಂ ಸ್ವರೂಪದ ಒಡಂಬಡಿಕೆಯಾಗಲಿಲ್ಲವೆಂದು ವಿಷಾದವಾಗುತ್ತದೆ. ಹಿಂದುಸ್ತಾನ ಅಥವಾ ಪಾಕಿಸ್ತಾನ ಎರಡರಲ್ಲಿ ನಾನು ಸೇರುವದಿಲ್ಲ. ಘಟನಾತ್ಮಕ ಸಂಬಂಧದ ಚರ್ಚೆಯಲ್ಲಿ ಕಾಲಹರಣ ಮಾಡುವದಕ್ಕಿಂತ ಎರಡೂ ಸರಕಾರಗಳು ಆಡಳಿತೆಯ ಸಮಸ್ಯೆಗಳನ್ನು ಎದುರಿಸುವಲ್ಲಿ ಲಕ್ಷ್ಯ ಹಾಕಬೇಕೆಂದು ಹಾರೈಸುತ್ತೇನೆ. ಯಥಾಸ್ಥಿತಿ ಒಪ್ಪಂದದ ಒಂದು ವರ್ಷದ ಅವಧಿಯಲ್ಲಿ ನಮ್ಮ ಸಂಬಂಧವು ಸ್ನೇಹಪೂರ್ಣವಾಗಿ ಕಂಡರೆ ದೀರ್ಘಾವಧಿ ಸಂಬಂಧದ ವಿಷಯವಾಗಿ ನಾವು ಆ ಮೇಲೆ ಸಮಾಧಾನಕಾರಕ ಒಪ್ಪಂದವನ್ನು ಮಾಡಿಕೊಳ್ಳಬಹುದು.

ಸಾರ್ವಭೌಮತ್ವ

ಯಥಾಸ್ಥಿತಿ ಒಪ್ಪಂದಕ್ಕೆ ಸಹಿಹಾಕಿದ ಮಾತ್ರಕ್ಕೆ ನಾನು ನಿರಂತರ ನನ್ನ ಸಾರ್ವಭೌಮತ್ವಕ್ಕೆ ಬಾಧೆ ತಂದುಕೊಂಡೆನೆಂದು ತಿಳಿಯಲಾಗದು. ಆದರೆ ಒಪ್ಪಂದದ ಅವಧಿಯಲ್ಲಿ ನನ್ನ ಕೆಲವೊಂದು ಹಕ್ಕುಗಳನ್ನು ಬಿಟ್ಟುಕೊಡಬೇಕಾಗುವದೆಂಬುದನ್ನು ನಾನು ಒಲ್ಲೆ.

ವಿದೇಶದಲ್ಲಿ ರಾಯಭಾರಿಗಳು

ಇಂಗ್ಲಂಡ ಅಥವಾ ಬೇರೆ ದೇಶಗಳಲ್ಲಿ ಹೈದರಾಬಾದದ ಏಜೆಂಟ ಜನರಲ್‌ರನ್ನು ನೇಮಿಸಬಹುದೆಂದು ನಿಮ್ಮ ಸರಕಾರವು ಒಪ್ಪಿದರೆ ಮಾತ್ರ ನಾನು ಒಪ್ಪಂದಕ್ಕೆ ಸಹಿ ಹಾಕುತ್ತೇನೆ. . . . ಯಾರನ್ನು ಎಲ್ಲಿ ನೇಮಿಸುವೆನೆಂಬುದನ್ನು ನಿಮಗೆ ಮೊದಲೆ ತಿಳಿಸುವೆನು. . . . ಹೈದರಾಬಾದದ ರಿಸಿಡೆನ್ಸಿ ಕಚೇರಿಯನ್ನು ನನಗೆ ಒಪ್ಪಿಸಬೇಕು. . ನಾಣ್ಯ, ಅಂಚೆ ... ಮೊದಲಾದ ವಿಷಯಗಳಲ್ಲಿ ...

ನನಗಿದ್ದ ಅಧಿಕಾರವು ಯಥಾಸ್ಥಿತಿ ಒಪ್ಪಂದದಿಂದ ಯಾವ ದೃಷ್ಟಿಯಿಂದಲೂ ಬಾಧಿತವಾಗಲಾರದು. ಯಾವ ದೃಷ್ಟಿಯಿಂದ ನನ್ನ ಸರಕಾರದ ಅನುಕೂಲತೆಯ ದೃಷ್ಟಿಯಿಂದ ನನ್ನ ಸರಕಾರದ ಪ್ರಧಾನ ಕಾರ್ಯದರ್ಶಿಯು ಹೈದರಾಬಾದ ಪ್ರಜೆಗಳಿಗೆ ಕೊಟ್ಟ ಸಾಗರೋತ್ತರ ಪ್ರವಾಸದ ಅನುಜ್ಞೆಗೆ ನಿಮ್ಮ ಸರಕಾರವು ತನ್ನ ಮುದ್ರೆ ಹಾಕಬೇಕು.

ಪರಸ್ಪರರ ಪ್ರದೇಶಗಳಲ್ಲಿ ವಿಧ್ವಂಸಕ ಚಟುವಟಿಕೆಗಳನ್ನು ಮತ್ತು ಪ್ರಚಾರವನ್ನು ಎರಡೂ ಸರಕಾರಗಳು ತಡೆಯಬೇಕು. ಜಾತಿ ಮತ ಪಂಥಗಳ ಪಕ್ಷಪಾತವಿಲ್ಲದೆ ನಾನು ಎಲ್ಲ ಪ್ರಜೆಗಳನ್ನೂ ರಕ್ಷಿಸುವವನಾಗಿ ಸಾರುತ್ತ ಬಂದಿದ್ದೇನೆ. ಈ ಬಗ್ಗೆ ಮತ್ತೊಂದು ಫರ್ಮಾನನ್ನು ಹೊರಡಿಸುತ್ತೇನೆ.

ಲಾರ್ಡ ಮೌಂಟಬ್ಯಾಟನ್ನರ ಪತ್ರ

ನಿಮ್ಮ ಪತ್ರಕ್ಕಾಗಿ ಉಪಕೃತ. ಪಾಕಿಸ್ತಾನ ಸೇರುವ ಇಚ್ಛೆ ನಿಮಗಿಲ್ಲೆಂಬುದನ್ನು ಓದಿದೆವು. ಹಿಂದುಸ್ತಾನಕ್ಕೆ ಸೇರಲು ನಿಮಗೆ ಅಶಕ್ಯವೆನಿಸಿದುದನ್ನು ಕಂಡು ವಿಷಾದವಾಗುತ್ತದೆ. ಸಂಸ್ಥಾನಗಳ ಪರಿಷ್ಠಾಧಿಕಾರಕ್ಕೆ ಬಾಧೆ ತರದೆ ಅವುಗಳೊಡನೆ ಸರಿಸಮಾನ ಸಂಬಂಧವಿಟ್ಟುಕೊಂಡು ಕಾರ್ಯ ನಡೆಸಲಾಗುವದೆಂದು ನಾನು ಮತ್ತು ಸಂಸ್ಥಾನಖಾತೆಯ ಮಂತ್ರಿಗಳು ಸಾರಿದ್ದೇವೆ. . . ಅಂಚೆ, ತಂತಿ, ಟೆಲಿಫೋನ ಖಾತೆಯನ್ನು ನಿಮಗೆ ಒಪ್ಪಿಸಿಕೊಡುವ ವಿಷಯದಲ್ಲಿ ನನ್ನ ಸರಕಾರವು ಚರ್ಚಿಸುವದು. ಅದರಂತೆ ಹೈದರಾಬಾದ ಸೈನ್ಯದ ಪ್ರಮಾಣದ ಬಗ್ಗೆಯೂ ಚರ್ಚೆ ಮಾಡುವದು. ನಿಮಗೆ ನ್ಯಾಯವಾಗಿ ಬೇಕಾಗುವಷ್ಟು ಶಸ್ತ್ರಾಸ್ತ್ರಗಳನ್ನು ಪೂರೈಸಲು ನನ್ನ ಸರಕಾರದ ಸಿದ್ಧತೆಯಿದೆ. ನೀವು ವಿದೇಶದಲ್ಲಿ ನಿಮ್ಮ ಏಜಂಟರನ್ನು ನಿಯಮಿಸಿಕೊಳ್ಳಬಹುದು. . . . . ರೆಸಿಡೆನ್ಸಿ ಕಚೇರಿಯನ್ನು ಹೈದರಾಬಾದಕ್ಕೆ ಒಪ್ಪಿಸಲಾಗುವದು. ಫೆಬ್ರುವರಿ ೧೯೪೮ ರ ಒಳಗಾಗಿ ಕ್ರಮೇಣ ಹೈದರಾಬಾದದಿಂದ ಹಿಂದೀ ಸೈನ್ಯ ಹಿಂತೆಗೆದುಕೊಳ್ಳಲಾಗುವದು. ನಿಮ್ಮ ನಾಣ್ಯ ಮತ್ತು ಅಂಚೆಯ ವಿಷಯಕ ಅಧಿಕಾರಗಳು ಅಬಾಧಿತ ಉಳಿಯುವವು. ಪಾಸಪೋರ್ಟ ವಿಷಯದಲ್ಲಿ ನೀವು ಹೇಳಿದುದಕ್ಕೆ ನಮ್ಮ ಒಪ್ಪಿಗೆಯಿದೆ. ಜಾತೀಯ ಐಕ್ಯ, ಶಾಂತಿ, ಸುವ್ಯವಸ್ಥೆಗಳು ಸ್ಥಾಪಿತವಾಗಬೇಕೆಂದು ನನ್ನ ಸರಕಾರದ ಇಚ್ಛೆ ಇದೆ. ಈ ಗುರಿ ಸಾಧಿಸಲು ಅದು ನಿಮಗೆ ಸಹಕಾರ ನೀಡುವದು. ಒಪ್ಪಂದಕ್ಕೆ ಅಂಕಿತವಿಟ್ಟು ಅದನ್ನು ಇದರ ಜೊತೆಗೆ ಕಳಿಸಿದ್ದೇನೆ.

ಹೈದರಾಬಾದ ನಡುಗಾಲ ಸರಕಾರ

ಹೈದರಾಬಾದದ ನಡುಗಾಲ ಸರಕಾರದ ಯೋಜನೆಯಿಂದ ಈ ಸಂಸ್ಥಾನ ಕಾಂಗ್ರೆಸಿಗೆ ಎಳ್ಳಷ್ಟೂ ಸಮಾಧಾನವಾಗಿಲ್ಲ. ಹೈದರಾಬಾದದಲ್ಲಿ ಹಿಂದುಗಳ ಸಂಖ್ಯೆ ನೂರಕ್ಕೆ ೮೫ ರಷ್ಟು ಇದ್ದರೂ ನಡುಗಾಲ ಸರಕಾರದ ಮಂತ್ರಿಮಂಡಲದ ೧೨ ಜನಗಳಲ್ಲಿ ಹಿಂದುಗಳಿಗೆ ಕೇವಲ ೫ ಸ್ಥಳಗಳೇ ದೊರಕಿವೆ. ಅಂದರೆ ನೂರಕ್ಕೆ ೧೫ ರಷ್ಟಿದ್ದ ಮುಸಲ್ಮಾನರಿಗೆ ೭ ಸ್ಥಳ ಸಿಕ್ಕಿವೆ. ಪ್ರಜಾಪ್ರಭುತ್ವದ ತತ್ವಕ್ಕೆ ಇದು ತೀರ ವಿಘಾತಕವೆಂದು ಬೇರೆ ಹೇಳಬೇಕಿಲ್ಲ. ನಡುಗಾಲ ಸರಕಾರದ ಮಂತ್ರಿಮಂಡಲದ ಯೋಜನೆ ಈ ಕೆಳಗಿನಂತಿದೆ.

ನಾಲ್ವರು ಇತ್ತೆಹಾದುಲ್ಮುಸಲ್ಮೀನ ಸಂಸ್ಥೆಯ ಮುಸಲ್ಮಾನರು.

ಮೂವರು ಸ್ಟೇಟ ಕಾಂಗ್ರೆಸ ಪಕ್ಷದ ಹಿಂದುಗಳು.

ಒಬ್ಬರು ಹಿಂದುಳಿದ ವರ್ಗದವರು.

ನಿಜಾಮರು ನಾಲ್ವರ ನಾಮಕರಣ ಮಾಡುವರು. ಅವರಲ್ಲಿ ಒಬ್ಬರು ಮಾತ್ರ ಹಿಂದು.

ಮೊದಲನೆಯ ಪ್ರಧಾನ ಮಂತ್ರಿಯು ಮುಸಲ್ಮಾನನಿರಬೇಕು. ಮತ್ತು ಉಪಪ್ರಧಾನ ಮಂತ್ರಿಯು ಹಿಂದುವಾಗಿರಬೇಕು. ಎರಡನೆಯ ಸಲ ಪ್ರಧಾನ ಮಂತ್ರಿಯು ಹಿಂದುವಾದರೆ ಉಪಪ್ರಧಾನ ಮಂತ್ರಿಯು ಮುಸಲ್ಮಾನನಿರಬೇಕು.

ಕಾಂಗ್ರೆಸ ಪ್ರತಿಕ್ರಿಯೆ

ಈ ಬಗೆಯ ಯೋಜನೆಯಿರುವ ನಡುಗಾಲ ಸರಕಾರದಲ್ಲಿ ಭಾಗವಹಿಸುವದು ಕಠಿಣವೆಂದು ಸಂಸ್ಥಾನ ಕಾಂಗ್ರೆಸ್ಸಿನ ಅಧ್ಯಕ್ಷರಾದ ಸ್ವಾಮಿ ರಮಾನಂದರು ಒಂದು ಸಂದರ್ಶನದಲ್ಲಿ ಹೇಳಿದರು. ನಡುಗಾಲ ಸರಕಾರವನ್ನು ರಚಿಸಲೆಂದೇ ಬಂಧಿತರಾದ ಸ್ವಾಮಿ ರಮಾನಂದರನ್ನು ಬಿಡುಗಡೆ ಮಾಡಲಾಗಿದೆ. ಕಾಂಗ್ರೆಸ ಧುರೀಣರ ಬಿಡುಗಡೆಯ ಬಗ್ಗೆ ಅವರು ಆಶ್ಚರ್ಯ ವ್ಯಕ್ತಮಾಡಿ ಈ ಬಿಡುಗಡೆಯು ಅನಿರೀಕ್ಷಿತವೆಂದು ನುಡಿದರು. ನಡುಗಾಲ ಸರಕಾರದ ಪ್ರಸ್ತಾವದಿಂದ ಪ್ರಜಾಜನರ ಪ್ರಮುಖ ಬೇಡಿಕೆಗಳು ಪೂರೈಸಲ್ಪಟ್ಟಿಲ್ಲವೆಂದೂ ಆ ಬಗ್ಗೆ ಚಳವಳಿ ಹಾಗೇ ಸಾಗತಕ್ಕದ್ದೇ ಎಂದೂ ಹೇಳಿದರು.

ಕಾಂಗ್ರೆಸ ಧುರೀಣರಾದ ಡಾ. ಜಿ. ಎಸ್. ಮೇಲ್ಕೋಟೆಯವರೂ ಮೇಲಿನಂತೆಯೇ ಅಭಿಪ್ರಾಯ ವ್ಯಕ್ತ ಮಾಡಿ ಸಂಸ್ಥಾನ ಕಾಂಗ್ರೆಸು ಭಾವೀ ನಡುಗಾಲ ಸರಕಾರದಲ್ಲಿ ಸೇರುವ ಪ್ರಶ್ನೆಯೆ ಉದ್ಭವಿಸುವದಿಲ್ಲೆಂದು ಹೇಳಿದರು.

ಹೈದರಾಬಾದ ಕರ್ನಾಟಕ ಪ್ರಾಂತೀಯ ಸಂಸ್ಥಾನ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀಯುತ ದೇಸಾಯಿ ಜನಾರ್ದನರಾಯರು ಈ ಬಗ್ಗೆ

"ಹೈದರಾಬಾದು ಸಂಸ್ಥಾನದ ೧॥ ಕೋಟಿಗೆ ಮಿಕ್ಕಿರುವ ಜನತೆಯ ಪ್ರಾತಿನಿಧಿಕ ಸಂಸ್ಥೆಯಾದ ಸಂಸ್ಥಾನ ಕಾಂಗ್ರೆಸಿಗೆ ಈ ಒಪ್ಪಂದದಿಂದ ಎಳ್ಳಷ್ಟೂ ಸಂತೋಷವಾಗಿಲ್ಲೆಂದು ಬೇರೆ ಹೇಳಬೇಕಾಗಿಲ್ಲ" ಎಂದು ಹೇಳಿಕೆ ಕೊಟ್ಟಿದ್ದಾರೆ.

ಆದರೆ ಈ ಒಪ್ಪಂದದಿಂದ ಇತ್ತೆಹಾದುಲ್ ಮುಸಲ್ಮೀನ ಮಜಲೀಸದ ಅಧ್ಯಕ್ಷರಾದ ಸೈಯದ ಕಾಸೀಮ ರಜವಿಯವರು, ಈ 'ಯಥಾಸ್ಥಿತಿ' ಒಪ್ಪಂದದಿಂದ ತಮಗೆ ಸಮಾಧಾನವಾಗಿದೆಯೆಂದೂ ಇದ್ದ ಪರಿಸ್ಥಿತಿಯಲ್ಲಿ ಅತ್ಯಂತ ಅನುಕೂಲವಾದ ಸವಲತ್ತುಗಳನ್ನು ಹೈದರಾಬಾದವು ಪಡೆದಂತಾಗಿದೆಯೆಂದೂ ಹೇಳಿದರು.

ಶಿಷ್ಟಮಂಡಲದ ಧುರೀಣರ ಅಭಿಪ್ರಾಯ

ಹೈದರಾಬಾದ ಶಿಷ್ಟಮಂಡಳದ ಧುರೀಣರಾದ ಮೋಯಿನ ನವಾಜ ಜಂಗರು ತಾ. ೧೮ರಂದು ಸಾಯಂಕಾಲ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಈ ಆಶಯದ ಮಾತುಗಳನ್ನಾಡಿದರು.

"ಯಥಾಸ್ಥಿತಿ ಒಪ್ಪಂದದಂತೆ ಪರಸ್ಪರರು ನಡೆದರೆ ಸೌಹಾರ್ದದ ತಳಹದಿ ಹಾಕಲು ಸಾಧ್ಯವಾಗುವದು. ಈ ಒಪ್ಪಂದದಿಂದ ಹೈದರಾಬಾದವು ಹಿಂದೀ ಒಕ್ಕೂಟಕ್ಕೆ ಸೇರುವ ಬಗ್ಗೆ ಆಶ್ವಾಸನ ಕೊಟ್ಟ ಅರ್ಥ ಹೊರಡುವದಿಲ್ಲ. ಈ ಒಪ್ಪಂದದಿಂದ ಅಗಸ್ಟ ೧೫ ರ ಮೊದಲಿದ್ದ ಸ್ಥಾನಮಾನವನ್ನೇ ಹೈದರಾಬಾದು ಪಡೆದಿದೆ. ಪರಿಷ್ಠಾಧಿಕಾರವು ಯಾವದೇ ಸ್ವರೂಪದಲ್ಲಿ ತಲೆಎತ್ತಲಾರದು. ಎಲ್ಲ ವಿಷಯಗಳಲ್ಲಿಯೂ ಉಭಯತರು ಮಧ್ಯ

—೧೪ ನೇ ಪುಟಕ್ಕೆ

ಸಂಪಾದಕೀಯ ಟೀಕೆಟಿಪ್ಪಣಿಗಳು

ಹೈದರಾಬಾದ

ಹೈದ್ರಾಬಾದ ನಿಜಾಮು ಸಾಹೇಬರು ಕೊನೆಗೊಮ್ಮೆ ಹಿಂದುಸ್ತಾನ ಹೈದರಾಬಾದ ಯಥಾಸ್ಥಿತಿ ಒಪ್ಪಂದಕ್ಕೆ ಸಹಿಹಾಕಿದರು. ಈ ಸಂಬಂಧದ ವಿವರಗಳನ್ನು ಬೇರೆ ಕಡೆಗೆ ಕೊಟ್ಟಿದ್ದೇವೆ. ಎರಡು ಮೂರು ತಿಂಗಳವರೆಗೆ ಇಷ್ಟೊಂದು ಅಲೆದಾಡಿದರೂ ಕೊನೆಗೆ ಮೊದಲಿನ ಕರಡಿಗೇ ನಿಜಾಮರು ಒಪ್ಪಬೇಕಾಯಿತು. ಈ ಕಾಲವಿಲಂಬದಲ್ಲಿ ಪುಂಡರಿಗೆ ಜಾತ್ಯಂಧರಿಗೆ, ಮತೆಮರುಳರಿಗೆ ಮಾತ್ರ ಬೇಕಾದಷ್ಟು ಚೆನ್ನಾಟ ನಡೆಸಲು ಅವಕಾಶ ಸಿಕ್ಕಿತಲ್ಲದೆ, ಆಳರಸರಿಗೂ ದಬ್ಬಾಳಿಕೆಗೆ ಮುಕ್ತದ್ವಾರ ಸಿಕ್ಕಿತು. ಹೈದರಾಬಾದ ಸಂಸ್ಥಾನದಿಂದ ಬರುತ್ತಿರುವ ಸುದ್ದಿಗಳನ್ನು ಕೇಳಿದರೆ ಎಂಥ ಕಲ್ಲೆದೆಯವನ ಮನಸ್ಸೂ ಕರಗದಿರದು. ಇಷ್ಟೊಂದು ಹತ್ಯಾಕಾಂಡ, ಹಾನಿಗೆ ಅವಕಾಶ ಕೊಡುವುದಕ್ಕಿಂತ ಉಳಿದ ಸಂಸ್ಥಾನಿಕರಂತೆ ಮೊದಲೆ ಒಪ್ಪಂದ ಮಾಡಿಕೊಂಡು ಬಿಟ್ಟಿದ್ದರೆ ಎಲ್ಲವೂ ಸುಸೂತ್ರವಾಗುತ್ತಿದ್ದಿತು. ಅದರೂ ಒಪ್ಪಂದ ಮಾಡಿಕೊಂಡ ಬಳಿಕವಾದರೂ ಎಲ್ಲವೂ ಸರಾಗವಾಗಿ ಸಾಗುವುದೆಂದು ಆಶಿಸುವಾ. ಒಪ್ಪಂದದ ಕಲಮುಗಳನ್ನು ಪೃಥಕ್ಕರಿಸಿ ನೋಡಿದ್ದಾದರೆ ನಿಜಾಮ ಸಾಹೇಬರಿಗೆ ಹೆಚ್ಚಿನದೇನೂ ದೊರೆಯಲಿಲ್ಲ. ಹಿಂದೀ ಒಕ್ಕೂಟದಲ್ಲಿ ನೇರವಾಗಿ ಸೇರದೆ ಒಂದು ವರುಷದ ವರೆಗೆ ಬ್ರಿಟಿಶ ಸರಕಾರದ ಕಾಲದಲ್ಲಿಯಂತೆ ನಡೆದುಕೊಳ್ಳಲು ಮಾತ್ರ ಆಸ್ಪದ ಸಿಕ್ಕಿತು. ಒಂದು ವರುಷದ ನಂತರ ಮತ್ತೆ ಎಲ್ಲವನ್ನು ವಿಚಾರ ಮಾಡಲಾಗುವದು. ಆದರೆ ಇಷ್ಟು ಮಾತ್ರ ನಿಜ. ಪಾಕಿಸ್ತಾನವನ್ನು ಸೇರುವುದಿಲ್ಲೆಂದು ನಿಜಾಮ ಪ್ರಭುಗಳು ಆಶ್ವಾಸಿಸಿರುವರು. ಹಾಗೆ ಮಾಡಿದ್ದು ಎಲ್ಲ ದೃಷ್ಟಿಯಿಂದ ಅವರಿಗೆ ಭೂಷಣವು. ಈ ಯಥಾಸ್ಥಿತಿ ಒಪ್ಪಂದ ಮಾಡಿಕೊಂಡು ಅಹಂಮನ್ಯತೆಯನ್ನು ತೋರುವದಕ್ಕಿಂತ ಮೈಸೂರ ಮೊದಲಾದ ಸಂಸ್ಥಾನಗಳಂತೆ ಹಿಂದೀ ಒಕ್ಕೂಟದಲ್ಲಿ ಸೇರಿಯೇ ಸ್ವ ಮತ್ತು ಪ್ರಜೆಗಳ ಹಿತವನ್ನು ಸಾಧಿಸಿಕೊಳ್ಳುವುದು ನಿಜಾಂ ಪ್ರಜೆಗಳಿಗೆ ಉಚಿತವಾಗಿದೆ. ಒಂದು ವರುಷದ ನಂತರವಾದರೂ ಈ ಸುಬುದ್ಧಿ ಅವರಿಗೆ ಬರಲೆಂದು ಹಾರೈಸುವಾ.

ನಡುಗಾಲ ಸರಕಾರ

ಈ ರೀತಿ ಯಥಾಸ್ಥಿತಿ ಒಪ್ಪಂದ ಮಾಡಿಕೊಂಡು ಒಂದು ವರುಷ ಅವಧಿಯನ್ನು ಪಡೆದುಕೊಂಡರೆ ಪ್ರಭುಗಳ ಕರ್ತವ್ಯ ತೀರಲಿಲ್ಲ. ಸಂಸ್ಥಾನದಲ್ಲಿ ಹೊಣೆಗಾರ ಸರಕಾರವನ್ನು ಸ್ಥಾಪಿಸಿಕೊಂಡು ಪ್ರಜೆಗಳಿಗಾಗಿ, ಪ್ರಜೆಗಳ ಸಹಾಯದಿಂದಲೆ ಆಡಳಿತವನ್ನು ನಡೆಸುವದು ಅತ್ಯವಶ್ಯವಾಗಿದೆ. ಈ ಸಂಬಂಧದಲ್ಲಿ ಹೊರಟ 'ಫರ್ಮಾನ'ವನ್ನು ನೋಡಿದರೆ ನಿಜಾಮ ಸಾಹೇಬರು ಪ್ರಜೆಗಳ ನಾಡಿಗಳನ್ನು ಇನ್ನೂ ಪರೀಕ್ಷಿಸಿಕೊಂಡಿಲ್ಲೆಂದು ವಿಷಾದಿಸಬೇಕಾಗುವದು. ಘೋಷಿತ ನಡುಗಾಲ ಸರಕಾರದಲ್ಲಿ ಪ್ರಚಂಡ ಬಹುಸಂಖ್ಯೆ ಹಿಂದುಗಳಿಗೆ ಕೇವಲ ಐದು ಸ್ಥಾನಗಳಿದ್ದು ಅತ್ಯಲ್ಪ ಸಂಖ್ಯಾಕರರಾಗಿರುವ ಮುಸಲ್ಮಾನರಿಗೆ ಏಳು ಸ್ಥಳಗಳನ್ನು ಕಲ್ಪಿಸಿಕೊಡಲಾಗಿದೆ! ಇದಾವ ಮಾದರಿಯ ಪ್ರಜಾಪ್ರಭುತ್ವ ಪದ್ಧತಿಯೊ ತಿಳಿಯದು? ಪ್ರಜೆಗಳಿಗೆ ಹಿತವಾಗುವಂತೆ ನೋಡಿಕೊಳ್ಳುವುದಾಗಿ ಆಶ್ವಾಸಿಸುವ ನಿಜಾಮರು ಬಹುಸಂಖ್ಯ ಪ್ರಜಾಪ್ರತಿನಿಧಿಗಳ ಕೈಯಲ್ಲಿ ಅಡಳಿತವನ್ನು ಒಪ್ಪಿಸಲು ಈಗಲೂ ಸಿದ್ಧರಿಲ್ಲ. ಈ ಬಗೆಯ ಪ್ರತಿಗಾಮಿ ನಡುಗಾಲ ಸರಕಾರದಲ್ಲಿ ಪ್ರಜೆಗಳ ಪ್ರಾತಿನಿಧಿಕ ಸಂಸ್ಥೆಯಾದ ಕಾಂಗ್ರೆಸ್ಸು ಅದೆಂತು ಭಾಗವಹಿಸಬಲ್ಲದು? ಈಗಾಗಲೆ ಅದು ಕೊಡುಗೆಯನ್ನು ನಿರಾಕರಿಸಿ ಬಿಟ್ಟಿದೆಂದು ತಿಳಿಯುತ್ತದೆ. ಸಂಸ್ಥಾನದಲ್ಲಿ ಪ್ರಜಾಪ್ರಭುತ್ವ ಸರಕಾರವನ್ನು ಸ್ಥಾಪಿಸದಿದ್ದರೆ ಒಕ್ಕೂಟ ಸರಕಾರದ ಗೂಡ ಮಾಡಿಕೊಂಡ ಒಪ್ಪಂದವೆಲ್ಲ ನಿರರ್ಥಕವೇ ಸೈ. ಏಕೆಂದರೆ ಅದರಿಂದ ಸಂಸ್ಥಾನದಲ್ಲಿ ಶಾಂತಿ, ಸುವ್ಯವಸ್ಥೆ ಸ್ಥಾಪಿತವಾಗಲಾರದು. ಸತ್ಯಾಗ್ರಹ ಚಳವಳಿ ಯಥಾಪ್ರಕಾರ ಸಾಗಬೇಕಾಗುವದು. ಅನನ್ವಿತ ದಬ್ಬಾಳಿಕೆಯನ್ನೂ ನಿಜಾಮರು ನಡೆಸುವರೆಂಬಲ್ಲಿ ಸಂದೇಹವಿಲ್ಲ. ಯಥಾಸ್ಥಿತಿ ಒಪ್ಪಂದದಲ್ಲಿಯ ರಾಜ್ಯವನ್ನು ಉರುಳಿಸುವ ಚಟುವಟಿಕೆಗಳನ್ನು ತಡೆಯಲು ಸಹಾಯ ಮಾಡಬೇಕೆಂಬ ಕರಾರದಿಂದ ನಿಜಾಮ ಸಾಹೇಬರು ಇಂತಹ ಪ್ರತಿಗಾಮೀ ಧೋರಣ ವಹಿಸಿದ್ದರೆ, ಅದು ಅನಿಷ್ಟವಿಷ್ಟೇ ಅಲ್ಲ ತಪ್ಪು ತಿಳವಳಿಕೆಯ ಪರಿಣಾಮ. ಪ್ರಜೆಗಳ ಸ್ವಾತಂತ್ರ್ಯ ಚಳವಳಿಯನ್ನು ಹತ್ತಿಕ್ಕಲು ಒಕ್ಕೂಟ ಸರಕಾರವೇನು ನಿಜಾಮರಿಗೆ ಸಹಾಯ ಸಲ್ಲಿಸುವದಿಲ್ಲ. ಈ ಮಾತು ಒಪ್ಪಂದದಿಂದ ಸ್ಪಷ್ಟವಾಗುವದು. ಆದುದರಿಂದ ನಿಜಾಮ ಪ್ರಭುಗಳು ಈಗಲಾದರೂ ಪರಿಸ್ಥಿತಿಯನ್ನೆಲ್ಲ ಚೆನ್ನಾಗಿ ತಿಳಿದುಕೊಂಡು ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಸಂಸ್ಥಾನದಲ್ಲಿಯ ಪ್ರಮುಖ ಪ್ರಾತಿನಿಧಿಕ ಸಂಸ್ಥೆಯಾದ ಕಾಂಗ್ರೆಸ್ಸಿನ ಗೂಡ ಒಡಂಬಡಿಕೆ ಮಾಡಿಕೊಂಡು ಅದರ ಅಭಿಪ್ರಾಯದಂತೆ ನಡುಗಾಲ ಸರಕಾರ ಸ್ಥಾಪಿಸಿ ಹೆಚ್ಚಿನ ಅನರ್ಥವನ್ನು ತಪ್ಪಿಸಬೇಕೆಂದು ಸೂಚಿಸುತ್ತೇವೆ.

ಪಶ್ಚಾತಾ ಬುದ್ಧಿ:

ಪಾಕಿಸ್ತಾನ ಸ್ಥಾಪನೆಯ ಕಾಲಕ್ಕೆ ಹಿಂದುಸ್ತಾನದಲ್ಲಿಯ ಮುಸಲ್ಮಾನರು ಮುಸ್ಲಿಂ ಲೀಗಿಗೆ ಸಹಾಯ ಸಲ್ಲಿಸಿ ಈಗ ಪಶ್ಚಾತ್ತಾಪ ಪಡುತಿರುವಂತೆ ಅಂಬೇಡಕರ ಪಕ್ಷದ ಹರಿಜನರ ಸ್ಥಿತಿಯಾದರೂ ಹೀಗೆಯೆ ಆಗಿದೆಯೆಂಬುದು ಪ್ರಕಟವಾಗುತಿರುವ ಪ್ರಕಟನೆಗಳಿಂದ ಗೊತ್ತಾಗುವದು. ಹರಿಜನರಿಗೆ ಸ್ವರ್ಗವನ್ನೇ ಕಲ್ಪಿಸಿಕೊಡುವರೆಂಬ ಭ್ರಾಂತಿಯಿಂದ ಅವರು ಬ್ಯಾ. ಜಿನ್ನಾರವರೊಡನೆ ಕೂಡಿಕೊಂಡು ಮಾತೃದ್ರೋಹ ಬಗೆದರು. ಶ್ರೀ. ಮಂಡಲರವರು ಪಾಕಿಸ್ತಾನ ಸರಕಾರದಲ್ಲಿ ಮಂತ್ರಿಗಳು ಕೂಡ ಆಗಿರುವರು. ಆದರೆ ಈ ಅತ್ಯಲ್ಪ ಕಾಲದಲ್ಲಿಯೆ ಅವರಿಗೆ ಸುಬುದ್ಧಿ ಬಂದುದು ಸುದೈವವು. ಪಾಕಿಸ್ತಾನ ಸರಕಾರದಿಂದ ಹರಿಜನೋದ್ಧಾರ ಕಾರ್ಯ ಸ್ವಲ್ಪವೂ ಆಗಿಲ್ಲ ಆಗುವ ಆಸೆ ಇಲ್ಲ ಎಂದು ಶ್ರೀ. ಮಂಡಲರು ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಬ್ಯಾ. ಅಂಬೇಡಕರರಿಗೆ ಇದಕ್ಕೂ ಸ್ವಲ್ಪ ಮೊದಲು ಸುಬುದ್ಧಿ ಬಂದದ್ದರಿಂದ ಅವರು ಹಿಂದೀ ಒಕ್ಕೂಟ ಸರಕಾರದಲ್ಲಿ ಮಂತ್ರಿತ್ವವನ್ನು ವಹಿಸಿ ತಮ್ಮ ಹರಿಜನ ಬಂಧುಗಳ ಉದ್ಧಾರ ಕಾರ್ಯದಲ್ಲಿ ಭಾಗಿಯಾಗಿರುವರು. ಆದರೆ ಶ್ರೀ. ಮಂಡಲರು ಈಗಲೂ ಪಾಕಿಸ್ತಾನದಲ್ಲಿಯೆ ಇದ್ದುಕೊಂಡು ಹರಿಜನೋದ್ಧಾರಕ್ಕೆ ಪಾಕಿಸ್ತಾನದಲ್ಲಿ ಎಳ್ಳಷ್ಟೂ ಅವಕಾಶವಿಲ್ಲ ಎಂದು ಮುಂತಾಗಿ ಅಭಿಪ್ರಾಯಪಡಹತ್ತಿದ್ದಾರೆ. ಪಾಕಿಸ್ತಾನದಲ್ಲಿ ಹರಿಜನರ ಛಲನೆಯ ಸುದ್ದಿಗಳನ್ನು ನೋಡಿದರೆ ಹಿಂದಿನ ಆಶ್ವಾಸನಗಳೆಲ್ಲ ಬರಿ ಸಮಯಸಾಧಕ, ಸ್ವಾರ್ಥಿ ಆಶ್ವಾಸನಗಳಿದ್ದುವೆಂಬುದು ಸ್ಪಷ್ಟವಾಗುವದು. ಈ ಪರಿಸ್ಥಿತಿಯಲ್ಲಿ ಶ್ರೀ. ಮಂಡಲರು ತಮ್ಮ ಕರ್ತವ್ಯವನ್ನು ತಿಳಿದುಕೊಂಡು ವರ್ತಿಸುವದು ಅವಶ್ಯವಾಗಿದೆ. ಸಹಕಾರದಿಂದ ಹರಿಜನೋದ್ಧಾರಕ್ಕೆ ಅವಕಾಶ ಸಿಕ್ಕದಿದ್ದರೆ ಅಸಹಕಾರ ಹೂಡಿ ತಮ್ಮ ಹರಿಜನ ಬಂಧುಗಳ ಶಕ್ತಿ ಸಂಘಟನೆಯನ್ನು ಸಂವರ್ಧಿಸಿಕೊಂಡು ಹಿತವನ್ನು ಸಾಧಿಸಬೇಕು. ಹರಿಜನೋದ್ಧಾರ ಕಾರ್ಯದಲ್ಲಿಯೂ ಹಿಂದೀ ಒಕ್ಕೂಟ ಸರಕಾರದ ಸಕ್ರಿಯ ಸಹಕಾರ ಸದಾ ಸಿಕ್ಕುವುದೆಂದು ಬೇರೆ ಹೇಳಬೇಕಿಲ್ಲ.

ಭ್ರಮನಿರಸನ!

ಪಾಕಿಸ್ತಾನವನ್ನು ಪಡೆದ ಬಳಿಕ ಎಲ್ಲವೂ ನಂದನವನವಾಗಿ ಮಾರ್ಪಡುವದು, ಯಥೇಚ್ಛ ಸ್ವರ್ಗ ಸುಖವನ್ನನುಭೋಗಿಸುವಾ ಎಂದು ಮುಸ್ಲಿಂ ಲೀಗಿನ ಪ್ರಭೃತಿಗಳು ತಿಳಿದುಕೊಂಡಿದ್ದರು. ಆದರೂ ಸ್ವತಂತ್ರ ಸರಕಾರ ಸ್ಥಾಪಿಸಿಕೊಂಡ ನಂತರ ಅವರನ್ನೆದುರಿಸಹತ್ತಿದ ಒಂದೊಂದೆ ಜಟಿಲ ಸಮಸ್ಯೆಯನ್ನು ನೋಡಿ ಅವರು ದಿಗ್ಮೂಢರಾಗಿರುವರೆಂದು ಹೇಳಬಹುದು. ವಿಶೇಷತಃ ನಿರಾಶ್ರಿತರ ಪರಿಹಾರ ಸಮಸ್ಯೆ, ಆಹಾರ ಸಮಸ್ಯೆ ಅವರನ್ನು ಹೆಚ್ಚಾಗಿ ಬಾಧಿಸಹತ್ತಿರುವುದು. ಸಿಂಧ ಪಂಜಾಬಗಳಲ್ಲಿ ಆಹಾರ ಉತ್ಪಾದನೆಯ ಅನುಕೂಲತೆ ಬೇಕಾದಷ್ಟಿದ್ದರೂ ಪೂರ್ವ ಬಂಗಾಲ ಮತ್ತು ಸರಹದ್ದ ಪ್ರಾಂತಗಳಿಗೆ ಆಹಾರವನ್ನು ಪೂರೈಸಬೇಕಾದರೆ ಒಕ್ಕೂಟ ಸರಕಾರದ ಸಹಾಯ ಅತವಶ್ಯ. ಒಕ್ಕೂಟ ಸರಕಾರದ ಗೂಡ ಅಸಹಕಾರವನ್ನು ಸಾರಿದರೆ ನಡೆಯದು. ಸಂಸ್ಥಾನಿಕರನ್ನು ಹುರಿದುಂಬಿಸಿ, ಮುಸ್ಲಿಮ ಪುಂಡರನ್ನು ಎಬ್ಬಿಸಿ ಅನನ್ವಿತ ಕೃತ್ಯಗಳನ್ನು ಮಾಡಹಚ್ಚಿ ಒಕ್ಕೂಟ ಸರಕಾರವನ್ನು ಹಣ್ಣಿಗೆ ತರುವಾ ಎಂದು ಪಾಕಿಸ್ತಾನ ಸರಕಾರ ಭಾವಿಸಿದ್ದಿತೊ ಏನೊ? ಇಷ್ಟು ದಿನಗಳ ವರೆಗೆ ಒಕ್ಕೂಟ ಸರಕಾರದವರ ಗೂಡ ಪರಕೀಯ ಶತ್ರುಭಾವನೆಯಿಂದಲೆ ಅದು ವರ್ತಿಸಿತೆಂದೂ ಹೇಳಬಹುದು. ಆದರೀಗ ಪರಿಸ್ಥಿತಿಯ [illegible] ಅರಿಕೆಯಾದ್ದರಿಂದ ಒಡಂಬಡಿಕೆಯ ಮಾತುಕತೆಗಳನ್ನು ಅದು ನಡೆಸಿದೆ. ನಿಜವಾಗಿ ವಿಚಾರ ಮಾಡಿದರೆ ಎರಡೂ ನೆರೆ ರಾಷ್ಟ್ರಗಳು ಪರಸ್ಪರ ಸಹಕಾರದಿಂದ ನಡೆದುಕೊಂಡರೆ ಅನೇಕ ಸಮಸ್ಯೆಗಳು ಬೇಗ ಬಿಡುವವು. ಎರಡೂ ರಾಷ್ಟ್ರಗಳಲ್ಲಿ ಸಾಮಾನ್ಯವಾದ ಸಂಗತಿಗಳು, ಸಮಸ್ಯೆಗಳು ಬೇಕಾದಷ್ಟು ಇರುವುವು ಅವನ್ನೆಲ್ಲ ಕೂಡಿಯೆ ಬಗೆಹರಿಸಿಕೊಳ್ಳುವದು ಕ್ರಮಪ್ರಾಪ್ತ. ಇದೆಲ್ಲ ಸಾಧ್ಯವಾಗಬೇಕಾದರೆ ಆಯಾ ಸರಕಾರಗಳಲ್ಲಿದ್ದ ಅಲ್ಪ ಸಂಖ್ಯಾಕರ ರಕ್ಷಣೆ ಸರಾಗವಾಗಿ ಸಾಗಬೇಕು. ಕೊಲೆ, ಸುಲಿಗೆ ದಬ್ಬಾಳಿಕೆ ನಿಲ್ಲಬೇಕು. ಪಾಕಿಸ್ತಾನ ಸರಕಾರ ಮನಃಪೂರ್ವಕ ಪ್ರಯತ್ನಿಸಿದರೆ ಇದೇನು ಅಶಕ್ಯಕೋಟಿಯದಲ್ಲ. ಇದನ್ನು ನೆನೆದು ಪಾಕಿಸ್ತಾನ ಸರಕಾರ ಒಕ್ಕೂಟ ಸರಕಾರದೊಂದಿಗೆ ಸಹಕರಿಸಿ ಸ್ವ ಮತ್ತು ಪ್ರಜೆಗಳ ಹಿತವನ್ನು ಸಾಧಿಸಿಕೊಳ್ಳುವುದೆಂದು ನಂಬುತ್ತೇವೆ.

ವಿವೇಕೋದಯ?

ಈ ರೀತಿ ಒತ್ತಾಯಕ್ಕೊಳಗಾಗಿಯಾದರೂ ಪಾಕಿಸ್ತಾನ ಸರಕಾರದಲ್ಲಿ ವಿವೇಕೋದಯ (?) ವಾದುದು ಶುಭ ಚಿನ್ಹೆಯಾಗಿದೆ. ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಕಿತ್ತಾಟದ ಸಮಸ್ಯೆಗಳನ್ನೆಲ್ಲ ಇದೀಗ ಅದು ಬಗೆಹರಿಸಿಕೊಂಡಿದೆಯೆಂದು ತಿಳಿಯುತ್ತದೆ. ಹಿಂದುಸ್ತಾನದ ನಿರ್ಯಾತದ ಮೇಲೆ ಪಾಕಿಸ್ತಾನ ಹೇರಿದ್ದ ಸುಂಕವನ್ನು ಅದು ಬೇಗ ಹಿಂತೆಗೆದುಕೊಳ್ಳಬೇಕೆಂದು ಗೊತ್ತಾಯಿತೆಂದು ತಿಳಿಯುತ್ತದೆ. ವಾಣಿಜ್ಯ ವಿಷಯಗಳಲ್ಲಿ ಆದ ಒಪ್ಪಂದದ ಭಂಗವಿದೆಂದು ಹಿಂದುಸ್ತಾನ ಸರಕಾರ ವಾದಿಸಿದ್ದರಿಂದ ಪಾಕಿಸ್ತಾನ ಸರಕಾರವೀಗ ಅದನ್ನು ಹಿಂತೆಗೆದುಕೊಳ್ಳಲು ಸಿದ್ಧವಾಗಿದೆ. ಎರಡೂ ಸರಕಾರಗಳು ಸದ್ಯದ ಸ್ಥಿತಿಯಲ್ಲಿ ಉಳಿಯುವದು ಶಕ್ಯವಿಲ್ಲ. ಪರದಾಳಿಯನ್ನು ಎದುರಿಸಲು ಸಂರಕ್ಷಣ ಒಪ್ಪಂದವನ್ನು ಮಾಡಿಕೊಳ್ಳುವದವಶ್ಯವೆಂದು ಪಾಕಿಸ್ತಾನ ಸರಕಾರಕ್ಕೆ ಮನವರಿಕೆಯಾದುದು ಸಂತೋಷದ ಸಂಗತಿ. ಕಾಶ್ಮೀರದ ಮೇಲೆ ನಡೆದ ದಾಳಿಯಲ್ಲಿ ಪಾಕಿಸ್ತಾನದ ಅಂಗವಿತ್ತೆಂಬುದು ಈ ಮಾತುಕತೆಗಳಲ್ಲಿ ಸ್ಪಷ್ಟವಾಗಿ ಒಪ್ಪಲಾಗಿದೆ. ಬೇಗನೆ ದಾಳಿಗಾರರನ್ನು ಹಿಂತೆಗೆದುಕೊಂಡು ಯುದ್ಧವನ್ನು ಬೇಗ ಮುಗಿಸಲು ಪಾಕಿಸ್ತಾನ ಸರಕಾರ ಸಿದ್ಧವಿದೆಯಂತೆ. ದಾಳಿಯಲ್ಲಿ ತನ್ನದೇನೂ ಅಂಗವಿಲ್ಲೆಂದು ಬಾಯಿಬಡಿಯುತ್ತಿದ್ದ ಪಾಕಿಸ್ತಾನ ಸರಕಾರ ಈಗ ನಿರ್ವಾಹವಿಲ್ಲದೆ ಮೇಲಿನಂತೆ ಒಪ್ಪಬೇಕಾಗಿದೆ. ದಾಳಿಗಾರರ ಸಹಾಯದಿಂದ ಶ್ರೀನಗರವನ್ನು ಬೇಗ ವಶಪಡಿಸಿಕೊಂಡು ಲಾಹೋರದಿಂದ ರಾಜವೈಭವದೊಂದಿಗೆ ಶ್ರೀನಗರವನ್ನು ಪ್ರವೇಶಿಸಬೇಕೆಂದು ಪಾಕಿಸ್ತಾನದ ಗವರ್ನರ ಜನರಲ್ ಬ್ಯಾ. ಜಿನ್ನಾರವರು ಮನಸಿನಲ್ಲಿ ಮುಂದಿಗೆ ಮಾಡಿಕೊಂಡಿದ್ದರಂತೆ. ಆದರೆ ಸಕಾಲದಲ್ಲಿಯೇ ಎಲ್ಲವೂ ಹೊರಬಿದ್ದುದರಿಂದ ಹಿಂದೀ ಒಕ್ಕೂಟ ಸರಕಾರದವರು ಅದನ್ನು ನಿರರ್ಥಕಗೊಳಿಸಿದರು. ಇದರಿಂದ ಹತಾಶರಾಗಿ ಅರ್ಧ ಭಾಗವನ್ನಾದರೂ ಕೊಡಿರೆಂದು ಮುಂತಾಗಿ ಅವರು ಹಂಬಲಿಸಹತ್ತಿರುವರಂತೆ. ಆದರೆ ಪ್ರಜೆಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ಯಾರೂ ಯಾವ ಭಾಗವನ್ನೂ ಯಾರಿಗೂ ಒಪ್ಪಿಸಲಾರರು. ಪ್ರಜೆಗಳ ಅಭಿಪ್ರಾಯದಂತೆಯೆ ಎಲ್ಲವೂ ನಡೆಯತಕ್ಕದ್ದು. ಪಾಕಿಸ್ತಾನ ಸರಕಾರದಲ್ಲಿ ಬೇಗನೆ ವಿವೇಕೋದಯವಾಗಿ ಹೆಚ್ಚಿನ ಅನರ್ಥ ತಪ್ಪಲು ಅವಕಾಶವುಂಟಾದುದು ಶುಭಸೂಚನೆ. ಆದರೆ ಇದು ಕೊನೆಯ ವರೆಗೆ ಉಳಿದು ಎರಡೂ ರಾಷ್ಟ್ರಗಳು ಪರಸ್ಪರ ಸಹಾಯ ಸಹಕಾರಗಳಿಂದ ವರ್ತಿಸಿ ಪ್ರಜೆಗಳ ಹಿತವನ್ನು ಸಾಧಿಸುವದಲ್ಲದೆ ದೇಶದ ಅಭಿವೃದ್ಧಿಯನ್ನೂ ಸಾಧಿಸುವವೆಂದು ಆಶಿಸುತ್ತೇವೆ.

ಮಾಧ್ಯಮಿಕ ಶಿಕ್ಷಕರು

ಜನಸಾಮಾನ್ಯರೆಲ್ಲ ಓದುಬರೆಹವನ್ನು ಅರಿಯಬೇಕೆಂದು ಪ್ರಾಂತಿಕ ಸರಕಾರಗಳು ಪ್ರಾಥಮಿಕ ಶಿಕ್ಷಣದ ಹೊಣೆಯನ್ನಷ್ಟೆ ತಮ್ಮ ಕಡೆಗಿಟ್ಟುಕೊಂಡು ಮಾಧ್ಯಮಿಕ ಶಿಕ್ಷಣದ ಭಾರವನ್ನು ಖಾಸಗಿ ಸಂಸ್ಥೆಗಳ ಕಡೆಗೆ ಹೆಚ್ಚಾಗಿ ಕೊಟ್ಟದ್ದುಂಟು. ಈ ಸಂಸ್ಥೆಗಳಿಗೆ ಅದು ಸಹಾಯ ಧನವನ್ನು ಸಲ್ಲಿಸುವುದೂ ಉಂಟು. ಖಾಸಗಿ ಸಂಸ್ಥೆ [illegible] ಹೆಚ್ಚಿನ ಧನವನ್ನು [illegible] ಸಂಸ್ಥೆಗಳನ್ನು ನಡೆಸಿಕೊಂಡು ಹೋಗುತ್ತಿರುವುವು. ಆದರೆ ಶಿಕ್ಷಕರಿಗೆ [illegible] ಸಂಬಳ ಕೊಡುವುದಾಗದ್ದರಿಂದ ಸಂಸ್ಥೆಗಳಲ್ಲಿ ಮತ್ತು ಶಿಕ್ಷಕರಲ್ಲಿ ಕಿತ್ತಾಟ ನಡೆದಿರುವುದು. ಮಾಧ್ಯಮಿಕ ಶಿಕ್ಷಣದ ಈ ಸಮಸ್ಯೆಯನ್ನು [illegible] ಸರಕಾರದವರು [illegible] ಶ್ರೀ [illegible] ಮತ್ತು [illegible] ರವರ ಸಮಿತಿಯನ್ನು ನೇಮಿಸಿದ್ದರು. ಈ ಸಮಿತಿ [illegible] ಮಾಡಿ ವರದಿಯನ್ನು ಸರಕಾರಕ್ಕೆ ಒಪ್ಪಿಸಿರುವರು. ಆದರೆ ಈ ಸೂಚನೆಗಳು ಶಿಕ್ಷಕರ [illegible] ಬೇಡಿಕೆಗಳನ್ನು [illegible] ಪೂರೈಸಲಾರವೆಂದು [illegible] ಮಾಧ್ಯಮಿಕ ಶಿಕ್ಷಕರ ಸಂಘದ ಅಧ್ಯಕ್ಷರು ಅಭಿಪ್ರಾಯಪಟ್ಟಿರುವರು. [illegible] ಮಾಧ್ಯಮಿಕ ಶಿಕ್ಷಕರ [illegible] ಸಂಘದ [illegible] ಸಂಬಳವನ್ನು [illegible] ಸೂಚಿಸಲಾಗಿದೆ. ಮಾಧ್ಯಮಿಕ ಶಿಕ್ಷಕರ ಸಂಘದವರು [illegible] ಸಂಬಳ ಪ್ರಮಾಣ ಬೇರೆ ಇರಬೇಕೆಂದು ಸೂಚಿಸಿದ್ದರು. [illegible] ಈ ವ್ಯತ್ಯಾಸದಿಂದ ಶಿಕ್ಷಕರಲ್ಲಿ ಒಡಕಿಗೆ ಕಾರಣವಾಗುವದೆಂಬಲ್ಲಿ ಸಂದೇಹವಿಲ್ಲ. [illegible] ಪರಿಹರಿಸಬೇಕೆಂದೂ ಸೂಚಿಸಲಾಗಿದೆ. ಅಲ್ಲದೆ ಶಿಕ್ಷಕರ ಜೋಕರಿಯ ಭದ್ರತೆ, ಶಾಲೆಗಳ ಕಟ್ಟಡ, ದೀರ್ಘಾವಧಿ ರಜೆ, ಶಿಕ್ಷಕರಿಗೆ ಮನೆಗಳ ಯೋಜನೆ ಮುಂತಾದ ಸೂಚನೆಗಳು ಸಮಂಜಸವಾಗಿವೆ. ಈ ಸಮಿತಿಯವರ ಸೂಚನೆಯಂತೆಯೂ ಸಂಬಳ ಕೊಟ್ಟರೂ ಖಾಸಗಿ ಸಂಸ್ಥೆಗಳು ಶಾಲೆಗಳನ್ನು ನಡೆಸಿಕೊಂಡು ಹೋಗಲಾರವೆಂದು ಕೂಗು ಈಗಲೆ ಕೇಳಬರುತ್ತದೆ. ಅಂದಬಳಿಕ ಸಂಬಳ ಪ್ರಮಾಣವನ್ನು ಇನ್ನೂ ಹೆಚ್ಚಿಸಿರೆಂದು ಆ ಸಂಸ್ಥೆಗಳಿಗೆ ಅದೆಂತು ಕೇಳುವದು? ಶಿಕ್ಷಕರ ಬೇಡಿಕೆಗಳನ್ನು ಪೂರೈಸಬೇಕಾದರೆ ಸರಕಾರದವರು ಮಾಧ್ಯಮಿಕ ಶಾಲೆಗಳಿಗೆ ಕಾಲ್ಕೊಡುತ್ತಿರುವ ಧನಸಹಾಯ್ಯವನ್ನು ಹೆಚ್ಚಿಸುವದೆ ಉಚಿತವಾಗಿದೆ. ಈ ಧನಸಹಾಯ್ಯವನ್ನು ವೆಚ್ಚದ ಒಂದು ಮೂರಾಂಶದಿಂದ ಅರ್ಧಕ್ಕೇರಿಸಬೇಕಾದುದು ಅವಶ್ಯವೆನಿಸುತ್ತದೆ. ಅಲ್ಲದೆ ಧನಿಕರಾದವರು ಮುಂದೆ ಬಂದು ಖಾಸಗಿ ಸಂಸ್ಥೆಗಳಿಗೆ ಹೆಚ್ಚು ಧನಸಹಾಯ ನೀಡಿ ಶಿಕ್ಷಕರ ಬೇಡಿಕೆಗಳನ್ನು ಪೂರೈಸುವಂತೆ ಅವುಗಳಿಗೆ ಅವಕಾಶ ಕಲ್ಪಿಸಿಕೊಡಬೇಕು. ಶಿಕ್ಷಕರು ಸಂತೃಪ್ತರಾದರೇ ಶಿಕ್ಷಣದ ಕಾರ್ಯವು ಸುಸೂತ್ರವಾಗುವದೆಂಬುದನ್ನು ಬೇರೆ ಹೇಳಬೇಕಿಲ್ಲ. ಶಿಕ್ಷಕರಾದವರೂ ಈ ಸಂದರ್ಭದಲ್ಲಿ ತಮ್ಮ ಕರ್ತವ್ಯವನ್ನು ತಿಳಿದುಕೊಂಡು ವರ್ತಿಸಬೇಕಲ್ಲದೆ ಬರಿ ಹಕ್ಕುಗಳಿಗಾಗಿ ಬಡಿದಾಡದೆ ಕರ್ತವ್ಯವನ್ನು ಮರೆಯದಿರಬೇಕೆಂದು ಬಯಸುತ್ತೇವೆ.

ಆರ್ಥಿಕ ಪುನರ್ರಚನೆ

ಹಿಂದುಸ್ತಾನವೀಗ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡದ್ದರಿಂದ ಆರ್ಥಿಕ ಪುನರ್ರಚನೆಯ ಯೋಜನೆಯನ್ನು ಕೈಕೊಳ್ಳುವುದು ಕ್ರಮಪ್ರಾಪ್ತವಾಗಿದೆ. ಈ ಸಂಬಂಧದಲ್ಲಿ ಹಿಂದುಸ್ತಾನ ಸರಕಾರದ ಅರ್ಥಸಚಿವರಾದ ಶ್ರೀ ಷಣ್ಮುಖಂ ಚೆಟ್ಟಿಯವರು ಮುಂಗಡ ಪತ್ರಿಕೆಯ ಚರ್ಚೆಗೆ ಉತ್ತರ ಕೊಡುವಾಗ ಸ್ಪಷ್ಟವಾಗಿ ಹೇಳಿರುವರು. ಆರ್ಥಿಕ ಪುನರ್ರಚನೆ ಮತ್ತು ಔದ್ಯೋಗಿಕ ಅಭಿವೃದ್ಧಿಯ ಸಂಬಂಧದಲ್ಲಿ ಅನೇಕ ಯೋಜನೆಗಳು ಸಿದ್ಧವಾಗಿದ್ದು ಜಾತೀಯ ಗಲಭೆಗಳ ಮೂಲಕ ಹಿಂದಕ್ಕುಳಿದಿವೆಯೆಂದೂ ಶಾಂತಿ ಸ್ಥಾಪನೆಯಾದ ಕೂಡಲೆ ಅವನ್ನು ಕಾರ್ಯರೂಪದಲ್ಲಿ ತರಲಾಗುವದೆಂದೂ ಅವರು ಹೇಳಿದರು. ಹಿಂದುಸ್ತಾನದ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕಾದರೆ ಉತ್ಪಾದನೆ ಹೆಚ್ಚಿಸುವದು ಅವಶ್ಯವಾಗಿದೆ. [illegible] ಉತ್ಪಾದನೆ ಈಗ ಹೆಚ್ಚಿದ್ದರೂ [illegible] ಪರಿಸ್ಥಿತಿ ಸುಧಾರಿಸಿಲ್ಲವೆಂದು ಅವರು ಹೇಳಿದರು. ಆರ್ಥಿಕ ಪುನರ್ರಚನೆಯಲ್ಲಿ [illegible] ಮುಖ್ಯವಾಗಿದ್ದು ಅವರಿಗ ಯೋಗ್ಯ [illegible] ಉತ್ಪಾದನೆ ಹೆಚ್ಚುವಂತೆ [illegible] ಅವಶ್ಯವಾಗಿದೆ. [illegible] ಸರಕಾರದವರು [illegible] ಮತ್ತು [illegible] ಸಹಕಾರವುಂಟಾಗುವ [illegible] ಅರ್ಥಸಚಿವರು [illegible] ಈ ಸಂಬಂಧದಲ್ಲಿ [illegible] ಧೋರಣವನ್ನು [illegible] ಲಾಭದ [illegible] ಸ್ವತಂತ್ರ ಹಿಂದುಸ್ತಾನ ಸರಕಾರ [illegible] ಮತ್ತು [illegible] ಸಹಕಾರವುಂಟಾಗಿ ಉತ್ಪಾದನೆ ಹೆಚ್ಚಿ [illegible] ದೇಶ ಅಭಿವೃದ್ಧಿ [illegible] ಹೊಂದುವದೆಂದು [illegible] ಹಾರೈಸುತ್ತೇವೆ.

...ಶ್ಮೀರ ದಾಳಿಯಲ್ಲಿ ಪಾಕಿಸ್ತಾನದ ನಿಶ್ಚಿತ ಅಂಗ

...ಹೋರದಲ್ಲಿ ಹಿಂದೀಯರಿಗೆ ...ಹಿಂಸೆ?

...ತಿಜೋರಿಗಳಲ್ಲಿರುವ ಪಂಜಾಬ ನ್ಯಾಶ...ನಲ್ ಬ್ಯಾಂಕಿನ ಭದ್ರವಾದ ತಿಜೋರಿಗಳಲ್ಲಿ ...ಟ್ಟಿದ್ದ ಅಮೂಲ್ಯ ವಸ್ತುಗಳನ್ನು ತಿರುಗಿ ...ಹೋದ ಹಿಂದೀ ನಾಗರಿಕರನ್ನೂ ...ಧಿಕಾರಿಗಳನ್ನೂ ಸೈನಿಕರನ್ನೂ ಪಾಕಿಸ್ತಾ... ಪೋಲೀಸರೂ ಅಧಿಕಾರಿಗಳೂ ಹಿಂ... ಅವುಗಳನ್ನು ಅಲ್ಲೇ ಬಿಟ್ಟು ಬರುವಂತೆ ...ಪಡಿಸಿದರೆಂಬ ವರದಿಯ ಮೇಲೆ ಕೇಂದ್ರ ...ನ ಸಭೆಯಲ್ಲಿ ಶ್ರೀ ಶಿವನಲಾಲ ಸಕ್ಸೇನಾ ...ತರ ಗೋವಿಂದ ಸಿಂಗರು ತಂದ ನಿಲು... ಸೂಚನೆಯಿಂದ ತಕ್ಷಣಮಟ್ಟಿಗೆ ನಾತಾ... ಕಲಹಮಲವಾಯಿತು. (ತಾ. ೨೨)

...ವರದಿಯಲ್ಲಿರುವ ಸಂಗತಿಗಳ ಸತ್ಯಾಂಶ ...ವಿಲ್ಲದಿರುವದರಿಂದಲೂ ವಿದೇಶದಲ್ಲಿ ಸಂಭ... ಘಟನೆಗಳನ್ನು ಇಲ್ಲಿ ಚರ್ಚಿಸಲು ಬಾರ...ದ್ದರಿಂದಲೂ ಈ ನಿಲುವಳಿಯನ್ನು ಅಧ್ಯ... ನಿಯಮ ಬಾಹ್ಯ ಮಾಡಿದರೂ ಹಿಂದೀ ...ಗಳ ಹಿತ ರಕ್ಷಣೆಗಾಗಿ ಸರಕಾರ ಕೈಲಾದು...ಲ್ಲ ಮಾಡುವದೆಂದು ಗೃಹ ಮಂತ್ರಿ ಸರದಾರ ...ರು ಮಾತು ಕೊಟ್ಟರು. ವಿವರಗಳು ದೊರೆ...ದನೆ ಈ ಘಟನೆಗಳ ಬಗ್ಗೆ ಕ್ರಮ ತೆಗೆದು...ಕೊಳ್ಳಲಾಗುವದೆಂದೂ ಅವರು ಹೇಳಿದರಲ್ಲದೆ ...ಹೋರಿನಲ್ಲಾಳಿದ ಅಮೂಲ್ಯ ವಸ್ತುಗಳ ಸಂ...ಧದಲ್ಲಿ ಉಭಯ ಸರಕಾರಗಳಲ್ಲಿ ಮಾತು ನಡೆದಿದೆಯೆಂದೂ ತಿಳಿಸಿದರು.

ಅದೇ ದಿನ ಕೂಲಿಕಾರ ಮಂತ್ರಿ ಜಗಜೀವನ ...ಮರ ಕೂಲಿಕಾರ ವಿಮಾ ಮಸೂದೆ ಚರ್ಚೆಯ ...ತರ ಸಿಲೆಕ್ಟ ಕಮೀಟಿಗೊಪ್ಪಿಸಲ್ಪಟ್ಟಿತು. ...ಕ ಸದಸ್ಯರು ಭಾಷಣ ಮಾಡಿ ಕೂಲಿಕಾರರಿಗೆ ...ವೈದ್ಯಕೀಯ, ವಸತಿ ಮತ್ತು ಇತರ ಸೌಕರ್ಯ...ಗಳು ಸಾರ್ವತ್ರಿಕವಾಗಿ ದೊರಕಬೇಕೆಂದು ಪ್ರತಿ...ಪಾದಿಸಿದರು. ಧಕ್ಕೆ ಕೆಲಸಗಾರರ ನೇಮಕದ ...ಮಸೂದೆಯೂ ಸಿಲೆಕ್ಟ ಕಮೀಟಿಗೊಪ್ಪಿಸಲಾ...ಯಿತು.

ಹೆಚ್ಚು ಆಹಾರ ...ದ ಮಸೂದೆ

ಆಹಾರ ಮಂತ್ರಿ ಡಾ. ರಾಜೇಂದ್ರ ಪ್ರಸಾದರು ...ಭೂಮಿಯ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ...ಮಸೂದೆಯನ್ನು ಮಂಡಿಸಿದರು. ಅದರಲ್ಲಿ ಪಡ ...ಭೂಮಿಗಳನ್ನೂ ಬಾಗಿ ಅಡವಿಗಳನ್ನೂ ವಶ ...ಪಡಿಸಿಕೊಂಡು ಹೆಚ್ಚು ಆಹಾರ ಬೆಳೆಸುವ ಉಪಾ...ಯಗಳು ಯೋಜಿಸಲ್ಪಟ್ಟಿವೆ.

...ದಾದಿತನ (ನರ್ಸಿಂಗ್) ಕೌನ್ಸಿಲ ಮತ್ತು ...ಔಷಧ ಶಾಲೆ (ಫಾರ್ಮಸಿ)ಗಳಿಗೆ ಸಂಬಂಧಿಸಿದ ...ಎರಡು ಮಸೂದೆಗಳನ್ನು ಆರೋಗ್ಯ ಮಂತ್ರಿ ...ಅಮೃತ ಕುಮರಿಯವರು ಮಂಡಿಸಿದರು.

ಕಾಶ್ಮೀರ ದಾಳಿಯಲ್ಲಿ ಪಾಕಿಸ್ತಾನದ ಅಂಗ

“ಹಿಂದುಸ್ತಾನ ಸರಕಾರ ಕಾಶ್ಮೀರದ ವಿಷಯ ...ದಲ್ಲಿ ಕೈಕೊಂಡ ಪ್ರತಿಯೊಂದು ಕ್ರಮವೂ ಸದಿಚ್ಛೆ...ಯಿಂದಲೂ ಯಾವ ಸಂಶಯಕ್ಕೆ ಎಡೆಯಿಲ್ಲ...ದಂತೆಯೂ ಕೈಕೊಳ್ಳಲ್ಪಟ್ಟಿದೆ. ನಮ್ಮ ಧೋರಣ ...ಬೇಕಾದಾಗ ಜಗತ್ತಿನ ಮುಂದೆ ಸಮರ್ಥಿಸಿಕೊ...ಳ್ಳಲು ನಾನು ಸಿದ್ಧನಿದ್ದೇನೆ” ಎಂದು ಕಾಶ್ಮೀರದ ...ಬಗ್ಗೆ ಒಂದು ಪ್ರಶ್ನೆಗೆ ಉತ್ತರವಾಗಿ ಪ್ರಧಾನ ಮಂತ್ರಿ ಪಂ. ಜವಾಹರಲಾಲರು ತಾ. ೨೫ ಕ್ಕೆ ಸಾರಿದರು.

ಜಮ್ಮೂ ಕಾಶ್ಮೀರಗಳ ಮೇಲೆ ನಡೆದ ದಾಳಿ...ಯಲ್ಲಿ ಪಾಕಿಸ್ತಾನದ ಅಂಗವನ್ನು ವಿವರಿಸುತ್ತ ಅವರು ಅವು ಪಾಕಿಸ್ತಾನದ ವರಿಷ್ಠ ಅಧಿಕಾರಿ...ಗಳಿಂದ ಬುದ್ಧಿ ಪೂರ್ವಕ ಸುಸಜ್ಜಿತವಾಗಿ ಯೋಜಿ...ಸಲ್ಪಟ್ಟಿದ್ದವೆಂದು ಸಿದ್ಧ ಮಾಡಿ ತೋರಿಸಲು ಸಾಕಷ್ಟು ಪುರಾವೆಗಳು ದೊರೆತಿವೆಯೆಂದರು. ಗುಡ್ಡಗಾಡಿನ ಜನರಿಗೂ ಸೈನ್ಯದಿಂದ ನಿವೃತ್ತ...ರಾದವರಿಗೂ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನ ಅಧಿ...ಕಾರಿಗಳು ದೊರಕಿಸಿ ಕೊಟ್ಟಿದ್ದಾರೆ, ತಾವೂ ಆಯುಧಗಳನ್ನು ಪೂರೈಸಿದ್ದಾರೆ. ಮೋಟಾರ ...ಗಾಡಿಗಳನ್ನೊದಗಿಸಿದ್ದಾರೆ ಪೆಟ್ರೋಲ ಪೂರೈಸಿ...ದ್ದಾರೆ... ಸೈನ್ಯಾಧಿಕಾರಿಗಳನ್ನೂ ಪಾಕಿಸ್ತಾನ ಸರ...ಕಾರ ಒದಗಿಸಿದೆ. ಈಗಲೂ ಅವರಿಗೆ ಸಹಾಯ ...ಸಲ್ಲಿಸಿದೆ. ಪಾಕಿಸ್ತಾನದ ಪರಿಷ್ಕಾಧಿಕಾರಿಗಳು ...ತಾವು ದಾಳಿಗಾರರಿಗೆ ಸಹಾಯ ಸಲ್ಲಿಸುತ್ತಿರುವ...ದನ್ನು ಬಹಿರಂಗವಾಗಿ ಸಾರಿದ್ದುಂಟು... ...ನಡೆಸಾದ...

ಶಾಸನ ಸಭೆಯಲ್ಲಿ ಪಂ. ನೆಹರೂ ಅವರ ಖಂಡಿತೋಕ್ತಿ

ಉಪ್ಪಿನ ಮೇಲೆ ನಿಯಂತ್ರಣ, ಸಕ್ಕರೆಯ ವಿನಿಯಂತ್ರಣ

ಪಂಜಾಬ ನಿರಾಶ್ರಿತರ ಸ್ಥಿತಿಗತಿ

ತೆಂದು ಸಾರುವ ಉದ್ದೇಶ ಅವರದಿತ್ತೆಂದು ನಿರ್ಣಯಿಸದೆ ಗತ್ಯಂತರವಿಲ್ಲ. ಇದು ಕಾಶ್ಮೀರದ ವಿರುದ್ಧ ಮಾತ್ರವಲ್ಲ, ಹಿಂದೀ ಒಕ್ಕೂಟದ ಮೇಲೂ ಯುದ್ಧ ಹೂಡುವ ಕೃತ್ಯ.

ಅಯಕಟ್ಟಿನ ಪ್ರದೇಶವೆಂಬ ದೃಷ್ಟಿಯಿಂದಲೂ ಆರ್ಥಿಕ ಸಂಬಂಧದಿಂದಲೂ ಹಿಂದುಸ್ತಾನಕ್ಕೆ ಕಾಶ್ಮೀರದಲ್ಲಿ ಆಸ್ಥೆಯಿದ್ದರೂ ಕೇವಲ ಮಹಾರಾಜರು ಸೇರಿದರೆ ಸಾಲದು, ಪ್ರಜೆಗಳೂ ಒಪ್ಪಬೇಕೆಂದು ಹಿಂದುಸ್ತಾನ ಸರಕಾರ ಕಾಶ್ಮೀರದ ಮೇಲೆ ಹಿಂದುಸ್ತಾನದಲ್ಲಿ ಸೇರಲು ಒತ್ತಾಯ ತರಲಿಲ್ಲ.... ಆದರೆ ಪಾಕಿಸ್ತಾನ ಸರಕಾರ ಉಪ್ಪು, ಧಾನ್ಯ, ಸಕ್ಕರೆ ಮೊದಲಾದ ಅವಶ್ಯಕ ಪೂರೈಕೆಗಳನ್ನು ಕಾಶ್ಮೀರಕ್ಕೆ ಕೊಡದೆ ಅದನ್ನು ಹಣ್ಣುಮಾಡಿ ಪಾಕಿಸ್ತಾನದಲ್ಲಿ ಸೇರಿಸಿಕೊಳ್ಳುವ ಪ್ರಯತ್ನ ಮಾಡಿತ್ತು. ಸಪ್ಟೆಂಬರದಲ್ಲಿ ಗುಡ್ಡಗಾಡು ಜನರನ್ನು ಕಾಶ್ಮೀರ ಗಡಿಗಳ ಮೇಲೆ ದಾಳಿಮಾಡಲು ಕಳಿಸಲಾಯಿತು ಅಕ್ಟೋಬರದಲ್ಲಿ ಪರಿಸ್ಥಿತಿ ಗಂಭೀರವಾಯಿತು. ಪಶ್ಚಿಮ ಪಂಜಾಬದಿಂದ ಸಶಸ್ತ್ರ ಜನ ಸಮೂಹಗಳು ಒಳನುಗ್ಗಿದವು. ಹಳ್ಳಿಗಳನ್ನು ಸುಟ್ಟು, ಪಟ್ಟಣಗಳನ್ನು ಧ್ವಂಸ ಮಾಡಿ, ಅಸಂಖ್ಯ ಜನರನ್ನು ಕೊಂದು ಹಾಕಿದರು. ಸಂಸ್ಥಾನದ ಸೈನ್ಯ ದಾಳಿಯನ್ನೆದುರಿಸುವಲ್ಲಿ ಹರಿಹಂಚಾಗಿ ನಿಷ್ಪ್ರಯೋಜಕವಾಯಿತು. ಇಂಥ ವೇಳೆಯಲ್ಲಿ ಮಹಾರಾಜರ ಪರವಾಗಿ ಮತ್ತು ಶೇಖ ಅಬ್ದುಲ್ಲರ ಪರವಾಗಿ ನಮಗೆ ಸಹಾಯ ಯಾಚನೆ ಬಂತು. ನಾವು ೨೪ ತಾಸು ಕೂಡ ತಡ ಮಾಡಿದ್ದರೆ ಶ್ರೀನಗರ ವೈರಿ ವಶವಾಗುತ್ತಿತ್ತು ಗವರ್ನಾಂಧರಿಗೆ ಕಾಶ್ಮೀರ ಶರಣು ಹೋದರೆ ಇಡಿ ಹಿಂದುಸ್ತಾನಕ್ಕೆ ಗಂಡಾಂತರ ಬರುತ್ತಿತ್ತು.

ಕಾಶ್ಮೀರದ ಸೇರ್ಪಡೆಯ ಬಗ್ಗೆ ಯುಕ್ತ ರಾಷ್ಟ್ರ ಸಂಘದ ಆಶ್ರಯದಲ್ಲಿ ಮತಗಣನೆಗೆ ತಾವು ಸಿದ್ಧರಿರುವದಾಗಿ ಮುಖ್ಯ ಮಂತ್ರಿಗಳು ಪುನರುಚ್ಚರಿಸಿದರು. ಪ್ರಜಾಭಿಪ್ರಾಯ ಗೆಲ್ಲುವದೋ ಅತ್ಯಾಚಾರವೋ ಕಾಶ್ಮೀರದಲ್ಲಿ ನಿರ್ಣಯವಾಗಬೇಕಾಗಿದೆ. ಪಾಕಿಸ್ತಾನದ ಪ್ರೋತ್ಸಾಹದಿಂದ ದಾಳಿಗಾರರು ಖಡ್ಗ ಬಲದಿಂದ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೆಳೆದುಕೊಳ್ಳಲು ಪ್ರಯತ್ನಿಸಿದರು. ಪ್ರಜಾಭಿಪ್ರಾಯವನ್ನು ಬದಿಗೊತ್ತಿದರು. ಇಂಥ ಮಾರ್ಗಕ್ಕೆ ಜಯ ಸಿಗದಂತೆ ನಾವು ನೋಡಿಕೊಳ್ಳುವೆವು. ಕಷ್ಟ ಕಾಲದಲ್ಲಿ ನಾವು ಆ ಶೂರ ಕಾಶ್ಮೀರಿಗಳಿಗೆ ಸಹಾಯ ಸಲ್ಲಿಸಿದೆನೆಂದು ನನಗೆ ಆನಂದವಾಗುತ್ತದೆ. (ಹರ್ಷೋದ್ಗಾರ.) ಎಂದಿನಿಂದಲೂ ಕಾಶ್ಮೀರ ಹಿಂದುಸ್ತಾನಗಳು ಒಂದೇ. ಕಳೆದ ಕೆಲವಾರಗಳಲ್ಲಿ ಅಳಿವಿಲ್ಲದ ಹೊಸ ಸಂಬಂಧ ಬೆಸೆದಿದೆ ಎಂದು ಪಂ. ಜವಾಹರಲಾಲರು ಕೊನೆಗೊಳಿಸಿದರು.

ನಮ್ಮ ಸೈನ್ಯ

ಹಿಂದೀ ಸೈನ್ಯವನ್ನು ಆಧುನಿಕ ಪದ್ಧತಿಯಂತೆ ಸುಧಾರಿಸುವಲ್ಲಿ ಹಾಗು ಹೊಸ ಹೊಸ ಶಸ್ತ್ರಾಸ್ತ್ರಗಳನ್ನು ಬಳಕೆಗೆ ತರುವಲ್ಲಿ ಸರಕಾರ ಆಸ್ಥೆಯಿಂದಿದೆಯೆಂದು ಸಂರಕ್ಷಣ ಮಂತ್ರಿ ಬಲದೇವ ಸಿಂಗರು ಒಂದು ಪ್ರಶ್ನೆಗೆ ಉತ್ತರ ಕೊಟ್ಟರು. ಭಾವೀ ಸೈನ್ಯದ ಸಂಖ್ಯೆ ಎಷ್ಟಿರಬೇಕೆಂದು ವಿಚಾರಿಸಲಾಗುತ್ತಿದೆ. ಶಾಂತಿ ಕಾಲಕ್ಕೆ ಈಗಿರುವ ಸೈನ್ಯ ಸಾಕೆಂದು ಸರಕಾರದ ಅಭಿಪ್ರಾಯ.

ಹಿಂದೀ ಸೈನ್ಯದಲ್ಲಿ ಈಗ ೧೬ ಮೇಜರ ಜನರಲ್ಲರು ಮತ್ತು ೫೫ ಬ್ರಿಗೇಡಿಯರರು ಇದ್ದಾರೆ. ಇವರಲ್ಲಿ ೮ ಜನ ಮೇ. ಜನರಲ್ಲರು ಮತ್ತು ೧೬ ಬ್ರಿಗೇಡಿಯರರು ಹಿಂದೀಯರು ಬ್ರಿಟಿಶ ಅಧಿಕಾರಿಗಳ ಸಂಖ್ಯೆ ೧೨೦೪ ಇದೆ. ನವಂಬರ ೩೦ ಕ್ಕೆ ವರಿಷ್ಠ ಕಮಾಂಡರ ಸಂಸ್ಥೆ ವಿಸರ್ಜಿಸಲ್ಪಟ್ಟ ಮೇಲೆ ಹಿಂದೀ ಸೈನ್ಯದ ಪೂರ್ಣಾಧಿಕಾರ ಹಿಂದುಸ್ತಾನಕ್ಕೇ ಬರುವದು.

ರೇಲ್ವೇ ಮುಂಗಡ ಪತ್ರ

ತಾ ೨೫—೨೬ ಎರಡು ದಿನ ಚರ್ಚೆಯ ನಂತರ ಡಾ. ಜಾನ ಮಥಾಯರ ರೇಲ್ವೆ ಮುಂಗಡ ಪತ್ರ ೫೦ ಲಕ್ಷ ರೂಪಾಯಿ ಕಡಿತದೊಡನೆ ಅಂಗೀಕರಿಸಲ್ಪಟ್ಟಿತು. ರೇಲ್ವೆ ಆಡಳಿತದಲ್ಲಿ ಮಿತವ್ಯಯವಾಗಬೇಕೆಂಬ ಸದಸ್ಯರ ಒತ್ತಾಯದಲ್ಲಿ ಸರಕಾರದ ಸಹಾನುಭೂತಿಯನ್ನು ಪ್ರದರ್ಶಿಸುವ ಸಲುವಾಗಿ ಕಡಿತ... ...ಮೂರನೆ ವರ್ಗದಲ್ಲಿ ಅತಿರೇಕ ಜನದಟ್ಟಣೆ, ರೇಲ್ವೆ ಕೂಲಿಕಾರರ ಅಕ್ರಮತೆ, ರೇಲ್ವೆ ಸಾಮಗ್ರಿಗಳ ಕಳವು ಮೊದಲಾದ ದೋಷಗಳು ಸದಸ್ಯರ ಟೀಕೆಗೆ ಗುರಿಯಾದವು. ರೇಲ್ವೆ ಮಂತ್ರಿಗಳ ಉತ್ತರದ ಕೆಲಭಾಗಗಳು ಹೀಗಿವೆ. ಯುದ್ಧ ಪೂರ್ವಕ್ಕಿಂತ ಈಗ ಪ್ರವಾಸಿಕರ ಸಂಖ್ಯೆ ಇಮ್ಮಡಿಸಿದೆ. ಆದರೆ ಡಬ್ಬಿಗಳ ಸಂಖ್ಯೆ ನೂರಕ್ಕೆ ೧೦ ರಷ್ಟೇ ಹೆಚ್ಚಾಗಿದೆ. ಮುಂದಿನ ವರ್ಷ ೮೫೦ ಡಬ್ಬಿಗಳು ಹೆಚ್ಚಾಗಿ ಈ ಒತ್ತಡವನ್ನು ಕಡಿಮೆಮಾಡುವ ಆಶೆಯಿದೆ. ಮೂರನೆ ವರ್ಗದ ಪ್ರವಾಸಿಕರ ಸೌಖ್ಯಕ್ಕಾಗಿ ಈ ವರ್ಷ ಒಂದೂವರೆ ಕೋಟಿ ರೂಪಾಯಿ ತೆಗೆದಿಡಲಾಗಿದೆ. ಟಾಟಾ ಕಾರಖಾನೆಗಳಲ್ಲಿ ಬಾಯ್ಲರುಗಳೂ ಅಜಮೀರದಲ್ಲಿ ರೇಲ್ವೆ ಎಂಜಿನುಗಳೂ ತಯಾರಾಗುತ್ತಿವೆ. ಬ್ರಿಟನ್ನಿನಲ್ಲಿ ಯುದ್ಧ ಕಾಲದಲ್ಲಿ ರೇಲ್ವೆ ದರಗಳು ನೂರಕ್ಕೆ ೫೦ ರಷ್ಟು ಏರಿದರೂ ಇಲ್ಲಿ ೨೫ ರಷ್ಟು ಮಾತ್ರ ಏರಿದೆ. ರೇಲ್ವೆಗಳು ಸರಕಾರಿ ಆಡಳಿತದಲ್ಲಿದ್ದಿಲ್ಲವಾದರೆ ದರಗಳು ಇನ್ನೂ ಏರಬಹುದಾಗಿತ್ತು....

ತಾ ೨೬ ಕ್ಕೆ ಹಣಕಾಸಿನ ಮಂತ್ರಿ ಶ್ರೀ ಷಣ್ಮುಖಂ ಚೆಟ್ಟಿಯವರು ೭॥ ತಿಂಗಳ ನಡುಗಾಲ ಮುಂಗಡ ಪತ್ರವನ್ನು ಮಂಡಿಸಿದರು. (ವಿವರಗಳಿಗೆ, ಪುಟ ೧)

ಉಪ್ಪು ಸಕ್ಕರೆ ಮತ್ತು ನಿಯಂತ್ರಣ

ಪ್ರಶ್ನೋತ್ತರ ಕಾಲಕ್ಕೆ ಕೇಳಬಂದದ್ದು

ಹಿಂದುಸ್ತಾನದಲ್ಲಿ ಉಪ್ಪಿನ ವಾರ್ಷಿಕ ಉತ್ಪನ್ನ ೫ ಕೋಟಿ ಮಣ; ಬೇಕಾದ್ದು ೫॥ ಕೋಟಿ ಮಣ; ಕೊರತೆ ೫೦ ಲಕ್ಷ ಮಣ ಆದರಿಂದ ಉಪ್ಪಿನ ನಿಯಂತ್ರಣಾಜ್ಞೆಯನ್ನು ಸರಕಾರ ಹೊರಡಿಸಲಿದೆ.

ಸಕ್ಕರೆಯ ನಿಯಂತ್ರಣವನ್ನು ಕಿತ್ತು ಹಾಕುವ ನಿರ್ಧಾರವಾಗಿದೆ. ಆದರೆ ದಿನ ಗೊತ್ತಾಗಿಲ್ಲ.

ಆಹಾರ ಆಯಾತಕ್ಕೆ ೮೨೦೬೦೦೦೦೦ ರೂ. ವೆಚ್ಚ ಬರುತ್ತದೆ. ಪಾಕಿಸ್ತಾನಕ್ಕೆ ೮೧ ಲಕ್ಷ ರೂಪಾಯಿಗೆ ೧೫೦೦೦ ಟನ್ ಸಕ್ಕರೆ ಕೊಡಲಾಗಿದೆ.

ಕೆಲವು ನಿಯಂತ್ರಣಾಡಳಿತಗಳ ವೆಚ್ಚ ಇಂತಿವೆ ಜವಳಿವೆ ೪೧, ೫೬೨೦೦ ರೂಪಾಯಿ; ಉಕ್ಕು ಕಬ್ಬಿಣ ೨೬, ೪೩, ೮೬೫, ರೂ. ಕಲ್ಲಿದ್ದಲಿ ೧೬, ೪೦, ೧೯೨, ರೂ. ವೃತ್ತಪತ್ರ ೮೭, ೫೯೫ ರೂ.

ರಾಷ್ಟ್ರೀಯ ನಾಗರಿಕ ಸೈನ್ಯ

ಭಾರತೀಯ ಯುವಕರಿಗೆ ಶಸ್ತ್ರಾಸ್ತ್ರ ವಿದ್ಯೆ ಮತ್ತು ಆತ್ಮರಕ್ಷಣೆಯ ಕಲೆಯನ್ನೂ ಕಲಿಸಬೇಕೆಂಬ ಭಾವನೆ ಹಿಂದೀ ಶಾಸನಕರ್ತೃಗಳಿಗೆಷ್ಟು ತೀವ್ರವಾಗಿದೆಯೆಂಬ ಮತ ಡಾ. ಪಟ್ಟಾಭಿಯವರು ತಾ. ೨೬ ರಂದು ಅಂಥ ಏರ್ಪಾಡು ಮಾಡಬೇಕೆಂದು ಗೊತ್ತುವಳಿ ತಂದಾಗ ವ್ಯಕ್ತವಾಯಿತು.

ಸರಕಾರದ ಆಶ್ವಾಸನದ ನಂತರ ಗೊತ್ತುವಳಿ ಹಿಂತೆಗೆದುಕೊಳ್ಳಲ್ಪಟ್ಟರೂ ಅನೇಕ ಸದಸ್ಯರು ರಾಷ್ಟ್ರೀಯ ನಾಗರಿಕ ಸೈನ್ಯದ ಸಂಘಟನೆಯನ್ನು ಸರಕಾರ ಕೈಕೊಳ್ಳಬೇಕೆಂದು ಒತ್ತಾಯಗೊಳಿಸಿದರು. ಡಾ. ಪಟ್ಟಾಭಿಯವರು ದೇಶದಲ್ಲಿ ಕಟ್ಟು ಹರಿದು ಮೆರೆಯುತ್ತಿರುವ ಪ್ರತಿಗಾಮಿ ಮತ್ತು ಒಡಕಿನ ಪ್ರವೃತ್ತಿಗಳಿಂದ ದೇಶಕ್ಕೆ ಹಾನಿಯಾಗದಂತೆ ಮಾಡಬೇಕಾದರೆ ಇದು ಅವಶ್ಯವೆಂದೂ ಆರ್. ಎಸ್. ಎಸ್. ಮುಸ್ಲಿಂ ನ್ಯಾಶನಲ್ಲ ಗಾರ್ಡ್ಸ ಮೊದಲಾದ ಖಾಸಗಿ ಸೈನ್ಯಗಳನ್ನು ಈ ನಾಗರಿಕರ ಸೈನ್ಯದಲ್ಲಿ ವಿಲೀನಗೊಳಿಸಬೇಕೆಂದೂ ಸೂಚಿಸಿದರು. ಉತ್ತರಿಸಿದರು ಸಂರಕ್ಷಣಮಂತ್ರಿ ಬಲದೇವಸಿಂಗರು: ಪನಾದರೂ ದ್ವಿತೀಯ ವ್ಯೂಹ ರಕ್ಷಣೆಗೊಂದು ಸೈನ್ಯ ಬೇಕೆಂದು ಸರಕಾರಕ್ಕೆ ಮನವರಿಕೆಯಾಗಿದೆ. ಯುವಕರಿಗೆ ಸೈನ್ಯದ ಶಿಕ್ಷಣಕೊಡುವ ಅವಶ್ಯಕತೆಯುಂಟೆಂದೂ ಆ ಬಗ್ಗೆ ನ್ಯಾಶನಲ್ ಕ್ಯಾಡೆಟ ಕೋರ ಸಮಿತಿಯವರು ಸೂಚನೆಮಾಡಿದ್ದು ೧೬೫೦೦೦ ತರುಣರಿಗೆ ಶಿಕ್ಷಣ ಕೊಡಬೇಕಾಗುವದೆಂದೂ ಅದಕ್ಕೆ ೩॥ ಕೋಟಿ ಪ್ರಾರಂಭಿಕ ಮತ್ತು ೨॥ ಕೋಟಿ ವಾರ್ಷಿಕ ವೆಚ್ಚಬರುವದೆಂದೂ ಅಂದಾಜಮಾಡಲಾಗಿದೆಯೆಂದರು. ೧೫ ರಿಂದ ೨೧ ವಯಸ್ಸಿನ ಎಲ್ಲ ಶಾಲಾ ಬಾಲಕರಿಗೆ ಸೈನ್ಯ ಶಿಕ್ಷಣ ಕೊಟ್ಟರೆ ೨೧ ಕೋಟಿ ಪ್ರಾರಂಭಿಕ ಹಾಗು ೧೫ ಕೋಟಿ ವಾರ್ಷಿಕ ವೆಚ್ಚಬರು...

ಸ್ವಾತಂತ್ರ್ಯ ಸ್ಮಾರಕ ತಿಕೀಟುಗಳು



ಭಾರತ ಸ್ವಾತಂತ್ರ್ಯ ಲಾಭದ ಸ್ಮಾರಕಕ್ಕಾಗಿ ನಾಸಿಕದ ಇಂಡಿಯಾ ಸೆಕ್ಯೂರಿಟಿ ಪ್ರೆಸ್ಸಿನಲ್ಲಿ ಈ ತಿಕೀಟುಗಳು ಮುದ್ರಿತವಾಗಿವೆ. ೧॥ ಆಣೆಯ ತಿಕೀಟು ಮೊದು ಹಚ್ಚನೆಯ ಬಣ್ಣದಲ್ಲಿದ್ದು ಅದು ಅಶೋಕ ಸಿಂಹಸ್ತಂಭಾಂಕಿತವೂ ಅಶೋಕ ಚಕ್ರಾಂಕಿತವೂ ಆಗಿದೆ. ೩॥ ಆಣೆಯ ತಿಕೀಟಿನಲ್ಲಿ ತ್ರಿವರ್ಣ ರಂಜಿತವಾದ ರಾಷ್ಟ್ರಧ್ವಜವಿದ್ದು ಅದರ ಹಿನ್ನೆಲೆಗೆ ಆಕಾಶನೀಲವರ್ಣವಿದೆ. ೧೨ ಆಣೆಯ ಏರಮೇಲ ತಿಕೀಟಿನಲ್ಲಿ ನಾಲ್ಕು ಎಂಜಿನ್ನುಗಳ ಒಂದು ವಿಮಾನವಿದ್ದು ನೀಲವರ್ಣದಲ್ಲಿ ಮುದ್ರಿತವಾಗಿದೆ. ತಿಕೀಟು ಸಂಗ್ರಹಿಸುವ ಚಪಲವಿದ್ದವರು ಫಿಲೆಟೆಲಿಕ್ ಬ್ಯೂರೊ (Philatelic Bureau) G. P. O. ಮುಂಬಯಿಗೆ ಬರೆದು ಹೆಚ್ಚಿನ ವಿವರ ತಿಳಿಯುವದು.

ಸಾಮಾಜಿಕ ಬಹಿಷ್ಕಾರ ತಡೆಯುತ್ತೇನೆ

ಮದ್ರಾಸ ಶಾಸನ ಸಭೆಯಲ್ಲಿ ಪ್ರಶ್ನೋತ್ತರ ಸಮಯದಲ್ಲಿ ಗೃಹಮಂತ್ರಿ ಡಾ. ಪಿ. ಸುಬ್ಬರಾಯರು ಉತ್ತರ ಕೊಡುತ್ತ ರಾಷ್ಟ್ರದಲ್ಲಿ ಜಾತೀಯ ವಿಷವು ಹರಡಿರುವದಕ್ಕೆ ಮುಸ್ಲಿಂ ಲೀಗಿನ ದ್ವಿರಾಷ್ಟ್ರ ತತ್ವವೇ ಕಾರಣವೆಂದೂ ಪ್ರಾಂತದ ಜಾತೀಯ ಪರಿಸ್ಥಿತಿಯ ಬಗ್ಗೆ ಸರಕಾರವು ಎದೆಗುಂದಿಲ್ಲವೆಂದೂ ಸರಕಾರ ತನ್ನ ಹೊಣೆಗಾರಿಕೆಯನ್ನು ಅರಿತಿದೆಯೆಂದೂ ಹೇಳಿದರಲ್ಲದೆ ದ್ವಿರಾಷ್ಟ್ರ ತತ್ವದಲ್ಲಿ ನಂಬಿಗೆಯಿದ್ದವರು ಪಾಕಿಸ್ತಾನಕ್ಕೆ ಹೋಗಬೇಕೆಂದು ಸ್ಪಷ್ಟಪಡಿಸಿದರು.

ಮುಸಲ್ಮಾನರಿಗೆ ಸಾಮಾಜಿಕ ಬಹಿಷ್ಕಾರ ಹಾಕುವದನ್ನು ಸರಕಾರವು ಸಮರ್ಥಿಸುವದೋ ಎಂದು ಓರ್ವ ಲೀಗ ಸದಸ್ಯರು ಕೇಳಲು ಮಂತ್ರಿಗಳು ಅದನ್ನು ಸರಕಾರವು ಸರ್ವಶಕ್ತಿಯಿಂದಲೂ ಹತ್ತಿಕ್ಕುವದೆಂದು ನಿರ್ಧಾರವಾಗಿ ನುಡಿದರು.

ನಿರಾಶ್ರಿತರು

ತಾ. ೨೬—೨೭ ಎರಡೂ ದಿನ ನಿರಾಶ್ರಿತರ ಪ್ರಶ್ನೆಗಾಗಿ ಶಾಸನಸಭೆಯ ಸಮಯವನ್ನು ಸಾಕಷ್ಟು ಉಪಯೋಗಿಸಲಾಯಿತು. ಈ ವಿಷಯದಲ್ಲಿ ಪ್ರಶ್ನೋತ್ತರವಲ್ಲದೆ, ದೀರ್ಘ ಚರ್ಚೆಯು ನಡೆಯಿತು. ನಿರಾಶ್ರಿತರ ಪುನರ್ನಿವಾಸ ಮಂತ್ರಿ ಶ್ರೀ. ಕೆ. ಸಿ. ನಿಯೋಗಿಯವರು ಈ ಬಗ್ಗೆ ಹಲ ವಿವರಗಳನ್ನೊದಗಿಸಿದರು. ಪಾಕಿಸ್ತಾನದಲ್ಲಿ ನೂರುಬಗೆಯ ಮುಸ್ಲಿಂಮೇತರರು ಉಳಿದಿದ್ದಾರೆ. ಅವರೊಳಗೆ ಅಪಹೃತ ಸ್ತ್ರೀಯರು ಬಲಾತ್ಕಾರದಿಂದ ಮತಾಂತರಗೊಳಿಸಲ್ಪಟ್ಟವರುಹಾಗು ಹರಿಜನರು ಇರುವರು ಮೊದಲಿನ ಎರಡು ಬಗೆಯವರಗೊತ್ತುಗುರಿ ಹಚ್ಚುವ ಪ್ರಯತ್ನ ನಡೆದಿದೆ. ಆದರೆ ಅದರಲ್ಲಿ ಪಾಕಿಸ್ತಾನ ಸರಕಾರದ ಸಹಕಾರದೊರೆಯದೆ ಕೆಲಸವಾಗದು. ಹರಿಜನರು ವಿಚಿತ್ರ ಸ್ಥಿತಿಯಲ್ಲಿದ್ದಾರೆ. ತಾವಾಗಿ ಅವರು ಅಲ್ಲಿಂದ ಹೊರಟು ಬರುವಷ್ಟು ಅವರ ಕೈಯಲ್ಲಿ ಹಣವಿಲ್ಲ. ಅವರು ಅವಶ್ಯಕ ಸೇವೆಸಲ್ಲಿಸುವವರಿರುವದರಿಂದ ಸ್ಥಾನಾಂತರಕ್ಕೆ ಪಾಕಿಸ್ತಾನ ಸರಕಾರ ಅನೂಕೂಲ ಕಲ್ಪಿಸಿಕೊಡದಾಗಿದೆ. ಆದರೂ ಸರಕಾರ ಕೈಲಾದುದನ್ನೆಲ್ಲ ಮಾಡುವದು ಪಾಕಿಸ್ತಾನದಿಂದ ಇನ್ನೂ ೫ ಲಕ್ಷ ಜನರ ಸ್ಥಾನಾಂತರವಾಗಬೇಕಾಗಿದೆ. ಈ ವರೆಗೆ ೪೦ ಲಕ್ಷ ಜನರನ್ನು ಪಶ್ಚಿಮ ಪಾಕಿಸ್ತಾನದಿಂದ ಪಾರುಮಾಡಲಾಗಿದೆ ೫ ಲಕ್ಷ ಜನರು ಆಗಷ್ಟ ೧೫ ರ ಮೊದಲೆ ಬಂದಿದ್ದರು ಉಳಿದವರ ಸ್ಥಾನಾಂತರಕ್ಕೆ ಸಾರಿಗೆ ವ್ಯವಸ್ಥೆ ಮಾಡಲಾಗಿದೆ ನಿರಾಶ್ರಿತರಿಗೆ ಪರಿಹಾರ ಒದಗಿಸುವ ಕಾರ್ಯದ ಅಗಾಧತೆಯನ್ನು ನೋಡಿದರೆ ಈವರೆಗಾದ ಕಾರ್ಯ ಅಪೂರ್ಣವೆಂದೊಪ್ಪಿಕೊಂಡು ಮಂತ್ರಿಗಳು ಈ ಬಗ್ಗೆ ಆದ ಕೆಲಸದ ವಿವರವನ್ನೊದಗಿಸಿದರು ಚರ್ಚೆಯಲ್ಲಿ ನಡೆದ ಟೀಕೆಗಳಿಗೆ ಉತ್ತರರೀಯತ್ತ ಪಂಡಿತ ಜವಾಹರಲಾಲ ನೆಹರೂರವರು ಈ ಸಮಸ್ಯೆಯನ್ನು ನಾವೀಗ ಬಿಡಿಸುತ್ತಿರುವ ಬಗ್ಗೆ ಮುಂದಿನ ಪೀಳಿಗೆಯೇನೆ ಅನ್ನಲಿ ಹಿಂದೀ ಜನರು ಈ ಸಮಸ್ಯೆಯನ್ನು ಧೈರ್ಯದಿಂದ ಎದುರಿಸಿ ಬಿಡಿಸಿದರೆಂದು ಇತಿಹಾಸ ಉಲ್ಲೇಖಿಸದಿರದು ಎಂದು ತಮ್ಮ ಆತ್ಮವಿಶ್ವಾಸವನ್ನು ವ್ಯಕ್ತಗೊ...

ಕರ್ಮವೀರ
ಹರಿಜನ ಪುರವಣಿ

ಅದರ ಸದುಪಯೋಗ

" ನಿರಾಶ್ರಿತರೊಡನೆ ನಿಮ್ಮ ಸಂಬಂಧ ಬೇರೆ ಎಲ್ಲ ಜನರಷ್ಟೇ ಇದೆ. ಅವರ ದುರ್ದೆಸೆಯು ಕತೆಗಳು ಎದೆಕರಗಿಸುವಂತಹವಿವೆ. ಕೆಲದಿನಗಳ ಹಿಂದೆಯೆ ಲಕ್ಷಾಧೀಶರಾಗಿದ್ದ ಅವರು ಇಂದು ಭಿಕ್ಷುಕರಾಗಿ ಪರಿಣಮಿಸಿದ್ದಾರೆ. ವೈದ್ಯಕೀಯ ವ್ಯವಸಾಯವನ್ನು ಮಾಡುತಿದ್ದವರು ತಮ್ಮ ಯಾವ ಉಪಕರಣಗಳನ್ನೂ ತರಲು ಸಮರ್ಥರಾಗಲಿಲ್ಲ! ಅವರ ವೈದ್ಯಕೀಯ ಪುಸ್ತಕಗಳನ್ನು ಕೂಡ ತರಬಿಟ್ಟಿರುವದಿಲ್ಲ. ಖಾಸಗಿ ಸೊತ್ತು ಮತ್ತು ಹಣವನ್ನೆಲ್ಲ ಹಿಂದೆಯೆ ಬಿಟ್ಟುಗೊಟ್ಟು ಬರಬೇಕಾಯಿತು. ಅವರು ಖಚಿತವಾಗಿ ನಿರ್ಧನಿಕರಾಗಿರುವರು. ಮನೆಮಾರುಗಳಿಲ್ಲದವಾಗಿರುವರು ಹೋರಿಗೇಡಿಗಳೂ ಆಗಿರುವರು. ಮುಂದೇನು ಮಾಡಬೇಕೆಂಬುದೇ ಅವರಿಗೆ ತೋಚದಾಗಿದೆ.

"ಇದೀಗ ನಮಗೆ ಬಂದ ವಿಪತ್ತು ಬಂದು ಬಗೆಯಿಂದ ನಮ್ಮ ಸತ್ವವನ್ನು ಪರೀಕ್ಷಿಸುವುದಕ್ಕಾಗಿಬಂದಿಹದೆಯೆಂದು ಪ್ರಾರ್ಥನೋತ್ತರ ಭಾಷಣಗಳಲ್ಲಿ ಹಲವಾರು ಸಲ ಪ್ರತಿಪಾದಿಸಿದ್ದುಂಟು. ಅದರಲ್ಲಿ ನಾವು ವಿಜಯಿಗಳಾಗುವೆವೊ ಇಲ್ಲವೆ ಪರಾಜಯ ಹೊಂದುವೆವೊ ಎಂಬುದು ನಿಮ್ಮನ್ನೇ ಅವಲಂಬಿಸುವುದು. ಪ್ರತಿಯೊಬ್ಬರ ಹೃದಯವು ಈ ನಿರ್ವಾಸಿತರಿಗೆ ಸಹಾನುಭೂತಿಯಿತ್ತು ಮಿಡುವುದಾದರೂ ಅವರಲ್ಲಿಯ ಕೆಲವೊಂದು ಬಗೆಯ ಸಾಧನ ಸಂಪತ್ತಿನ ಅಭಾವವಿದ್ದುದರಿಂದ ಅವರು ಮತ್ತಷ್ಟು ದುಃಖಿಗಳಾಗಿರುವರು. ಪಾಕಿಸ್ತಾನದಲ್ಲಿಯ ಬೇರೆ ಬೇರೆ ನಗರಗಳಲ್ಲಿ ಅತ್ಯಂತ ಲಾಭಕರವಾದ ತಮ್ಮ ಉದ್ಯೋಗಗಳನ್ನು ಕಳೆದುಕೊಂಡು ಈ ಡಾಕ್ಟರ, ವೈದ್ಯರು ಬೇಡಿಕೆಯೆಂದರೆ ದಿಲ್ಲಿಯಲ್ಲಿ ತಮಗನುಕೂಲ ತೋರುವ ಯಾವದೊಂದು ಸ್ಥಳದಲ್ಲಿ ಅಂಗಡಿಯನ್ನೋ ವಸತಿಯನ್ನೋ ಕಲ್ಪಿಸಿಕೊಡಬೇಕೆಂಬುದು. ನೌಕರಿಯನ್ನು ಕಳೆದುಕೊಂಡು ಸ್ತ್ರೀಪುರುಷರ ಬೇಡಿಕೆಯಾದರೂ ತಮ್ಮ ತಮ್ಮ ನೌಕರಿಗಳನ್ನು ಮಾತ್ರ ತಿರುಗಿಕೊಡಿಸಬೇಕೆಂಬುದಾಗಿದೆ. ಸಾವಿರಗಟ್ಟಲೆ ನಿರ್ವಾಸಿತರಲ್ಲಿ ಕೆಲವರಿಗಷ್ಟೇ ಇಚ್ಛಿತ ವಸತಿಸ್ಥಾನಗಳು ಸಿಕ್ಕಬಲ್ಲವೆಂಬುದು ಸಹಜವಾದದು. ಎಲ್ಲರಿಗೂ ಬೇಕು ವೇಳೆ ಸ್ಥಳ ಸಿಕ್ಕಿತೆಂದು ತಿಳಿದರೂ ಒಂದೇ ನಗರದಲ್ಲಿ ಅವರೆಲ್ಲರೂ ತಮ್ಮ ವೈದ್ಯಕೀಯ ಉದ್ಯೋಗವನ್ನು ಸಾಗಿಸಲಾರರು. ವಸತಿ ಸ್ಥಾನ ಸಿಕ್ಕದಿದ್ದವರು ತಮಗೆ ನ್ಯಾಯದೊರೆಯಲಿಲ್ಲೆಂದು ಗೋಳಾಡುತ್ತಿರುವರು. ಈ ಪರಿಸ್ಥಿತಿಯಲ್ಲಿ ಈ ಜನರಿಗೆ ಯೋಗ್ಯ ಮಾರ್ಗವನ್ನು ತೋರಿಸುವುದಕ್ಕಾಗಿ ಸಲಹೆಯಂದು ಕೆಲಮಾತುಗಳನ್ನು ಬರೆಯುವದು ಅವಶ್ಯವೆಂದು ನನಗನಿಸುತ್ತದೆ. "ನಮ್ಮ ದೇಶದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಸ್ವಾರ್ಥತ್ಯಾಗದ ಆವಶ್ಯಕತೆಯಿದೆ. ವಿಶೇಷತಃ ವೈದ್ಯಕೀಯ ವೃತ್ತಿಯ ವಿವಿಧಶಾಖೆಗಳಲ್ಲಿ ನುರಿತ ಜನರು ಬೇರೆ ಬೇರೆ ಸಣ್ಣ ನಗರಗಳಲ್ಲಿ ಹಳ್ಳಿಗಳಲ್ಲಿ ನೆಲೆಸಲು ಸಿದ್ಧರಾದರೆ ಅವರು ತಮ್ಮ ವೃತ್ತಿಯನ್ನು ಸಾಗಿಸಿಕೊಂಡು ಹೋಗಬಲ್ಲರು. ಇಷ್ಟೇ ಅಲ್ಲ, ಆಯಾಸ್ಥಳಗಳಲ್ಲಿಯ ಜನರಿಗೆ ವೈದ್ಯಕೀಯ ಉಪಚಾರದ ಜೊತೆಗೆ ಸ್ವಚ್ಛತೆಯಿಂದಿದ್ದು ಬೇನೆಗಳು ಬಾರದಂತೆ ಎಚ್ಚರಪಡಬೇಕೆಂಬುದನ್ನು ಕಲಿಸಬಲ್ಲರು. ಸರಕಾರದವರು ತಮ್ಮ ಗ್ರಾಮೋದ್ಧಾರ ಯೋಜನೆಯನ್ನು ನಿಜವಾಗಿ ಕಾರ್ಯಕಾರಿ ಮಾಡಬಯಸಿದರೆ ವೈದ್ಯಕೀಯ ವೃತ್ತಿಯವರನ್ನೂ ತಮ್ಮ ಶಿಕ್ಷಕರನ್ನೂ ತಮ್ಮ ನೌಕರಿಯಲ್ಲಿಯೇ ತುಂಬಿಕೊಳ್ಳಬಲ್ಲರೆಂಬಲ್ಲಿ ವ್ಯಕ್ತಿಶಃ ನನಗಾವ ಅಡಚಣೆಗಳೂ ತೋರುವುದಿಲ್ಲ. ಯಾವದೊಂದು ತಾಲೂಕಿನ ಮುಖ್ಯ ಸ್ಥಳದಲ್ಲಿ ಇಲ್ಲವೆ ಹಳ್ಳಿಯಲ್ಲಿ ಕೂಡ ಖಾಸಗಿ ವ್ಯವಸಾಯ ಮಾಡುವ ಡಾಕ್ಟರರು, ವೈದ್ಯರು ಕೆಲ ಕಾಲ ಗತಿಸಿದ ನಂತರ ಜೀವನ ವೇತನವನ್ನು ಸಂಪಾದಿಸಬಲ್ಲರು. ಆದರೆ ಅವರು ನಗರ ಜೀವನದ ಸುಖ ಸೌಕರ್ಯಗಳನ್ನು ಬಿಟ್ಟುಗೊಡಲಿಕ್ಕೆ ಮಾತ್ರ ಸಿದ್ಧರಾಗಬೇಕು. ಕೆಲ ಸಲ ಈ ಸುಖಸೌಕರ್ಯಗಳೂ ಅವರ ಹಿತಕ್ಕಾಗಿ ಇರುವುದಿಲ್ಲ. ಅವರು ಕಾರ್ಯಕುಶಲರು, ಪ್ರಾಮಾಣಿಕರು ಮತ್ತು ಸಹಾನುಭೂತಿಪರರು ಆಗಿದ್ದಾರೆ. ಇಂಥಿನಂತೆ ಅವರು ರಾಷ್ಟ್ರಕ್ಕೆ ಭಾರವಾಗಿ ಪರಿಣಮಿಸದೆ ಧನಿಕರಾಗಿಯೋ ಪರಿಣಮಿಸುವರೆಂಬುದ್ರಲ್ಲಿ ಸಂದೇಹವಿಲ್ಲ. ಆಗ ಇಂದು ನಮಗೊದಗಿದ ವಿಪತ್ತು ಕಲ್ಯಾಣಕರವಾಗಿಯೋ ಪರಿಣಮಿಸಬಲ್ಲದು".

ಈ ದುರಂತದ ವಿವರಗಳಲ್ಲಿ ಇಳಿಯದೆ ಒಂದು ಪತ್ರವಿದು. ಈ ದುರಂತಕ್ಕೆ ಈಡಾದ ಜನರು ಯೋಗ್ಯ ರೀತಿಯಿಂದ ವರ್ತಿಸಿದ್ದಾದರೆ ಮತ್ತು ಯಾರ ಮಧ್ಯದಲ್ಲಿ ಈ ಮಧ್ಯೆ ಅವರು ಬಂದು ಸದ್ಯಕ್ಕೆ ನೆಲೆಸಬೇಕಾಗಿರುವದೋ ಅವರೂ ಯೋಗ್ಯ ರೀತಿಯಿಂದ ವರ್ತಿಸಿದ್ದಾದರೆ ಈ ದುರಂತವೂ ಕಲ್ಯಾಣಕರವಾಗಿಯೋ ಪರಿಣಮಿಸುವದೆಂಬಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಈ ದೃಷ್ಟಿಯಿಂದ ಎಲ್ಲ ಅವರೂ ವಿಶೇಷತಃ ಡಾಕ್ಟರರು, ವಕೀಲರು, ವೈದ್ಯರು, ಶಿಕ್ಷಕರು, ದಾಯಿಗಳು, ವ್ಯಾಪಾರಸ್ಥರು ಮತ್ತು ಬ್ಯಾಂಕರರಂಥ ವಿಶಿಷ್ಟ ರೀತಿಯಿಂದ ಅಧಿಕಾರಸಂಪನ್ನರಾದವರು ಉಳಿದವರೊಡನೆ ಸಂಪೂರ್ಣ ಸಹಕಾರದಿಂದ ಶಿಬಿರ ಜೀವನವನ್ನು ಸಾಗಿಸಲು ಸಿದ್ಧರಾಗುವರೆಂದೂ ಧರ್ಮದಾಯದ ಮೇಲೆಯೇ ಜೀವಿಸುವಂತಹ ನಿಃಸಹಾಯಕರಂತೆ ಆಗದೆ ತಮ್ಮ ದುಃಖವನ್ನು ತಡೆಹಿಡಿಕೊಂಡು ಭವಿಷ್ಯತ್ತಿನಲ್ಲಿ ವಿಶ್ವಾಸವಿಟ್ಟು ಸ್ವತಂತ್ರ ಸ್ವಾವಲಂಬಿ ಸ್ತ್ರೀಪುರುಷರಾಗಬಲ್ಲರೆಂಬಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ತಮ್ಮ ಕಷ್ಟ ಜೀವನದಿಂದ ಭವಿಷ್ಯತ್ತಿನಲ್ಲಿ ಉಜ್ವಲ ಜೀವನವನ್ನು ಸಿದ್ಧಿಮಾಡಿಕೊಳ್ಳಬಲ್ಲೆವೆಂಬ ಎರಡನೆಯವರಿಗೆ ಮಾದರಿಯಾಗುವಂಥ ಜೀವನವನ್ನು ನಡೆಸಬಲ್ಲರೆಂಬಲ್ಲಿಯೂ ನನಗೆ ಸಂಶಯವಿಲ್ಲ.

ಇಂಥ ವ್ಯವಸಾಯ ಮಾಡುವ ಜನರು ಈ ಬಗೆಯ ನಿಃಸ್ವಾರ್ಥ ಜೀವನ ಸಾಗಿಸುವಲ್ಲಿ ಸಹಕರಿಸಿದಾಗ ಮತ್ತು ಯಾವಾಗ ಇವರನ್ನು ಇಂಥ ಶಿಬಿರಗಳಿಂದ ಹೊರಗೆ ಕಳಿಸಲು ಸಾಧ್ಯವಾಗುವುದೋ ಆಗ ಅವರು ಹಳ್ಳಿ ಹಳ್ಳಿಗಳಿಗೆ ಮತ್ತು ಇತರ ಸ್ಥಳಗಳಿಗೆ ಹೋಗಿ ತಮ್ಮ ಕಾರ್ಯಕ್ರಮದ ಪ್ರಚಾರ ಮಾಡಲು ಸಮರ್ಥರಾಗಬಲ್ಲರು.

ಹೊಸದಿಲ್ಲಿ — ಮೋ. ಕ. ಗಾಂಧಿ
೨೦—೧೧—೪೭

ಗುರುನಾನಕರ ವರ್ಧಂತಿಯ ದಿನ
ಶೀಖರಿಗೆ ಗಾಂಧಿಯವರ ಉಪದೇಶ

ಸಾಮಾಜಿಕ ನಡೆಯ ನಿಯಮಗಳು

ನಾನು ಹೇಳ ಬೇಕೆಂದಿರುವುದನ್ನೆಲ್ಲ ಬಹುಶಃ ನನಗೆಹೇಳಲು ಸಾಧ್ಯವಾಗದೆಂದು ತೋರುತ್ತದೆ. ನೀವು ಮಿಲಿಟರಿ ಯಂತ್ರದಲ್ಲಿ ಹೊಕ್ಕು ಹೊರಟವರಾದುದರಿಂದ ಸಂಪೂರ್ಣ ಮೌನವನ್ನು ಆಚರಿಸುವಿರೆಂದೂ ನಾನು ನಂಬಿದ್ದೆ. ಆದರೆ ಆ ಶಿಸ್ತು ಸಹೋದರಿಯರನ್ನು ಮುಟ್ಟಿಲ್ಲ. ಆದುದರಿಂದ ಬಹಿರಂಗ ಸಭೆಗಳ ನಿಯಮಗಳನ್ನು ಪಾಲಿಸಲು ಅವರಿಗೆ ಬರದು. ನಾನು ಕೆಲ ವರ್ಷಗಳ ಹಿಂದೆ ಅಮೃತಸರದಲ್ಲಿದ್ದಾಗ ಅದೇ ಅನುಭವ ಹೊಂದಿದ್ದೆ. ತಪ್ಪು ಗಂಡಸರದ್ದೇ ಎಂದು ನೀವು ಒಪ್ಪುವಿರಿ. ಸಭಾಂಗಣವನ್ನು ಪ್ರವೇಶಿಸುವಾಗ ಬಾಳೆಯ ಮತ್ತು ಕಿತ್ತಳೆ ಹಣ್ಣುಗಳ ಸಿಪ್ಪೆಯನ್ನು ಅಲ್ಲಲ್ಲಿ ಚೆಲ್ಲಿದ್ದನ್ನು ಕಂಡೆ. ಅವು ಸ್ಥಳವನ್ನು ಕೊಳೆ ಮಾಡಿದ್ದಲ್ಲದೆ ನಡೆಯಲು ಅಪಾಯಕರವಾದುದನ್ನಾಗಿಯೂ ಮಾಡಿವೆ. ಮನೆಯ ನೆಲದಂತೆ ರಸ್ತೆ ಮತ್ತು ಕಾಲುದಾರಿಗಳನ್ನು ಚೊಕ್ಕಟವಾಗಿಡುವದನ್ನು ನಾವು ಕಲಿಯಬೇಕು. ಕಸದ ಬುಟ್ಟಿಗಳಿಲ್ಲದುದರಿಂದ ಕೆಲ ಶಿಸ್ತುಗಾರರು ಅವನ್ನು ಹಿಂದು ಚೂರು ಕಾಗದದಲ್ಲಿ ಸುತ್ತಿ ಕಿಸೆಯೊಳಗೆ ಕೆಲ ಹೊತ್ತಿಟ್ಟುಕೊಂಡು ಅನಂತರ ಯಾರಿಗೂ ಕಾಣದಂತೆ ಎಲ್ಲಿಯಾದರೂ ಒಗೆಯುವುದನ್ನೂ ಕಂಡೆ. ನಾವು ಸಾಮಾಜಿಕ ನಡೆಯನ್ನು ಕಲಿತಿರುವವರಾದರೆ ಅದನ್ನು ತಮ್ಮ ಸ್ತ್ರೀಯರಿಗೆ ಕಲಿಸುವುದು ಪುರುಷರ ಕರ್ತವ್ಯ.

ತಾಳಿಕೊಳುವ ಕಹಿಗುಳಿಗೆ

ಬೇಗ್ಗೆ ಬಾವಾ ಬಚಿತ್ತರ ಸಿಂಗನು ನನ್ನೆದೆಗೆ ಬಂದು ತಾನು ಗುರುನಾನಕರ ವರ್ಧಂತಿಗೆ ಬರಬೇಕೆಂದು ಒತ್ತಾಯ ಪಡಿಸಿದನು. ಒಂದು ಲಕ್ಷಕ್ಕಿಂತ ಹೆಚ್ಚು ಜನರು ಅಲ್ಲಿ ನೆರೆದಿದ್ದರೆಂದು ಅವನು ಹೇಳಿದನು; ಅಲ್ಲದೆ ಅವರಲ್ಲಿ ಬಹಳ ಜನರು ಪಶ್ಚಿಮ ಪಂಜಾಬಿನಿಂದ ಓಡಿ ಬಂದವರೆಂದೂ ತಿಳಿಸಿದನು. ಬಹಳ ಜನ ಶೀಖರು ನನ್ನ ಬಗ್ಗೆ ಅಸಮಾಧಾನ ಪಟ್ಟುಕೊಂಡಿದ್ದಾರೆಂದು ನನಗನ್ನಿಸಿದ್ದರಿಂದ ನಾನು ಸ್ವಲ್ಪ ಅನುಮಾನಿಸಿದೆ. ಆದರೆ ಬಾವಾ ಸಾಹೇಬನು ಒತ್ತಾಯ ಮಾಡಿಯೇ ಮಾಡಿದನು ಮತ್ತು ನಾನು ಹೇಳತಕ್ಕದ್ದನ್ನು ಸಭೆಯ ಎದುರು ಹೇಳಿಯೇ ಬಿಡಬೇಕೆಂದನು ಹಾಗೇ ಆಗಲೆಂದು ಹೇಳಿ ತಾಯಿ ಮಗುವಿನ ಹಿತಕ್ಕಾಗಿ ಕಹಿ ಗುಳಿಗೆಯನ್ನು ತಿನ್ನಿಸುವಂತೆ ನಾನಾದರೂ ನಿಮಗೆ ಕಹಿಯೆಂದು ತೋರಬಹುದಾದ ಸಂಗತಿಗಳನ್ನು ಹೇಳುವ ಸ್ವಾತಂತ್ರ್ಯವನ್ನು ವಹಿಸಬೇಕೆಂದು ಮಾಡಿದೆ. ನಿಜವಾಗಿಯೂ ಪರಿಣಾಮತಃ ಅವುನಿಮ್ಮ ಒಳ್ಳೆಯದಕ್ಕೇ ಆಗಿವೆ. ನನ್ನ ತಾಯಿ ಯಾವಾಗಲೂ ನನಗೆ ಕಹಿ ಔಷಧಗಳನ್ನು ಕುಡಿಸುತ್ತಿದ್ದಳು; ಆದರೆ ಅವಳ ತೊಡೆಯ ಮೇಲೆ ಮಲಗಿದರೆ ಆಗುತ್ತಿದ್ದ ಸುಖ ಮತ್ತೆಲ್ಲಿ ಮಲಗಿದರೂ ಆಗುತ್ತಿದ್ದಿಲ್ಲ. ಇಲ್ಲಿಯ ವರೆಗೆ ನಾನು ನಿಮಗೆ ಏನೇ ಹೇಳಿರಲಿ, ಆ ಬಗ್ಗೆ ನಾನು ವ್ಯಥೆ ಪಡುವದಿಲ್ಲ. ಆ ಮಾತುಗಳನ್ನು ನಿಮ್ಮ ಪ್ರಾಮಾಣಿಕ ಗೆಳೆಯನಾಗಿಯೂ ಸೇವಕನಾಗಿಯೂ ನಾನು ಹೇಳಿದ್ದೇನೆ. ನನ್ನ ಜೊತೆಗೆ ಸರದಾರ ನಾಥಾರ ಸಿಂಗರ ಮಗಳಿದ್ದಾಳೆ. ನೀವು ಬಹುಶಃ ಅವರನ್ನು ಬಲ್ಲಿರಿ. ಅವರು ಪೂರ್ವ ಪಂಜಾಬಿನಲ್ಲಿ ಎಲ್ಲವನ್ನೂ ಕಳೆದುಕೊಂಡವರು. ಅವರಿಗೆ ಬಹಳ ಆಸ್ತಿ ಮತ್ತು ಪಶುಗಳಿದ್ದವು. ನಾಂಟಗೋಮೇರಿಯಲ್ಲಿ ಅವರು ಅನೇಕ ಬಂಧು ಮಿತ್ರರನ್ನು ಕಳೆದುಕೊಂಡರು; ಆದರೆ ಅವರು ಈ ದುರದೃಷ್ಟದ ಪ್ರಸಂಗಕ್ಕಾಗಿ ಒಂದು ಹನಿಕಣ್ಣೀರನ್ನು ಸುರಿಸಲಿಲ್ಲ ಮತ್ತು ಮುಸಲಾನರ ಬಗೆಗೆ ಎಳ್ಳಷ್ಟೂ ಕ್ಲೇಶವುಳ್ಳವರಾಗಿಲ್ಲ ಎಂಬುದನ್ನು ನಿಮಗೆ ತಿಳಿಸಲು ಶಕ್ತನಾದುದಕ್ಕೆ ನನಗೆ ಆನಂದವಾಗುತ್ತದೆ. ನೀವೆಲ್ಲ ಅವರ ಮಾದರಿಯನ್ನು ಅನುಸರಿಸಬೇಕೆಂದು ನನ್ನ ಇಷ್ಟ. ಶೀಖ ಗೆಳೆಯರು ನನಗೆ ಹೇಳಿದ್ದಾರೆ: ಒಬ್ಬ ಶೀಖನು ೧,೨೫,೦೦೦ ಜನರಿಗೆ ಸಮ ಎಂದು, ಆ ಶೌರ್ಯ ಎಂದೆಲ್ಲಿದೆ? ಸ್ವಲ್ಪ ಮುಸಲ್ಮಾನರೂ ಕೂಡ ನಿಮ್ಮ ನಡುವೆ ಸಂಪೂರ್ಣ ಸುರಕ್ಷಿತತೆಯಿಂದ ಬಾಳಲಾರದಷ್ಟು ಪರಿಸ್ಥಿತಿ ಕೆಟ್ಟು ಹೋಯಿತೆ?

ಪಾಕಿಸ್ತಾನದಲ್ಲಿ ಮೊದಲು ತುಂಟತನ ಪ್ರಾರಂಭವಾಯಿತೆಂಬುದನ್ನು ಒಪ್ಪಿಕೊಳ್ಳಲು ನಾನು ತಯಾರಿದ್ದೇನೆ; ಆದರೆ ಪೂರ್ವ ಪಂಜಾಬಿನ ಮತ್ತು ನೆರೆಯ ಜಿಲ್ಲೆಗಳ ಹಿಂದು ಮುಸಲ್ಮಾನರು ಆ ತುಂಟತನವನ್ನು ಅನುಸರಿಸುವದರಲ್ಲಿ ಹಿಂದೆ ಬೀಳಲಿಲ್ಲ. ಕತ್ತಿಯನ್ನು ಹೇಗೆ ಬಳಸಬೇಕೆಂದು ಗೊತ್ತಿರುವ ಶೀಖರಷ್ಟು ಧೈರ್ಯ ಹಿಂದೂಗಳಿಗಿಲ್ಲವೆಂಬುದಿಷ್ಟೇ ಅವರಲ್ಲಿಯ ವ್ಯತ್ಯಾಸ.

ಕಾಶ್ಮೀರದ ಸಿಂಹ

ನನ್ನೊಡನೆ ನೀವು ಶೀಖ ಉಬ್ಬಿನ ... ರನ್ನು ನೋಡುತ್ತೀರಿ. ನಾನು ಅವರನ್ನು ಕರೆತರುವ ಅಷ್ಟು ಉತ್ಸುಕನಾಗಿರಲಿಲ್ಲ. ಏಕೆಂದರೆ ಹಿಂದು ಶೀಖರಿಗೂ ಹಿಂದು ಮುಸಲ್ಮಾನರಿಗೂ ಬಹಳ ಅಂತರವಿದೆ. ಆದರೆ ಕಾಶ್ಮೀರದ ಸಿಂಹನೆಂದು ಹೆಸರಾದ ಶೇಖ ಸಾಹೇಬರು ಪಕ್ಕಾ ಮುಸಲ್ಮಾನರಿದ್ದೂ ಹಿಂದು ಶೀಖ ಮುಸಲ್ಮಾನರಲ್ಲಿ ಭಿನ್ನಭಾವವನ್ನು ಮರೆತು, ಹಿಂದು ಶೀಖರ ಪ್ರೀತ ಹೃದಯವನ್ನು ಸೂರೆ ಮಾಡಿದ್ದಾರೆ. ಅವರನ್ನು ಯಾರೂ ದ್ವೇಷಿಸುವುದಿಲ್ಲ! ... ಶೀಖರು ಮುಸಲ್ಮಾನರನ್ನು ... ಕೊಂಡಿದ್ದರು. ಶೀಖರು ನೀರವಾಗಿ ... ಕೆಲವು ... ಮುಸಲ್ಮಾನರು ತಮ್ಮ ... ಕಟ್ಟಿ ...

ನಿಷ್ಠಾವಂತ ವಿರೋಧಕರು

ಜಗತ್ತಿನಲ್ಲಿ ಜರುಗುತ್ತಿರುವ ಸಂಗತಿಗಳ ಬಗ್ಗೆ ವಿಚಾರಶೀಲರಿಂದು ಬೇಸರಗೊಂಡಿದ್ದಾರೆ. ಅವರಿಗೆ ಭವಿಷ್ಯತ್ಕಾಲದ ಸೋಲುಗಳು ಕ್ಷಿತಿಜದಲ್ಲಿ ಕಾಣತೊಡಗಿವೆ. ಜಾಗತಿಕ ಘಟನೆಗಳು ಯಾವ ರೂಪವನ್ನು ತಾಳುವುವೆಂಬುದರ ಬಗ್ಗೆ ಅವರು ಸಂಶಯಗ್ರಸ್ತರಾಗಿದ್ದಾರೆ. ಮತ್ತು ಮತ್ತೊಂದು ಜಾಗತಿಕ ಯುದ್ಧ ಸಂಭವಿಸುವುದೆಂಬ ಯೋಚನೆ ಬಂತೆಂದರೆ ಥರಥರ ನಡುಗುತ್ತಾರೆ. ಈ ವಿವಿಧ ಗುಂಪಿನವರು ಕೂಡಿಸಿದ ಸಭೆ ಸಮ್ಮೇಲನಗಳಿಂದ ಇದು ಸ್ಪಷ್ಟವಾಗುತ್ತದೆ. ಮಾಂಟ್ರಿಯಲ್ಲಿ ನಡೆದ ಪರಿಷತ್ತು ಜಾಗತಿಕ ಸರಕಾರವೊಂದರ ಮೂಲಕ ಶಾಂತಿಯನ್ನು ಸ್ಥಾಪಿಸಲು ಹವಣಿಸುತ್ತದೆ. ಅಂತರ್‌ರಾಷ್ಟ್ರೀಯ ಯುದ್ಧ ಸಂಭವವು ಬೇರೆ ಮಾರ್ಗಗಳನ್ನು ಸೂಚಿಸುತ್ತದೆ. ನಿಷ್ಠಾವಂತ ವಿರೋಧಕರು ಯುದ್ಧದಲ್ಲಿ ಪ್ರತ್ಯಕ್ಷ ಭಾಗವಹಿಸುವುದಿಲ್ಲ; ಉಳಿದವರು ನಿಃಶಸ್ತ್ರೀಕರಣವನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾರೆ. ಯುದ್ಧವು ಅನಾಗರಿಕವಾದುದು; ನಾಗರಿಕಸಮಾಜದಿಂದ ಅದನ್ನು ಹೊರದೂಡಬೇಕು, ಎಂಬುದನ್ನು ಎಲ್ಲರೂ ಒಪ್ಪುತ್ತಾರೆ.

ನಿಷ್ಠಾವಂತ ವಿರೋಧಕರು

ಯುದ್ಧವು ಅನೈತಿಕವೆಂದು ಎಚ್ಚತ್ತವರು ನಿಷ್ಠಾವಂತ ವಿರೋಧಕರು. ಅದೊಂದು ವೈಯಕ್ತಿಕ ವಿಷಯ. ನಿಷ್ಠಾವಂತ ವಿರೋಧಕರ ಪ್ರಕಾರ ಯುದ್ಧಮಾಡುವುದು ಕೊಲೆಗಡುಕತನ. ಸ್ವತಃ ತನ್ನ ಸಂಗಡಿಗರ ಮೇಲೆ ಅವನು ಕತ್ತಿಯನ್ನೆತ್ತಲಾರ. ಈ ದೃಢ ವಿಶ್ವಾಸದ ದೆಸೆಯಿಂದ ಅಂಥವನಿಗೆ ಸಮಾಜವು ಎಂಥ ಶಿಕ್ಷೆಕೊಟ್ಟರೂ ತಾನು ಅದನ್ನು ಅನುಭವಿಸಲು ಒಪ್ಪುತ್ತಾನೆ.

ನಿಷ್ಠಾವಂತ ವಿರೋಧಕನು ತನ್ನ ಸಂಶೋಧನೆಯನ್ನು ಬಹಳ ಮುಂದೆ ಒಯ್ಯುವುದಿಲ್ಲ. ಆತನು ತನ್ನ ಸದ್ಯದ ಸಮಸ್ಯೆಯನ್ನಷ್ಟೇ ಚರ್ಚಿಸುತ್ತಾನೆ. ಆದರೆ ಆ ಪರಿಸ್ಥಿತಿಗೊಯ್ದು ಮುಟ್ಟಿಸಿದ ಹೇತುವಾವುದೆಂಬುದನ್ನು ಅವನು ಹುಡುಕಹೋಗುವದಿಲ್ಲ. ಅವನದು ಸಂಕುಚಿತ ದೃಷ್ಟಿಯ ಅಭಿಪ್ರಾಯ. ಅವನು ರೋಗಚಿಹ್ನಗಳಿಗೆ ಚಿಕಿತ್ಸೆ ನಡೆಸುವದಲ್ಲದೆ ರೋಗಗಳಿಗಲ್ಲ. ಬಹುಶಃ ತನ್ನ ನಿತ್ಯಜೀವನವೇ ಅಂತಹ ಪರಿಸ್ಥಿತಿಯನ್ನುಂಟು ಮಾಡಿರಬಹುದು. ಆದರಿಂದ ತಾನು ತನ್ನ ಜೀವನಕ್ರಮವನ್ನು ಅದಕ್ಕೆ ತಕ್ಕಂತೆ ತಿದ್ದಿಕೊಳ್ಳಬೇಕೆಂಬುದನ್ನು ಅವನು ತಿಳಿದುಕೊಳ್ಳುವುದಿಲ್ಲ. ಪ್ರಾಣಿಗಳಿಗೆ ದಯೆಯಿಡಬೇಕೆಂದು ಬೋಧಿಸುತ್ತ ಮಾಂಸವಿಲ್ಲದಿದ್ದರೆ ತನಗೆ ಊಟವೇ ಸೇರುವದಿಲ್ಲ ಎಂಬವನೂ ಅವನೂ ಸಮಾನರು. ತನಗೆ ಮಾಂಸಬೇಕೆಂದರೆ ಅದಕ್ಕಾಗಿ ಹಂದಿಯನ್ನು ಕೊಲ್ಲಬೇಕಾಗುವುದೆಂಬುದನ್ನು ಅವನು ಗಮನಿಸುವುದಿಲ್ಲ. ತಾನೇ ಸ್ವತಃ ಹೋಗಿ ಕೊಲೆಗಾರನಾಗುವದಿಲ್ಲ; ಆದರೆ ಅವನು ತನ್ನ ಕೃತ್ಯದಿಂದ ಕಟುಕನನ್ನು ಅಸ್ತಿತ್ವದಲ್ಲಿಟ್ಟು ಅವನನ್ನು ಪೋಷಿಸುತ್ತಾನೆ.

ಇದು ವಿವೇಕ ಕಡಿಮೆಯಾದುದರಿಂದಲೋ ಇಲ್ಲವೆ ತರ್ಕಶುದ್ಧ ಪರಿಣಾಮವನ್ನೆದುರಿಸಲು ಅಂಜಿಕೆಯುಂಟಾಗಿರುವುದರಿಂದಲೋ ಸಂಭವಿಸಿದ್ದು. ಮೊದಲಿನ ಪ್ರಕಾರ ಅವಿಷಯದಲ್ಲಿ ಹೆಚ್ಚಿಗೆ ಅಭ್ಯಾಸಬೇಕಾಗಿದೆ, ವಿವೆ ಚಿಸಬೇಕಾಗಿದೆ ಎಂದು ಗೊತ್ತಾಗುತ್ತದೆ. ಎರಡನೆಯ ಸಂದರ್ಭದಂತೆ ನಡೆದುಕೊಳ್ಳುವುದು ಸಾಮಾಜಿಕನಾವನಿಗೂ ಭೂಷಣವಲ್ಲ. ಅವನು ಸಮಾಜದಲ್ಲಿ ಸ್ವಬುದ್ಧಿಯಿಂದ ಸೇರುವವನಾಗಿ ಅಂತ್ಯದಲ್ಲಿ ಯುದ್ಧಕ್ಕೊಯ್ದು ಮುಟ್ಟಿಸುವ ಸರ್ವಸಾಧಾರಣ ಜೀವನದಲ್ಲಿ ಅವನು ಭಾಗಿಯಾಗಿದ್ದರೆ ಯುದ್ಧಒದಗಿದಾಗ ಯುದ್ಧಮಾಡ ಹೋಗದಿದ್ದರೆ ಅವನು ಕರ್ತವ್ಯ ಭ್ರಷ್ಟನೆನಿಸುತ್ತಾನೆ. ಅವನು ಯುದ್ಧ ಅಯೋಗ್ಯವೆಂಬವನಾದರೆ ಯುದ್ಧಕ್ಕೆಂದೂ ಅವಕಾಶವಿಲ್ಲದಂತಹ ಜೀವನದ ಕ್ರಮವನ್ನು ಅವನು ಅನುಸರಿಸಬೇಕು. ಪ್ರಾಣಹಿಂಸೆಯನ್ನು ತಪ್ಪಿಸುವ ಇಚ್ಛೆ ಅವನಿಗಿದ್ದರೆ ಅವನು ಮಾಂಸ ಭಕ್ಷಣವನ್ನು ಬಿಡಬೇಕು.

ಶಾಂತಿವಾದ

ಶಾಂತಿವಾದಿಗಾದರೆ ಅದೊಂದು ಕೇವಲ ವೈಯಕ್ತಿಕ ವಿಷಯವಲ್ಲ. ಅವನ ದೃಷ್ಟಿಯಲ್ಲಿ ಸಮಸ್ಯೆಯು ಸಾಮಾಜಿಕ ಇಲ್ಲವೆ ರಾಷ್ಟ್ರೀಯ ಪರಿಣಾಮಕ್ಕೇರುತ್ತದೆ. ಜನರಲ್ಲಿ ಶಾಂತಿಯಿರಬೇಕೆಂದು ಅವನ ಅಪೇಕ್ಷೆ. ಆಯಾಕಾಲದ ಕಾರಣಗಳನ್ನು ನಿಯಂತ್ರಿಸಿ ಅದನ್ನು ಸಾಧಿಸಲು ಅವನು ಕಲಹ ಮತ್ತು ಹಕ್ಕುಗಳನ್ನು ನಿರ್ಣಯಿಸಲು ನಿಃಶಸ್ತ್ರೀಕರಣ, ಜಾಗತಿಕ ಸರಕಾರ ಮೊದಲಾದ ಉಪಾಯಗಳನ್ನು ಎತ್ತಿಹಿಡಿಯುತ್ತಾನೆ. ಗುಣಪಡಿಸುವ ಪದ್ಧತಿಗಳಲ್ಲಿ ಅವನು ತನ್ನ [illegible] ತರಲಾರದ ನಿರ್ಣಾಯಕರಿಗಿಂತ ಕಲಹ ಮಾಡಿದ ಪಕ್ಷಗಳೇ ಹೆಚ್ಚು ಮಹತ್ವದವರೆಂಬುದನ್ನು ಅವನು ಮರೆಯುತ್ತಾನೆ. ಅಷ್ಟೇ ಅಲ್ಲ; ಕಲಹಾಸಕ್ತರೇ ತಮ್ಮ ಕಲಹ ನಿರ್ಣಯದ ನಿರ್ಣಾಯಕರಾಗಿ ನಿಲ್ಲಬಹುದು! ಇವೇ (ಲೀಗ್ ಆಫ್ ನೇಶನ್ಸ್)-ಹಳೆಯ ರಾಷ್ಟ್ರಸಂಘದ ಕುಂದುಗಳು.

ಇಬ್ಬರು ಹೊಡೆದಾಡಬೇಕೆಂದು ನಿಶ್ಚಯಿಸಿದ್ದರೆ ನಿಃಶಸ್ತ್ರೀಕರಣ ಅದನ್ನು ನಿಲ್ಲಿಸಲಾರದು. ಪರಮಾಣು ಬಾಂಬನ್ನು ನೀನು ಬಹಿಷ್ಕರಿಸು, "ಬಿಗ್ ಬರ್ಥಾಸ್" ಬರುತ್ತವೆ; 'ಬಿಗ್ ಬರ್ಥಾಸ್' ಕಿತ್ತುಹಾಕು; ಕೋವಿಗಳಲ್ಲಿಗೆ ಬರುತ್ತವೆ. ಇವಾವೂ ಸಿಗದಿದ್ದರೆ ಬಿಲ್ಲು ಬಾಣಗಳಿವೆ, ಚೂರಿಕೋಲುಗಳಿವೆ. ಒಂದನೆಯ ಮಹಾಯುದ್ಧವಾದ ಬಳಿಕ ಜರ್ಮನಿಯನ್ನು ನಿಃಶಸ್ತ್ರಗೊಳಿಸಿದ್ದರಿಂದ ೨ನೆಯ ಮಹಾಯುದ್ಧ ತಪ್ಪಿತೋ?

ಮಾನವ ಕೃತ ವಿಧಿಗಳ ಮೇಲೂ ನಾವು ಶ್ರದ್ಧೆಯಿಡಲಾರೆವು ಅದು ಅವನ ಅನುಮೋದವಷ್ಟೇ ಫಲಕಾರಿಯಾದುದು. ಅದರಿಂದೇನಾದರೂ ಪ್ರಯೋಜನವಾಗಬೇಕಾಗಿದ್ದರೆ ಅದನ್ನು ಪರಿಣಾಮಕಾರಿಯಾಗಿ ಆಚರಣೆಯಲ್ಲಿ ತರಬೇಕು. ಜಾಗತಿಕ ಸರಕಾರಗಳೂ ನಮ್ಮನ್ನು ಗುರಿಯತ್ತ ಒಯ್ಯಲಾರವು.

ಅಹಿಂಸೆ

ಕಳೆದೆರಡು ಸಲದಲ್ಲಾದಂತೆ ಸಾಮೂಹಿಕ ಯುದ್ಧಗಳಿಗೆ ಕಾರಣಗಳೇನೆಂಬುದನ್ನು ಚೆನ್ನಾಗಿ ಪರೀಕ್ಷಿಸಿ ನೋಡೋಣ. ಕಾರಣವನ್ನು ಒಮ್ಮೆ ನಾವು ಕಂಡುಹಿಡಿದೆವೆಂದರೆ, ಸಮಾಜದಿಂದ ಯುದ್ಧವನ್ನು ಹೊಡೆದೋಡಿಸಲು ಅಗತ್ಯವಾದ ಕಾರ್ಯಕ್ರಮ ಕೈಗೊಳ್ಳುವುದರಿಂದಾಗುವ ಪರಿಣಾಮಗಳನ್ನು ಧೈರ್ಯದಿಂದ ಎದುರಿಸಲು ಮತ್ತು ತನ್ನ ಬುದ್ಧಿಯ ಸಮತೋಲವನ್ನು ಸರಿಪಡಿಸಲು ನಿಯತಾವಧಿಕ ಯುದ್ಧಗಳ ಅಗತ್ಯವಿಲ್ಲದಂತೆ ಸಮಾಜವನ್ನು ಮತ್ತು ಸಮಾಜ ಜೀವನದ ಬಗೆಯನ್ನು ಪುನರ್ಘಟಿಸಲು ಶ್ರದ್ಧಾಬದ್ಧ ಧೈರ್ಯ ಮನುಷ್ಯನಿಗಿರಬೇಕು. ಇದರ ಅರ್ಥ, ನಾವು ನಮ್ಮ ನಿತ್ಯ ಜೀವನವನ್ನು ಅಹಿಂಸೆಯ ತಳಹದಿಯ ಮೇಲೆ ಸಾಗಿಸಬೇಕೆಂಬುದು, ಆ ರೀತಿಯ ಘಟನೆಯ ಮೇಲೆನಿಂತ ಸಮಾಜವು ಎಂದಿಗೂ ಯುದ್ಧವನ್ನು ಬರದಂತೆ ಮಾಡುತ್ತದೆ.

ನಮಗೇ ನಾವು ಪ್ರಾಮಾಣಿಕರಾಗಿದ್ದರೆ ಈ ಯುದ್ಧಗಳೆಲ್ಲ ನಮ್ಮ ಆರ್ಥಿಕ ಜೀವನದ ಏಕಮುಖ ಬೆಳವಣಿಗೆಯ ಫಲವೆಂದು ನಾವು ತಿಳಿಯುವೆವು. ಸೌದೆ ಮತ್ತು ಕಚ್ಚಾ ಮಾಲುಗಳ ಬೇಟೆ, ಮಾರುವ ಕಟ್ಟೆಗಳನ್ನು ವಶಪಡಿಸಿಕೊಳ್ಳುವುದು — ಇವೇ ಅಂತರ್‌ರಾಷ್ಟ್ರೀಯ ಯುದ್ಧಗಳಿಗೆ ಕಾರಣಗಳು. ನಮ್ಮ ಅವಶ್ಯಕತೆಗಳನ್ನು ಪೂರಯಿಸುವಷ್ಟರ ಮಟ್ಟಿಗೆ ನಾವು ನಮ್ಮ ಜೀವನವನ್ನು ತಿದ್ದಿಕೊಳ್ಳಬೇಕು. ಇವೆರಡರಲ್ಲಿ ವ್ಯತ್ಯಾಸವಿದ್ದರೆ ನಮ್ಮ ನೆರೆಯವರೊಡನೆ ನಾವು ಅಡ್ಡನಿಲ್ಲಬೇಕಾಗುತ್ತದೆ. ಆ ಅಡ್ಡಿ ಇಲ್ಲವೆ ತೂಕ ಅಷ್ಟೇನೂ ಗಣ್ಯವಾದದ್ದಲ್ಲ. ಸ್ಪರ್ಧೆಗೆ, ಅತ್ಯಾಶೆ ಮಾತ್ಸರ್ಯಗಳಿಗೆ ಅವಕಾಶ ಕೊಡತಕ್ಕ ಸಂದರ್ಭಗಳನ್ನು ನಾವು ಬಿಟ್ಟು ಬಿಡಬೇಕು. ಈ ರೀತಿ ನಮ್ಮ ಜೀವನವನ್ನು ಪುನರ್ಘಟಿಸಲು ನಾವು ಸಿದ್ಧರಿರುವೆವು. ಜನರಲ್ಲಿ ಶಾಂತಿ ಸದಾಶಯಗಳಿರಬೇಕಾದರೆ ಅಹಿಂಸಾತ್ಮಕ ಜೀವನವೆನೂ ಅತಿ ತುಟ್ಟಿಯದಾಗಿ ಎಣಿಸಲಾಗದು.

ನಮ್ಮ ವಿಷಯ ವಿವೇಕದ ಮೇರೆಗೆ ಪ್ರಥಮಾವಶ್ಯಕತೆಗಳೆಲ್ಲ ಪೂರೈಸುವಂತೆ ಸ್ವಯಂಪೂರ್ಣತೆಯಿರುವುದೇ ಶಾಂತಿಸ್ಥಾಪನೆಗೆಬೇಕಾದ ಮೂಲಸೂತ್ರ. ಈರೀತಿ ನಮ್ಮ ರಾಷ್ಟ್ರೀಯ ಆರ್ಥಿಕ ಚಟುವಟಿಕೆಗಳನ್ನು ಪುನರ್ರಚಿಸಲು ಸಿದ್ಧರಾದಲ್ಲದೆ ಬೇರಾದನ್ನು ತೀವ್ರಾಪೇಕ್ಷೆಯಿದ್ದರೂ ನಮಗದು ಸಹಾಯವಾಗದು. ಬರಿದೆ ರೋಗಚಿಹ್ನಗಳೊಡನೆ ಗುದ್ದಾಡುವುದರಿಂದ ಏನೂ ಪ್ರಯೋಜನವಿಲ್ಲ. ಎಲ್ಲಿಯ ವರೆಗೆ ಉದ್ರೇಜಕ ಕಾರಣಗಳು ಹಾಗೇ ಉಳಿಯುವುವೋ ಅಲ್ಲಿಯ ವರೆಗೆ ಅದರಿಂದೇನೂ ಸಾಧಿಸದು.

ಯುದ್ಧವೆಂದರೆ ಯುರೋಪಿಗೆ ಸಾಕೋ ಸಾಕೆನಿಸಿದೆ ಆದರೆ ಅದನ್ನು ತಪ್ಪಿಸುವುದು ಹೇಗೆಂಬುದನ್ನು ವಿವೆಚಿಸಲು ಅವಕ್ಕೆ ವೇಳೆಯಿಲ್ಲ. ಅದರ ಮುಖಂಡರು "ಪುನರ್ರಚನಾ ಕಾರ್ಯಕ್ರಮಗಳಲ್ಲಿ" ರಾಷ್ಟ್ರಗಳನ್ನು ತಲೆ ಕೆಳಗಾಗಿ ಮುಗಿಸುತ್ತಿದ್ದಾರೆ. ಅದರಿಂದ ಆ ಕಾರ್ಯಕ್ರಮಗಳು ನೇರವಾಗಿ ನಡೆಯದೆ ಆಕಸ್ಮಿಕ ವಿನಾಶದತ್ತ ಸಾಗುತ್ತಿವೆ. ಆದರೆ ಗಾಂಧಿಯವರ ಸ್ವರವನ್ನು ಭಾರತವು ಅನುಸರಿಸಲು ಇಷ್ಟಪಟ್ಟದ್ದಾಗಿ ತೋರುತ್ತದೆ. ನಾವು ಸಕಾಲದಲ್ಲಿ ಎದ್ದು ಬರುತ್ತೇವೆಯೇ? ಇಲ್ಲವೆ, ನಾವೂ ಸಹ; ಉರಿಯುವ ದಾವಾಗ್ನಿಯಿಂದ ಭಕ್ಷಿಸಲ್ಪಡೋಣವೆ?

—ಜೆ. ಸಿ. ಕುಮಾರಪ್ಪ

ಎದೆಗೆಡಲೇಕೆ ?

ಕೆಳಗಿನದು ಮ್ಯಾಡಂ ಎಡ್ಮಂಡರು ತಾ. ೨೭ನೆಯ ಅಗಸ್ಟ ೧೯೪೭ಕ್ಕೆ ಗಾಂಧೀಜಿಗೆ ಬರೆದ ಪತ್ರ.

"ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದಕ್ಕೆ ನಮಗೆಷ್ಟು ಆನಂದವಾಗಿದೆಯೆಂಬುದನ್ನು ನಿಮಗೆ ಹೇಳಲು ನನಗೆ ತವಕವೆನ್ನಿಸುತ್ತದೆ.

"ಹೌದು, ನಿಮಗೆ ಈ ಬಗ್ಗೆ ಅಷ್ಟೊಂದು ಸಂತೋಷವಾಗಿಲ್ಲವೆಂಬುದು ಗೊತ್ತು ನಮಗೆ. ಹರಿಜನದಲ್ಲಿ ನಿಮ್ಮ ಬರಹಗಳನ್ನು ನಾವು ಓದುತ್ತೇವೆ. ಆದರೆ, ಬಾಪೂ, ಎದೆಗುಂದಬೇಡಿರಿ ಪಡುವಣಿಗರಾದ ನಮಗೆ ಇದರ ಬೆಲೆ ನೆಲೆ ಏನೆಂಬುದನ್ನು ನೀವು ದಯವಿಟ್ಟು ಬಗೆದು ನೋಡಿರಿ. ತನ್ನ ಎದುರಾಳಿಯ ಒಂದು ತೊಟ್ಟು ನೆತ್ತರವೂ ಉದುರದ ಹಾಗೆ ಭಾರತವು ತನ್ನ ಕ್ರಾಂತಿಯನ್ನು ಕೈಗೂಡಿಸಿ ಸ್ವಾತಂತ್ರ್ಯ ಪಡೆದಿತು. ಗತಕ್ರಾಂತಿಗಳ ದೃಷ್ಟಿಯಿಂದ ಇದೇನು ಕಡಮೆ ಪ್ರಗತಿಯೆ ? ಇತಿಹಾಸದಲ್ಲಿ ಎರಡನೇ ದೃಷ್ಟಾಂತವೇ ದೊರಕದ ಒಂದು ಅಪೂರ್ವ ಸಿದ್ಧಿಯಲ್ಲವೆ ಇದು?

"ರಕ್ತಸಾಗರದಲ್ಲಿ ಇದೇ ಮಿಂದು ಬಂದ ನಮಗೆ, ಪಡುವಣಿಗರಿಗೆ, ಬಾಪೂ, ಭಾರತದ ಈ ಅರುಣೋದಯವು ಅದೆಷ್ಟು ಉಜ್ವಲವಾಗಿ, ದೈವಿಕವಾಗಿ, ಮಂಗಲಮಯವಾಗಿ ಕಾಣುವದೆಂಬುದು ನಿಮಗೆ ತಿಳಿಯದೆ?

"ನಮ್ಮ ಆನಂದದಿಂದ ನಮ್ಮ ಅದ್ಭುತ ಆಶೆಯಿಂದ ನೀವು ಉತ್ಸಾಹ ಪೂರ್ಣರಾಗಬೇಕು, ಸಂತುಷ್ಟರಾಗಬೇಕು. ನಿಮ್ಮನ್ನು ನಾವು ಕೇವಲ ಆಧ್ಯಾತ್ಮ ಗುರುವೆಂದೇ ಗ್ರಹಿಸಿಲ್ಲ; ನಿತ್ಯ ಜೀವನದಲ್ಲಿ ಕೂಡ ತಪ್ಪದೆ ಬಗೆಗೆಡದೆ ಆದರ್ಶವನ್ನೂ ಧರ್ಮವನ್ನೂ ಅಳವಡಿಸಿಕೊಂಡವರು ನೀವು. ಫಲಾಪೇಕ್ಷೆಗಳಾಗದೆ, ಎಲ್ಲ ಹೊಣೆಯನ್ನೂ ದೇವರಿಗೆ ಒಪ್ಪಿಸಿ ತನುಮನದಿಂದ ಕರ್ತವ್ಯರತರಾಗಿರತಕ್ಕದೆಂದು ನಮ್ಮ ಧರ್ಮದ ತಿರುಳನ್ನು ತಿಳಿಸಿ ಹೇಳಿದವರು ನೀವೇ ಅಲ್ಲವೆ ? ನೀವು ಧೈರ್ಯದಿಂದಲೂ ಶ್ರದ್ಧೆಯಿಂದಲೂ ಮಾಡಬೇಕಾದುದನ್ನೆಲ್ಲ ಮಾಡಿದಿರಿ. ಸಕಲ ಆಶೆಗೆ ಆಧಾರವಾಗಿರುವ ಅಹಿಂಸೆ ನಮಗೇನು ಕೊಡಬಲ್ಲದೆಂಬುದನ್ನು ಇನ್ನು ದೇವರೇ ತೋರಿಸುತ್ತಾನೆ. ಅಹಿಂಸೆಯೇ ನಾಗರಿಕತೆಯನ್ನು ಸರ್ವನಾಶದಿಂದ ಕಾಪಾಡಬಲ್ಲ ಏಕಮೇವ ಅಸ್ತ್ರ. ಅಹಿಂಸೆಯು ಅನೇಕಸಲ ತಪ್ಪಾಗಿ ಪ್ರಯೋಗಿಸಲ್ಪಟ್ಟಿರಬಹುದು. ಆದರೆ ನಿಮ್ಮಿಂದ ಸ್ಫೂರ್ತಿಪಡೆದ ನಿಷ್ಠಾಯುಕ್ತ ಜನಸಮೂಹದ ಪ್ರಯತ್ನಬಲ ಇದ್ದೇ ಇತ್ತು. ಅದಕ್ಕೆ ಈ ಬಗ್ಗೆ ನನಗೆ ಎಳ್ಳನಿತೂ ಸಂದೇಹವಿಲ್ಲ.

"ಈ (ಅಹಿಂಸಾ) ಸಂದೇಶದ ಉಪಯೋಗವನ್ನು ನಾವಿಲ್ಲಿ ಸರ್ವ ವಿಧದಿಂದಲೂ ಮಾಡಿಕೊಳ್ಳುವದಾಗಿ ಆಶಿಸುವಾ.

"ಇಲ್ಲಿ ಬಹಳ ಕುಸು ಜನರು ಮಾತ್ರ ಅದರ ನಿಜಾರ್ಥವನ್ನು ಬಲ್ಲರು. ಆದರೆ ಇದನ್ನು ಗ್ರಹಿಸಲು ಈಗ ಇಲ್ಲಿ ಭೂಮಿ ಹದವಾಗಿದೆ.

"ನೋಲಿದ್ದ ಪರಮಾತ್ಮನನ್ನು ನೆಚ್ಚಿ, ಎದೆ ಕೆಚ್ಚುಮಾಡಿ ಕೆಲಸಕ್ಕೆ ಕೈಯಿಕ್ಕುವಾ.

ಈ ಪತ್ರದ ಆದಿಗೆ ಉದ್ದೇಶ ಪಟ್ಟಿ ತಾ. ೨೭ ಜುಲೈ ೧೯೪೭ರ ಹರಿಜನದಲ್ಲಿನ ನಿಮ್ಮ ಲೇಖನವು ಎಡ್ಮಂಡರಿಂದ ಭಾಷಾಂತರಿತವಾಗಿ ಮುಂದಿನ 'ಎಸ್ಪ್ರೊರ' ಪತ್ರಿಕೆಯಲ್ಲಿ ಪ್ರಕಟವಾಗಲಿದೆ. (ನಿಜವಾಗಿ ಈ ಸಂಚಿಕೆಯೆಲ್ಲ ಭಾರತದ ಬಗ್ಗೆಯೇ ಇದೆ.)

"ನಿಷ್ಕ್ರಿಯ ಪ್ರತಿಕಾರ ಮತ್ತು ಅಹಿಂಸಾಮಯ ಸತ್ಯಾಗ್ರಹ ಇವುಗಳಲ್ಲಿ ತಾರತಮ್ಯವನ್ನು ನೀವು ವಿಂಗಡಿಸಿ ಮತ್ತೊಮ್ಮೆ ಒತ್ತಿ ಹೇಳಿದ್ದು 'ಎಸ್ಪ್ರೊರ' ವಾಚಕರ ಗಮನಕ್ಕೆ ಬಂದದ್ದಕ್ಕಾಗಿ ನನಗೆ ಆನಂದವೆನಿಸಿದೆ.

"ಈ ಸೂಕ್ಷ್ಮ ತಾರತಮ್ಯವನ್ನು ಜನ ಗ್ರಹಿಸ್ಯತ್ತಿಲ್ಲವೆಂಬ ಮಾತು ನಾನು ವಿಚಾರಿಸಿ ನೋಡಿದಷ್ಟು ಮನದಟ್ಟಾಗುತ್ತಿದೆ. ಜನ ನಿಷ್ಕ್ರಿಯ ಪ್ರತಿಕಾರವನ್ನು ಪ್ರಯೋಗಿಸ ಹೋಗಿ ಸೋತು ನಿರಾಶರಾಗುತ್ತಾರೆ. ಅವರ ಪ್ರಯತ್ನ ಈ ಬಗೆ ತುಂಬ ನಿಷ್ಠೆಯಿಂದೇ ಕೂಡಿದ್ದಿರಬಹುದು.

"ಜನ ತಮಗೂ ತಿಳಿಯದೆ ತಮಗೆ ತಾವೇ ಸುಳ್ಳು ಹೇಳಿಕೊಳ್ಳುತ್ತಿರುವದು ಮೇಲಿಂದ ಮೇಲೆ ಕಂಡು ಬರುತ್ತದೆ. ಎಂದೇ ಇತ್ತೀಚೆಗೆ ನಾನು ಮನೋವಿಶ್ಲೇಷಣದ ಬಗ್ಗೆ ಅಭ್ಯಾಸಿಸಲು ತೊಡಗಿದ್ದೇನೆ. ನಮ್ಮ ಅಂತರಂಗದಲ್ಲಿ ಕುಳಿತು ಅವಿವೇಕದ ಅನಿಷ್ಟ ಕಾರ್ಯಗಳನ್ನು ಎಸಗುತಿರುವ ಕಲಿಪುರುಷನ ಬಗ್ಗೆ ಎಚ್ಚರಿಕೆ ಹೇಳುವದು ಮೊದಲಿನ ವಾಡಿಕೆಯಿತ್ತು.

"ಆದರೆ ಇತ್ತೀಚೆಗೆ ಸತ್ಯಸಂಧಾನಕ್ಕೆ ಜನಗಳಿಗೆ ಶಾಸ್ತ್ರೀಯ ಪದ್ಧತಿ ಬೇಕೆನಿಸಿದೆ. ಮನುಷ್ಯನ ನರಮಂಡಲ ವಿಕೃತಿಯನ್ನು ಸರಿಗೊಳಿಸಲು ವೈದ್ಯಕೀಯ ಉಪಾಯಗಳೊಂದಿಗೆ ಮನೋವಿಶ್ಲೇಷಣ ಮೂಲಕವಾಗಿ ಸಾಮಾನ್ಯ ಮನುಷ್ಯನ ಭಾವನಿಕೃತಿಯೂ ಸರಿಗೊಳ್ಳುವದು ಅಗತ್ಯವಿದೆ. ಇದರಿಂದ ಅವರಲ್ಲಿ ಪೂರ್ಣ ಪ್ರಜ್ಞೆ ಜಾಗೃತವಾಗಿ ಅಹಿಂಸೆಯನ್ನು ಸರಿಯಾಗಿ ಬಳಸಿಕೊಳ್ಳಲು ತಿಳುವಳಿಕೆ ಬೆಳೆಯುತ್ತದೆ. ಇಷ್ಟೇ, ಅವರ ಪ್ರಯತ್ನ ಪ್ರಾಮಾಣಿಕವಾಗಿರಬೇಕು; ನಿಷ್ಠಾಯುಕ್ತವಾಗಿರಬೇಕು."

ಈ ಪತ್ರಕ್ಕೆ ಗಾಂಧೀಜಿ ಉತ್ತರಿಸಿದುದು ಹೀಗೆ:

"ನಿಷ್ಕ್ರಿಯ ಪ್ರತೀಕಾರ ಮತ್ತು ಅಹಿಂಸಾತ್ಮಕ ಸತ್ಯಾಗ್ರಹ ಇವುಗಳಲ್ಲಿದ್ದ ಮೂಲಭೂತ ಸೂಕ್ಷ್ಮ ಭೇದವನ್ನು ನೀವು ಗ್ರಹಿಸಿರುವಿರಾಗಿ ಕಂಡು ಬಂದಿತು. ನಿಷ್ಕ್ರಿಯ ಪ್ರತೀಕಾರವೇ ಇರಲಿ ಅಹಿಂಸಾತ್ಮಕ ಸತ್ಯಾಗ್ರಹವೇ ಇರಲಿ, ಅಗ್ರಹಿಯು ದುರ್ಬಲನಿದ್ದಷ್ಟೂ ಹೆಚ್ಚಿನ ಬೆಲೆಕೊಡಬೇಕಾದೀತು. ಅದರಲ್ಲೂ ಪ್ರತೀಕಾರವು ನಿಷ್ಕ್ರಿಯವಾಗಿದ್ದರೆ ಅದಿನ್ನೂ ಹೆಚ್ಚುವದು. ಜೇಸಸ್ಸರ ಪ್ರಜ್ಞಾಪೂರ್ಣ ಮತ್ತು ಧೀರ ವೀರ ಪ್ರತೀಕಾರವನ್ನು ಯುರೋಪದವರು ನಿಷ್ಕ್ರಿಯ ಪ್ರತೀಕಾರವೆಂದು ಗ್ರಹಿಸಿದರು. ಅದು ದುರ್ಬಲರ ನಿಷ್ಕ್ರಿಯೆಂದು ತಿಳಿದು ತಪ್ಪಿದರು. ನಾನು ಮೊಟ್ಟಮೊದಲು ಹೊಸ ಒಡಂಬಡಿಕೆಯನ್ನು (ನ್ಯೂಟೆಸ್ಟಮಂಟ) ಓದಿದಾಗ, ನಾಲ್ಕು ಆದೇಶಗಳಲ್ಲಿ (ಗಾಸ್ಪೆಲ್ಸ) ವಿವರಿಸಿದಂತೆ ನನಗೆ ಜೇಸಸ್ಸರ ದುರ್ಬಲತೆಯಾಗಲೀ ನಿಷ್ಕ್ರಿಯಾವೃತಿಯಾಗಲೀ ಕಂಡು ಬರಲಿಲ್ಲ. ಮುಂದೆ ನಾನು ಟಾಲಸ್ಟಾಯರ 'ಆದೇಶಗಳ ಏಕರೂಪತೆ' (ಹಾರ್ಮನಿ ಆಫ ದಿ ಗಾಸ್ಪೆಲ್ಸ) ಎಂಬ ಪುಸ್ತಕವನ್ನೂ ಈ ಬಗೆಯ ಅವರ ಇನ್ನುಳಿದ ಬರೆಹಗಳನ್ನೂ ಓದಿದಾಗ ಈ ಅರ್ಥವು ನನಗೆ ಇನ್ನೂ ನಿಚ್ಚಳವಾಗಿ ತೋರಿತು. ಜೇಸಸ್ ನಿಷ್ಕ್ರಿಯ ಪ್ರತೀಕಾರಿಯೆಂದು ತಿಳಿದು ಪಡುವಣಿಗರು ತುಂಬ ಹಾನಿಗೀಡಾಗಿಲ್ಲವೆ? ನಾಚಿಕೆಯಿಂದ ತಲೆಬಾಗಿಸುವಂತಹ ಯುದ್ಧಗಳ ಬಗ್ಗೆ ಕ್ರಿಶ್ಚಿಯನ್ ಕುಲವು ಹೊಣೆಯಾಗಿದೆ. ಹಳೆ ಒಡಂಬಡಿಕೆ (ಓಲ್ಡ ಟೆಸ್ಟಮೆಂಟ) ಮತ್ತು ಐತಿಹಾಸಿಕ ಮತ್ತು ಅರ್ಧ ಐತಿಹಾಸಿಕ ಒಕ್ಕಣಿಕೆಯಲ್ಲಿ ವಿವರಿಸಿದ ಯುದ್ಧ ಪ್ರಸಂಗಗಳ ಬಗ್ಗೆಯೂ ಈ ಮಾತು ಅನ್ವಯಿಸುವದು. ನನಗೆ ಅರ್ವಾಚೀನ ಇಲ್ಲವೆ ಪ್ರಾಚೀನ ಇತಿಹಾಸಜ್ಞಾನ ಅಷ್ಟೊಂದು ಇಲ್ಲವಾದ ಕಾರಣ ತಪ್ಪಿದ್ದರೆ ಒಪ್ಪುವ ಸಿದ್ಧತೆಯಿಂದಲೇ ನಾನು ಈ ಮಾತನಾಡುತ್ತಿರುವೆ.

"ಇನ್ನು ನನ್ನ ಸ್ವಾನುಭವದ ಬಗ್ಗೆ. ನಮ್ಮ ರಾಜಕೀಯ ಸ್ವಾತಂತ್ರ್ಯದ ಸಲುವಾಗಿ ನಿಷ್ಕ್ರಿಯ ಪ್ರತೀಕಾರವನ್ನೇನೋ ನಾವು ಯಶಸ್ವಿಯಾಗಿ ಪ್ರಯೋಗಿಸಿದೆವು, ನಿಜ. ಈ ಬಗ್ಗೆ ಶಾಂತತಾಪ್ರಿಯರಾದ ನೀವು ಮತ್ತು ನಿಮ್ಮ ಪತಿ ತುಂಬ ಉತ್ಸಾಹಭರಿತರಾಗಿದ್ದೂ ಸರಿಯೇ. ಆದರೆ ನಮಗೆ ತಿಳಿಯದೆ ನಾವು ಮಾಡಿದ ತಪ್ಪಿಗಾಗಿ ತುಂಬ ಕಷ್ಟಕೆಸ್ಕಾಳಗಾಗಿದ್ದೇವೆ; ಅಥವಾ ಅಷ್ಕ್ರಿಯ ಪ್ರತೀಕಾರಕ್ಕೆ ಅಹಿಂಸಾತ್ಮಕ ಸತ್ಯಾಗ್ರಹವೆಂದು ನಾನು ತಪ್ಪು ಕಲ್ಪನೆ ಮಾಡಿಕೊಂಡುದಕ್ಕೆ ನಾವು ಕಷ್ಟಕ್ಕೆ ಗುರಿಯಾದೆವು ಎನ್ನುವದೇ ಒಳಿತಾದೀತು. ನಾನು ಈ ತಪ್ಪು ಮಾಡಿರದಿದ್ದರೆ ದುರ್ಬಲ ಬಂಧುವು ದುರ್ಬಲ ಬಂಧುವನ್ನು ಅಮಾನುಷವಾಗಿ ಅವಿಚಾರಿಯಾಗಿ ಕೊಲ್ಲುವ ಲಜ್ಜಾಸ್ಪದ ಪ್ರಸಂಗಗಳನ್ನು ತಪ್ಪಿಸಬಹುದಾಗಿತ್ತು.

"ಈ ರಕ್ತಸ್ನಾನ ಬೇಗ ಕೊನೆಗಂಡು ಈ ಅನಿವಾರ್ಯವಾದ ಹತ್ಯಾಕಾಂಡದಿಂದ ನವೀನ ಮತ್ತು ವೀರಧೀರ ಭಾರತವು ತಲೆಯೆತ್ತಲೆಂದು ನನ್ನೊಡನೆ ಇಲ್ಲಿಯ ಮತ್ತು ಪ್ರಪಂಚದ ಇನ್ನುಳಿದ ಭಾಗಗಳಲ್ಲಿಯ ನನ್ನ ಮಿತ್ರರು ಪ್ರಾರ್ಥಿಸುವರಾಗಿ ಆಶಿಸುತ್ತೇನೆ. ಈ ನವಭಾರತವು ಪಡುವಣಿಗರ ಅಂಧಾನುಕರಣ ಮಾಡದಿರಲಿ; ವಿಕಾರವಾದ ಯುದ್ಧ ಪ್ರವೃತ್ತಿ ಈ ಭಾರತಕ್ಕೆ ಆಗದಿರಲಿ. ಈ ನವಭಾರತವು ಪಾಶ್ಚಾತ್ಯರಿಂದ ಕಲಿಯುವದನ್ನೆಲ್ಲ ಕಲಿತು ಆಫ್ರಿಕಾದ ಮತ್ತು ಏಶಿಯಾದ, ಅಷ್ಟೇ ಏಕೆ ಸಮಗ್ರ ವ್ಯಥಿತ ಜಗಕ್ಕೇ ಆದರ್ಶಪ್ರಾಯವಾಗಿ ದಾರಿ ತೋರಲಿ.

"ಇದು ಆಕಾಶ ಕುಸುಮವನ್ನು ಅಪೇಕ್ಷಿಸಿದಂತೆಯೇ ಎಂಬುದನ್ನು ನಾನು ಒಪ್ಪಲೇಬೇಕು. ಯಾಕೆಂದರೆ ನಾವಿಂದು ಸೈನ್ಯಬಲ ಮತ್ತು ಶಾರೀರಿಕ ಶಕ್ತಿಯ ವಿವಿಧ ರೂಪಗಳನ್ನೇ ನೆಚ್ಚಿಸಾಗಿದ್ದೇವೆ. ನಮ್ಮ ರಾಜಕೀಯ ಧುರೀಣರು ಈಗೆರಡು ತಲೆಮಾರಿನಿಂದಲೂ ಬ್ರಿಟಿಶ ರಾಜ್ಯಭಾರದ ಸೈನ್ಯ ಶಾಖೆಯ ಅಪಾರ ವ್ಯಯಕ್ಕಾಗಿ ಕೋಲಾಹಲ ಎಬ್ಬಿಸಿದ್ದರು. ನಾವು ಇಂದು ಸ್ವತಂತ್ರರು. ಆದರೂ ನಮ್ಮ ಸೈನ್ಯ ಶಾಖೆಯ ವೆಚ್ಚ ಹೆಚ್ಚಿದೆ. ಇದ ಹಾಗೂ ಇನ್ನೂ ಹೆಚ್ಚುವ ಹೆದರಿಕೆಯಿದೆ. ಇದರಿಂದ ನಾವು ಹೆಮ್ಮೆ ಪಟ್ಟುಕೊಳ್ಳುತ್ತಿದ್ದೇವೆ. ಈ ಬಗ್ಗೆ ನಮ್ಮ ಶಾಸನ ಸಭೆಯಲ್ಲಿ ಒಬ್ಬರೂ ಸ್ವರವೆತ್ತಲಿಲ್ಲ. ಪಾಶ್ಚಾತ್ಯರ ನಿರರ್ಥಕ ಮತ್ತು ಟೊಳ್ಳು ಅನುಕರಣದ ನಂತರವೂ ನನ್ನಲ್ಲಿ ಮತ್ತು ಇನ್ನಿತರರಲ್ಲಿ ಆಶಾಕಿರಣ ಮಿನುಗುತ್ತಿದೆ. ೧೯೧೫ರಿಂದ ೩೨ ವರ್ಷಗಳ ದೀರ್ಘಕಾಲದ ಅಹಿಂಸಾ ಪಾಠವು ಅದೆಷ್ಟೇ ದೋಷ ಪೂರ್ಣವಿದ್ದರೂ ಭಾರತವು ಈ ಮೃತ್ಯು ತಾಂಡವವನ್ನು ಮೀರಿ ನೈತಿಕ ಶಿಖರವನ್ನು ಮುಟ್ಟಿ ಮೆರೆಯುವದು."

ಮೋ. ಕ. ಗಾಂಧಿ
ಹೊಸದಿಲ್ಲಿ

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣ

ಬಿರ್ಲಾಭವನ ಹೊಸದಿಲ್ಲಿ ೨೦-೧೧-೪೭

ಇನ್ನು ಮುಂದೆ ಅಸಹಕಾರ ಬೇಡ

ಈ ದಿನ ಸಾಯಂಕಾಲ ಪ್ರಾರ್ಥನೋತ್ತರ ಭಾಷಣದಲ್ಲಿ ಗಾಂಧೀಜಿ, ಒಬ್ಬನೆ ಸಭಿಕನಿಂದ ಎರಡು ಚೀಟಿಗಳು ತಮಗೆ ಬಂದಿರುವದಾಗಿ ಹೇಳಿದರು. ತಾನು ತನ್ನ ಉದ್ಯೋಗವನ್ನು ಬಿಟ್ಟುಗೊಟ್ಟಿರುವದಾಗಿಯೂ ತಮ್ಮ (ಗಾಂಧೀಜಿ) ನೇತೃತ್ವದಲ್ಲಿ ಕೆಲಸ ಮಾಡುವದಾಗಿ ಒಂದು ಚೀಟಿಯಲ್ಲಿ ಬರೆದಿದ್ದಾನೆ. ಮತ್ತೊಂದರಲ್ಲಿ ಪ್ರಾರ್ಥನೆಯ ಕಾಲಕ್ಕೆ ಭಜನೆಯೊಂದನ್ನು ಹಾಡುವದಾಗಿ ಬರೆಯಲಾಗಿದೆ. ಅವನು ತನ್ನ ಉದ್ಯೋಗಕ್ಕೆ ಶರಣುಹೊಡೆದದ್ದು ತಪ್ಪು ಎಂದು ಮೊದಲನೆಯ ಚೀಟಿಯ ಸಂಬಂಧದಲ್ಲಿ ನಾನು ಹೇಳದಿರಲಾರೆ. ಬ್ರಿಟಿಶರಾಳಿಕೆಯ ಕಾಲಕ್ಕೆ ನಾನು ಅಸಹಕಾರವನ್ನು ಬೋಧಿಸಿದ್ದು ನಿಜ. ಅದರೀಗ ಅಂಥ ಪರಿಸ್ಥಿತಿಯೇನೂ ಇರುವದಿಲ್ಲ. ತನ್ನ ಉಪಜೀವನಕ್ಕಾಗಿ ಎಲ್ಲಿಯೇ ನೌಕರಿ ಮಾಡುತ್ತಿರುವಾಗಲೂ ಮನಸಿದ್ದರೆ ತನ್ನ ದೇಶ ಸೇವೆಯನ್ನು ಪ್ರತಿಯೊಬ್ಬನು ಮಾಡಬಲ್ಲನು. ಹೊಟ್ಟೆಗಾಗಿ ದುಡಿಯುವ ಪ್ರತಿಯೊಬ್ಬನೂ ಪ್ರಮಾಣಿಕ ರೀತಿಯಿಂದ ಮತ್ತು ಯಾವದೇ ಬಗೆಯ ಹಿಂಸೆಗೆಳಸದೆ ಉದ್ಯೋಗ ಮಾಡುತ್ತ ಹೋದರೆ ಹಾಗೆ ಮಾಡಬಲ್ಲನು. ನನ್ನ ಹತ್ತರ ತನಗೆ ಕೊಡುವದೇನೂ ಇಲ್ಲ ಎಂಬುದನ್ನು ಈ ಲೇಖಕನು ತಿಳಿದು ಕೊಳ್ಳತಕ್ಕದ್ದು. ಹೀಗಾದರೂ ಅವನಿಗೆ ಯಾವದೇ ಬಗೆಯ ಸೇವೆ ಮಾಡುವ ಇಚ್ಛೆ ಇದ್ದರೆ ಗೋಶಾಲಾ ಚಟುವಟಿಕೆಗಳಲ್ಲಿ ಅವನು ತನ್ನ ಸೇವೆಯನ್ನು ಸಲ್ಲಿಸಬೇಕು. ಈ ಸಂಬಂಧ ದಲ್ಲಿ ನಾನು ಮುಂದೆ ಉಲ್ಲೇಖಿಸಿರುವೆನು.

ಪ್ರಾರ್ಥನೆಯ ಭಜನವನ್ನು ಮಾಡುವದು ಪ್ರತಿಯೊಬ್ಬರಿಗೆ ಬಿಟ್ಟು ಕೊಡಲಾಗದು. ಪರಮಾತ್ಮನ ಸೇವಕರೆಂದು ಯಾರ ಖ್ಯಾತಿಯಿರುವದೋ ಅಂಥವರೆ ಮೊದಲು ಅಪ್ಪಣೆ ಪಡೆದು ಭಜನವನ್ನು ಮಾಡಬಲ್ಲರು.

ಓಖಲಾಕ್ಕೆ ಭೆಟ್ಟಿ

ಸುಚೇತಾದೇವಿಅವರ ಸಹಕಾರ್ಯಕರ್ತರೊಡನೆ ಓಖಲಾ ನಿರಾಶ್ರಿತರ ಶಿಬಿರಕ್ಕೆ ಭೆಟ್ಟಿಕೊಟ್ಟಿದ್ದನ್ನು ಅನಂತರ ಉಲ್ಲೇಖಿಸಿದರು. ಶಿಬಿರವು ಅತ್ಯಂತ ಸ್ವಚ್ಛವಾಗಿದ್ದುದನ್ನು ನೋಡಿ ನನಗೆ ಸಂತೋಷ ವಾಗಿದೆ. ಕಾಲಕಾಲಕ್ಕೆ ಆಗುವ ಜಾತ್ರೆಗಳಿಗಾಗಿ ಬರುವ ಯಾತ್ರಿಕರಿಗಾಗಿ ಇರುವಧರ್ಮ ಶಾಲೆಗಳಲ್ಲಿ ಇದನ್ನು ಹಾಕಲಾಗಿದೆ. ಈ ಕಟ್ಟಡಗಳನ್ನು ಈಗ ನಿರಾಶ್ರಿತರ ಪರಿಹಾರ ಶಿಬಿರಗಳನ್ನಾಗಿ ಮಾರ್ಪಡಿಸಲಾಗಿದೆ. ಯೋಗ್ಯ ನೀರಿನ ಸೌಕರ್ಯ ಸ್ವಲ್ಪ ಕಠಿಣವಾಗಿದೆ. ಇದನ್ನು ಹೋಗಲಾಡಿಸುವದಕ್ಕಾಗಿ ಒಳ್ಳೆ ಪ್ರಯತ್ನ ಮಾಡಲಾಗಿದೆ. ಇನ್ನು ಅನೇಕ ನಿರಾಶ್ರಿತರಿಗಾಗಿ ನೀರಿನ ಸೌಕರ್ಯವನ್ನು ಏರ್ಪಡಿಸಿದ್ದಾದರೆ ಇನ್ನಷ್ಟು ಹೆಚ್ಚು ಜನರಿಗೆ ಈ ಶಿಬಿರದಲ್ಲಿ ಆಶ್ರಯ ಕೊಡುವುದು ಶಕ್ಯವಿದೆ. ಎಂಬಲ್ಲಿ ಸಂದೇಹವಿಲ್ಲ.

ಅಧಿಕಾರಿಗಳು

ನಿರಾಶ್ರಿತರ ಸಂಬಂಧ ಹೇಳುವಾಗ ತಮಗೆ ವರದಿಮಾಡಲ್ಪಟ್ಟ ಕೆಲವು ಲೋಪದೋಷಗಳತ್ತ ಗಮನವನ್ನೆಳೆಯಬೇಕಾಗಿದೆ ಯೆಂದು ಗಾಂಧೀಜಿಯವರು ನಿರಾಶ್ರಿತರ ಪರಿಹಾರ ಬಗ್ಗೆ ಮಾತಾಡುವಾಗ ಹೇಳಿದರು. ನಿರಾಶ್ರಿತರಲ್ಲಿಯೇ ಕಳ್ಳಪೇಟೆ ಮನೆಮಾಡಿದೆಯೆಂದು ನನಗೆ ತಿಳಿದು ಬಂದಿದೆ. ಈ ನಿರಾಶ್ರಿತರ ಪರಿಹಾರ ಕಾರ್ಯದಲ್ಲಿ ನಿಯೋಜಿತರಾದಅಧಿಕಾರಿಗಳುನಿರ್ದೋಷಿಗಳಾಗಿರುವರೆಂದು ವರದಿಯಾಗಿರುವದಿಲ್ಲ, ಅಧಿಕಾರಿಗೆ ಲಂಚವನ್ನು ಕೊಡದೆ ಸ್ಥಳವೆ ಸಿಕ್ಕುವದಿಲ್ಲೆಂದು ಹೇಳಲಾಗುತ್ತದೆ. ಅಲ್ಲದೆ ಅವರ ಆಚರಣೆಯು ನಿರ್ದುಷ್ಟವಾಗಿಲ್ಲ. ಸ್ವಾಭಾವಿಕವಾಗಿ ಯಾವ ಆರೋಪವೂ ಸಾರ್ವತ್ರಿಕವಾಗಲಾರದು. ಆದರೆ ಅನೇಕರಲ್ಲಿ ಒಬ್ಬನಾದರೂ ಅಂಥವನು ಹೊರಟರೆ ಅನೇಕರು ಅದರ ದುಷ್ಪರಿಣಾಮಗಳನ್ನು ಅನುಭೋಗಿಸಬೇಕಾಗುವದು.

ನಿರಾಶ್ರಿತರಲ್ಲಿಯ ದುರಭ್ಯಾಸ

ನಿರಾಶ್ರಿತರೂ ಸಣ್ಣಪುಟ್ಟಕಳವುಗಳಿಗೆ ಹೊರತಾಗಿರುವದಿಲ್ಲೆಂದು ಹೇಳಲಾಗುತ್ತದೆ. ಅವರು ಸಂಪೂರ್ಣ [illegible] ಸದಾಚಾರಿಗಳಾಗಿರಬೇಕಾದುದು ಅವಶ್ಯ. ನಿರಾಶ್ರಿತರಿಗೆ ಕೊಡಲ್ಪಟ್ಟ 'ರಜಾಯಿ' ಗಳನ್ನು ಹಂಡು ಒಳಗಿನ ಅರಳೆಯನ್ನು ಬಿಕರಿ ಗ್ಯಾಲೋದಿಂದರರ್ಟಿ ಮೊದಲಾದ್ದನ್ನ ಮಾಡಿ ಸಿಕೊಂಡರೂ ಉಂಟೆಂದು ಸುದ್ದಿ. ಇದೇ ಬಗೆಯ ಇನ್ನು ಅನೇಕ ಸಂಗತಿಗಳನ್ನು ಹೇಳಲಾಗುತ್ತದೆ. ಆದರೆ ನಿರಾಶ್ರಿತರ ಎಲ್ಲ ದುಷ್ಕೃತ್ಯಗಳನ್ನು ವಿವರಿಸುತ್ತ ಸಭಿಕರನ್ನು ಬಸಳ ಹೊತ್ತು ಕೂಡ್ರಿಸಲಯಸುವದಿಲ್ಲ. ಇಂದು ಸಾಯಂಕಾಲದ ವಿಷಯದತ್ತ ಧಾವಿಸಬಯಸುತ್ತೇನೆ.

ಹಿಂದುಸ್ಥಾನದ ಗೋಸಂಪತ್ತು

ದಿಲ್ಲಿಯಲ್ಲಿ ಶಿಕ್ಷಣಗಳಲ್ಲಿ ವಾರ್ಷಿಕೋತ್ಸವ ಗೋಶಾಲೆಯ ಸಂಬಂಧದಲ್ಲಿ ವಾರ್ಷಿಕ ಸಭಾ ರಂಭವೊಂದು ಇದ್ದಿತು ಆಚಾರ್ಯ ಕೃಪಲಾನಿಯವರು ಅದರ ಅಧ್ಯಕ್ಷತೆ ವಹಿಸಲಿದ್ದರು. ಕೆಲ ನಿಮಿಷಗಳ ವರೆಗೆಯಾದರೂ ಬಂದಿರುವ ಸಭೆಗೂ ಸಭೆಗೆ ಬರಬೇಕೆಂಬ ಆಮಂತ್ರಣವಿದ್ದಿತು. ಕೇವಲ ಭೂಷಣವೆಂದು ಯಾವ ಸಭೆಗೂ ಹೋಗಬಾರದೆಂದು ನನ್ನ ಅಭಿಪ್ರಾಯ. ಹತ್ತು ನಿಮಿಷಗಳಲ್ಲಿ ನಾನೇನೂ ಮಾಡಲಾರೆ, ನೋಡಲಾರೆ. ಇಂತಹ ವಿಷಯದಲ್ಲಿಯೇ ನಾನು ನಿರತನಾಗಿ ಬಿಟ್ಟದ್ದರಿಂದ ಬೇರೆ ಯಾವ ಕಾರ್ಯವನ್ನೂ ನಾನು ಮಾಡಲಾರೆ. ನನ್ನ ಸಹಕಾರವನ್ನು ಕೇಳಿದ ವ್ಯವಸ್ಥಾಪಕರು ನನ್ನ ಅಭಿಪ್ರಾಯಕ್ಕೆ ಒಪ್ಪಿದರು. ಆದರೆ ಗೋಸೇವೆಯ ಬಗ್ಗೆ ಪ್ರಾರ್ಥನೋತ್ತರ ಭಾಷಣದಲ್ಲಿ ಕೆಲ ಮಾತುಗಳನ್ನು ಹೇಳಬೇಕೆಂದು ಅವರು ಕೇಳಿಕೊಂಡರು. ಹಾಗೆ ಮಾಡಲು ನಾನು ಒಪ್ಪಿಕೊಂಡೆ. ಹಿಂದುಸ್ಥಾನದ ಗೋಸಂಪತ್ತನ್ನು ಉಳಿಸಿಕೊಂಡು ಅಭಿವೃದ್ಧಿ ಪಡಿಸಿಕೊಳ್ಳುವದು ಮತ್ತು ಅದರ ಹೀಳಿಗೆಯನ್ನು ಯೋಗ್ಯ ರೀತಿಯಿಂದ ಪಾಲಿಸಿಕೊಂಡು ಹೋಗುವದು ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸುವ ಕಾರ್ಯಕ್ಕಿಂತ ಕಠಿಣವಾದುದೆಂಬುದು ನಿಸಂದೇಹವಾಗಿದೆ. ಆಕಳನ್ನು ಹೇಗೆ ರಕ್ಷಿಸಬೇಕೆಂಬ ಬಗ್ಗೆ ನಿಜವಾದ ಜ್ಞಾನ ನನಗಿದೆಯೆಂದೂ ಆಚಾರ್ಯರನ್ನು ನಿಶ್ಚಯಿಂದ ಮಾಡುವನವನು ನಾನೆಂದೂ ಹೇಳಿಕೊಳ್ಳಲಿಲ್ಲ. ಆದರೆ ಈ ಸಮಸ್ಯೆಯತ್ತ ಯೋಗ್ಯ ಕಾಳಜಿಯನ್ನು ತೆಗೆದುಕೊಳ್ಳಬೇಕೆಂದು ಜನಸಾಮಾನ್ಯರಲ್ಲಿ ಬಿಂಬಿಸಲು ಅದು ಹೇಗೋ ನಾನು ಸಮರ್ಥನಾಗಿಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಗೋಶಾಲೆಯವ್ಯವಸ್ಥೆ ಮಾಡುವವರು ಅದಕ್ಕೆ ಹಣವನ್ನು ಹೇಗೆ ವೆಚ್ಚ ಮಾಡಬೇಕೆಂಬುದನ್ನು ಬಲ್ಲರು. ಆದರೆ ಹಿಂದುಸ್ಥಾನದ ಗೋಸಂಪತ್ತಿನ ಉಪಯೋಗವನ್ನು ಹೇಗೆ ಮಾಡಿಕೊಳ್ಳಬೇಕೆಂಬುದನ್ನು ಅವರು ಅರಿಯರು. ಆ ಆಕಳು ಹೆಚ್ಚು ಹಾಲು ಕೊಡಬೇಕಾದರೆ ಅದನ್ನೆಂತು ವರ್ಧಿಸಬೇಕೆಂಬುದು ಅವರಿಗೆ ತಿಳಿಯದು, ಹೋರಿಗಳ ಹೀಳಿಗೆ ಸುಧಾರಿಸಬೇಕಾದರೆ ಏನು ಮಾಡಬೇಕೆಂಬುದನ್ನೂ ಅವರು ಅರಿಯರು.

ಗೋಶಾಲೆಗಳ ವ್ಯವಸ್ಥೆ

ಆದುದರಿಂದ ಹಿಂದುಸ್ಥಾನದಲ್ಲಿಯ ಗೋಶಾಲೆಗಳು ಹಿಂದುಸ್ಥಾನದ ದನಗಳನ್ನು ಯೋಗ್ಯ ರೀತಿಯಿಂದ ಜೋಪಾಸನೆ ಮಾಡುವ ಕಲೆಯನ್ನು ಕಲಿಸುವ, ಒಳ್ಳೆಹಾಲು ಉತ್ತಮ ಆಕಳುಗಳನ್ನು ಅಷ್ಟೇ ಉತ್ತಮ ಬೀಜದ ಹೋರಿಗಳನ್ನು ಮತ್ತು ಪುಷ್ಟ ಎತ್ತುಗಳನ್ನು ಕೊಳ್ಳಬಹುದಾದ ಮಾದರಿ ಡೇರಿಗಳ ಮತ್ತು ಸ್ಥಳಗಳಾಗಿ ಇರದೆ, ಅದು ಹೇಗೋ ದನಗಳನ್ನು ಇಡುವ ಸ್ಥಳಗಳಾಗಿ ಇರುವವು. ತತ್ಪರಿಣಾಮವಾಗಿ ಹಿಂದುಸ್ಥಾನ ಜಗತ್ತಿನಲ್ಲಿ ಅತ್ಯುತ್ತಮ ದನಗಳನ್ನು ಪ್ರದರ್ಶಿಸುವ ಮತ್ತು ಶಕ್ಯವಿದ್ದಷ್ಟು ಕಡಮೆದರದಿಂದ ಸುಮಧುರ ಹಾಲನ್ನು ಕೊಡುವ ಸ್ಥಾನವಾಗಿ ಉಳಿಯದೆ ಬಹುಶಃ ಈ ವಿಷಯದಲ್ಲಿ ಕೊನೆಯ ಸ್ಥಾನವನ್ನು ಪಡೆದಿದೆ. ಶಗಣಿ ಮತ್ತು ಉಚ್ಚೆಯ ಯೋಗ್ಯ ಉಪಯೋಗವನ್ನೆಂತು ಮಾಡಬೇಕೆಂಬುದೂ ಅವರಿಗೆ ಗೊತ್ತಿಲ್ಲ. ಸತ್ತದನಗಳ ಉಪಯೋಗವನ್ನೆಂತು ಮಾಡಬೇಕೆಂಬುದೂ ಗೊತ್ತಿಲ್ಲ. ತತ್ಪರಿಣಾಮವಾಗಿ ಅವರ ಅಜ್ಞಾನದಿಂದ ಕೋಟ್ಯವಧಿ ರೂಪಾಯಿಗಳನ್ನು ಕಳೆದುಕೊಳ್ಳಬೇಕಾಗಿದೆ. ಗೋಸಂಪತ್ತು ದೇಶಕ್ಕೆ ಭಾರವಾಗಿದೆಯೆಂದೂ ಕೇವಲ ನಾಶವಾಗಲಿಕ್ಕೇ ಅದು ಯೋಗ್ಯವೆಂದೂ ತಜ್ಞರ ಅಭಿಪ್ರಾಯ. ಹಾಗೆ ನನ್ನ ಅಭಿಪ್ರಾಯವಿಲ್ಲ. ಆದರೆ ಇನ್ನು ಮುಂದೆಯೂ ಇದೇ ಬಗೆಯ ಅಜ್ಞಾನ ಜನಸಾಮಾನ್ಯರಲ್ಲಿ ಉಳಿದದ್ದಾದರೆ ದನಗಳು ದೇಶಕ್ಕೆ ಭಾರವಾಗಿಯೆ ಪರಿಣಮಿಸುವವೆಂದು ನನಗೆ ಎನಿಸದಿರಲಾರದು. ಆದುದರಿಂದ ಗೋಶಾಲೆಯ ವ್ಯವಸ್ಥಾಪಕರು ಎಲ್ಲ ದೃಷ್ಟಿಯಿಂದಲೂ ಅವು ಮಾದರಿ ಸಂಸ್ಥೆಗಳಾಗುವಂತೆ ನೋಡಿಕೊಳ್ಳುವರೆಂದು ನಾನು ಆಶಿಸುತ್ತೇನೆ.

ಬಿರ್ಲಾ ಭವನ, ಹೊಸದಿಲ್ಲಿ, ೨೧-೧೧-೪೭

ಭಾರತದ ಹಾಲಿನ ಕ್ಷೇತ್ರಗಳು

ಗೋವುಗಳ ಸಂರಕ್ಷಣ ಮತ್ತು ಪೋಷಣೆಗಳ ಬಗ್ಗೆ ನಿನ್ನೆ ನಾನು ಹೇಳಬೇಕೆನಿಸಿದೆ. ನಿನ್ನೆ ನಾನು ಹೇಳಿದ ಗೋಶಾಲೆಯ ವಾರ್ಷಿಕೋತ್ಸವದ ಈಗ ಬಹುಶಃ ಜರುಗುತ್ತಿರಬಹುದು. ಒಂದು ಸಣ್ಣ ಕಿರಾಯಿಗಳಿಗಾಗಿ ಹಿಂದುಸ್ಥಾನದಲ್ಲಿ ನಡೆಸಲ್ಪಡುತ್ತಿದ್ದ ನಿರುಪ ಹಾಲಿನ ಕ್ಷೇತ್ರಗಳ ವಿಷಯವನ್ನು ನನ್ನ ಭಾಷಣದಲ್ಲಿ ಎತ್ತಲಿಲ್ಲ. ಆ ಹಾಲಿನ ಕ್ಷೇತ್ರಗಳನ್ನು ಹಾಗೇ ನಡೆಸಲ್ಪಡುತ್ತವೆಯೆಂದು [illegible] ಹೇಳಿದ್ದಾರೆ. [illegible] ಅಧಿಕಾರ ವಹಿಸಿದ್ದಾಗ [illegible] ವರ್ಷಗಳ ಹಿಂದೆ ನಾನು ಬೆಂಗಳೂರ [illegible] ಹಾಲಿನ ಕ್ಷೇತ್ರವನ್ನು ನೋಡಿದ್ದೆ. ಆಗ ಅಲ್ಲಿ ನಾನು ಕೆಲವು ಸುಂದರವಾದ ಹಸುಗಳನ್ನು ಕಂಡಿದ್ದೆ. ಅವುಗಳಲ್ಲಿ [illegible] ಹಸುವಾಗಿತ್ತು. ಅದು [illegible] ಅತ್ಯುತ್ತಮವಾಗಿತ್ತು. ಅದು [illegible] ಕೊಡುತ್ತಿತ್ತು. ಆ ಹಸುವು ಎಲ್ಲಿ [illegible] ಗಿತ್ತು, [illegible] ನೋಡುತ್ತಿತ್ತು, ಅದು ಎಂತಹ ಸುಂದರ ದೃಶ್ಯ!

ಕೆಲಸಗಳಿಂದ ತಪ್ಪಿಸುವುದು

ಇದಕ್ಕೆ ವಿರುದ್ಧ ವಿಧದ ದೃಶ್ಯವನ್ನು ನಾನು ನೋಡಿಲ್ಲ. ಆದರೆ ಎತ್ತುಗಳಿಗಾಗಿ [illegible] ರದೆ ಅನೇಕ ಹೋರಿಗಳನ್ನು [illegible] ದೆಂದು ಅಧಿಕೃತವ್ಯಕ್ತಿ ನನಗೆ ಹೇಳಿದರು. ಈ ಕ್ಷೇತ್ರಗಳು ಸರಿಯಾದ ಎಕರೆ ಭೂಮಿಯನ್ನು ಆಕ್ರಮಿಸಿದ್ದವು. ಇವೆಲ್ಲ [illegible] ಗಾಗಿಯೇ ಇದ್ದವು. ಅದಕ್ಕೆ ಅನೇಕ [illegible] ರೂಪಾಯಿಗಳ ಖರ್ಚಾಗುತ್ತಿತ್ತು. ಬ್ರಿಟಿಶ [illegible] ಹಿಂದುಸ್ಥಾನದಲ್ಲಿದ್ದುದರಿಂದ ಅವರಿಗೆ ನಮಗೆ ಬೇಡ ತನಗಾಗಿ ಇಷ್ಟು ವೆಚ್ಚದ ಗೋಕ್ಷೇತ್ರಗಳನ್ನಿಟ್ಟಿರುವುದು ತಿಳಿದರೆ ಹಿಂದೀ [illegible] ನಾಚಿಕೊಳ್ಳುವುದೇ ಸರಿ. ಸಾಮಾನ್ಯ ಮನುಷ್ಯನಿಗಿರದ ಯಾವ ವಿಶೇಷ ಸವಲತ್ತನ್ನೂ ಹಿಂದೀ ಶಿಪಾಯಿ ಬಯಸನೆಂದು ನನಗೆ ಖಂಡಿತವಾಗಿ ಗೊತ್ತಿದೆ.

ಹಸುಗಳ ಬಗ್ಗೆ ಸತೀಶಬಾಬುಗಳ ಅಭಿಪ್ರಾಯ

ಹಸು ಮತ್ತು ಎಮ್ಮೆಗಳ ಮೇಲೆ ಅತ್ಯಂತ ವಿಸ್ತಾರವಾಗಿಯೂ ಅಧಿಕೃತವಾಗಿಯೂ ಬರೆದ ಒಂದೇ ಒಂದು ಪುಸ್ತಕವೆಂದರೆ ಖಾದಿ ಪ್ರತಿಷ್ಠಾನದ ಶ್ರೀ ಸತೀಶಚಂದ್ರದಾಸಗುಪ್ತರವರ ಗ್ರಂಥ. ಪ್ರಚಲಿತ ಸಾಹಿತ್ಯದ ಉದ್ಧೃತ ವಾಕ್ಯಗಳಲ್ಲಿಲ್ಲ; ಅದು ಅವರ ವೈಯಕ್ತಿಕ ಅನುಭವದ ಆಧಾರದ ಮೇಲೆ ಬರೆದದ್ದು. ಅದನ್ನು ಅವರು ಹಿಮ್ಮೆಚ್ಚಲಿ ನಲ್ಲಿದ್ದಾಗ ಬರೆದದ್ದು. ಅದನ್ನು ಬಂಗಾಲಿ ಮತ್ತು ಹಿಂದುಸ್ಥಾನಿಗಳಿಗೆ ಅನುವಾದ ಮಾಡಲಾಗಿತ್ತು. ಭಾರತದ ಗೋವುಗಳ ವೃದ್ಧಿ ಮತ್ತು ಹಾಲಿನ ಉತ್ಪನ್ನದ ಉತ್ಕರ್ಷ ಇವುಗಳನ್ನು ಸಾಧಿಸಬೇಕಾದರೆ ಆ ಪುಸ್ತಕವನ್ನು ಓದಬೇಕು. ಆ ಪುಸ್ತಕದಲ್ಲಿ ಹಸು ಮತ್ತು ಎಮ್ಮೆಗಳ ತಾರತಮ್ಯವೂ ಇತ್ತು.

ಹಿಂದು ಮತ್ತು ಹಿಂದುಧರ್ಮ

ಸಭಿಕರಲ್ಲೊಬ್ಬನು ಈ ಪ್ರಶ್ನೆ ಕೇಳಿದ್ದಾನೆ. ಹಿಂದು ಅಂದರೇನು? ಆ ಶಬ್ದದ ವ್ಯುತ್ಪತ್ತಿಯೇನು? ಹಿಂದು ಧರ್ಮವೆಂಬುದೊಂದು ಎಲ್ಲಾದರೂ ಇದೆಯೆ?

ಈ ಕಾಲದಲ್ಲಿ ಇವು ಸೂಕ್ತ ಪ್ರಶ್ನೆಗಳೇ ಸರಿ. ನಾನು ಇತಿಹಾಸಜ್ಞನಲ್ಲ, ನನಗೇನೂಪಾಂಡಿತ್ಯ ತಿಳಿದಿಲ್ಲ. ಇದೆಯೆಂದು ನಾನು ಸಾಧಿಸಿಲ್ಲ. ಆದರೆ ಒಂದು ಆಧಾರ ಗ್ರಂಥದಲ್ಲಿ ವೇದದಲ್ಲಿ ಹಿಂದು ಶಬ್ದವಿಲ್ಲವೆಂದು ಓದಿದ್ದೆ. ಆದರೆ ಅಲೆಗ್ಸಾಂಡರ್ ಮಹಾಶಯನು ಭಾರತವನ್ನು ಆಕ್ರಮಿಸಿದಾಗ ಸಿಂಧುನದಿಯ ಪೂರ್ವ ನಿವಾಸಿಗಳು ಹಿಂದುಗಳೆಂದು ಕರೆಯಲ್ಪಟ್ಟರು. (ಇಂಗ್ಲೀಷಿನಲ್ಲಿ ಹಿಂದೀಯರು ಸಿಂಧುವನ್ನು ಇಂಡಸ್ ಎನ್ನುತ್ತಾರೆ) [illegible] ಧರ್ಮ ಹಿಂದು ಧರ್ಮವೆಂದಾಯಿತು. ಅದರಿಂದ [illegible] ಅತ್ಯಂತ ಪರಧರ್ಮಸಹಿಷ್ಣುವಾಗಿತ್ತು. [illegible] ಹಿಂದುಧರ್ಮವನ್ನು [illegible] ನನಗೆ ಧರ್ಮಕ್ಕೆ [illegible] ಹಿಂದುಸ್ಥಾನವನ್ನು [illegible] ಹಿಂದುಸ್ಥಾನ ನನಗೆ ಎಲ್ಲಕ್ಕೂ [illegible] ವೇದಗಳನ್ನು [illegible] ಹಿಂದು ಧರ್ಮದ [illegible] ಧರ್ಮ [illegible]

ಧರ್ಮವಾಗ [illegible] ಧರ್ಮದ [illegible] ಹಿಂದು ಧರ್ಮ [illegible] ವೇದ [illegible]

ಸಾಮೂಹಿಕ ಶಿಬಿರಗಳು

[illegible]

ಹಾಸ್ಯಕ ಕೃತ್ಯಗಳು

[illegible]

ರೋಮನ್ ಕ್ಯಾಥೊಲಿಕ ಧರ್ಮ

[illegible]

(ಇನ್ನೂ ಇದೆ)

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣ

[೯ನೇ ಪುಟದಿಂದ ಮುಂದರಿದುದು]

ಸಿಸ್ಲುವದೇ? ನನಗೆ ಹಿಂದುಸ್ತಾನವು ಹಾಗೆ ಜೀವ ಕ್ಷಿತಿಗಿಳಿಯುವದನ್ನು ನೋಡಲು ನಾನು ಬದುಕಿರಬಾರದೆನಿಸುತ್ತದೆ. ಬಿಕ್ಕಟ್ಟಿನ ಹಿಂದು ಶೀಘ್ರದಿಗೆ ಸದ್ಬುದ್ಧಿಯು ಪುನಃ ಬರಲೆಂದು ದೇವರನ್ನು ನೀವೆಲ್ಲ ನನ್ನೊಡನೆ ಪ್ರಾರ್ಥಿಸಿರಿ ಎಂದು ಬಿನ್ನವಿಸುತ್ತೇನೆ.

೨೩—೧೧—೧೯೪೭

ಸೋಣಿಪತ ಕ್ರಿಶ್ಚಿಯನ್ನರು

ಗುರುಗಾಂವ ಜಿಲ್ಹೆಯ ಒಂದು ಹಳ್ಳಿಯಲ್ಲಿ ಕ್ರಿಶ್ಚಿಯನ್ನರನ್ನು ಕೆಟ್ಟರೀತಿಯಿಂದ ನಡೆಸಿಕೊಳ್ಳುತ್ತಿರುವ ವಿಷಯದತ್ತ ಹೊರಳಿ ಗಾಂಧೀಜಿ ಹೀಗೆ ಹೇಳಿದರು.

“ಸೋಣಿಪತದ ಕ್ರಿಶ್ಚಿಯನ್ನರನ್ನೂ ಹೆಚ್ಚು ಕಡಿಮೆ ಇದೇ ಬಗೆಯಾಗಿ ನಡೆಸಿಕೊಳ್ಳುತ್ತಿರುವ ಬಗ್ಗೆ ನನಗೆ ಸುದ್ದಿ ಬಂದಿದೆ. ಮೊದಲು ಅಲ್ಲಿಯ ಪಾದ್ರಿಗಳಿಗೆ ತಮ್ಮ ವಾಸ ಭವನಗಳನ್ನು ನಿರಾಶ್ರಿತರಿಗಾಗಿ ತೆರವುಮಾಡಲು ಕೇಳಲಾಯಿತಂತೆ. ಇದಕ್ಕೆ ಅವರು ಸಂತೋಷದಿಂದ ಒಪ್ಪಿದರಂತೆ ಮತ್ತು ಅವರನ್ನು ಈ ಬಗ್ಗೆ ಅಭಿನಂದಿಸಲಾಯಿತಂತೆ. ಆದರೆ ಅವರ ಈ ಅಭಿನಂದನೆಯೇ ಅಭಿಶಾಪವಾಗಿ ಪರಿಣಮಿಸಿ ಅವರ ಇನ್ನುಳಿದ ವಾಸಭವನವನ್ನು ಒತ್ತಾಯದಿಂದ ಕಿತ್ತುಕೊಳ್ಳಲಾಯಿತೆಂದು ತಿಳಿದುಬರುತ್ತದೆ. ಇಷ್ಟೇ ಅಲ್ಲ; ತಮಗೆ ಸೋಣಿಪತದಲ್ಲಿನ ಜೀವನ ಯಾತನವು ತೊಂದರೆಯದೆಂದು ತೋರಿದ್ದಾದರೆ ಸೋಣಿಪತವನ್ನು ಬಿಟ್ಟು ಹೋಗುವವಾಗಿ ಕೊನೆಗೆ ಹೇಳಲಾಯ್ತಂತೆ. ಮೇಲ್ಕಾಣಿಸಿದಂತೆ ಘಟನೆಗಳು ಇದ್ದುದೇ ನಿಜವಿದ್ದರೆ ಈ ಪಿಡುಗು ಸರ್ವವ್ಯಾಪಿಯಾಗಿ ಭಾರತವನ್ನು ಎಲ್ಲಿಗೊಯ್ದು ಮುಟ್ಟಿಸುವದೊ ಯಾರು ಬಲ್ಲರು?”

ಮುಯ್ಯಿಗೆ ಮುಯ್ಯಿ

ಪಾಕಿಸ್ತಾನದಲ್ಲಿ ಉಪಟಳ ತಗ್ಗಿಸದಿದ್ದರೆ ಹಿಂದುಸ್ತಾನದಲ್ಲಿಯೂ ಪರಿಸ್ಥಿತಿಯು ಸುಧಾರಿಸಲಿಕ್ಕಿಲ್ಲವೆಂದು ಕೆಲ ಸ್ನೇಹಿತರೊಡನೆ ಚರ್ಚಿಸುವಾಗ ನನಗೆ ಹೇಳಲಾಯಿತು. ಲಾಹೋರದ ವಿಷಯವಾಗಿ ಪತ್ರಿಕೆಗಳಲ್ಲಿ ಪ್ರಕಟವಾದುದನ್ನು ಉದಾಹರಣೆಯೆಂದು ತೋರಿಸಿದರು ಅವರು. ನಾನು ಪತ್ರಿಕೆಗಳಲ್ಲಿ ಬಂದುದನ್ನು ನೆಚ್ಚಿ ನಡೆವವನಲ್ಲ. ಅವುಗಳಲ್ಲಿ ವರದಿಯಾದ ವರ್ತಮಾನಗಳನ್ನು ನಂಬಿ ವೃಥಾ ನೊಂದುಕೊಳ್ಳಬಾರದೆಂದು ವೃತ್ತಪತ್ರಿಕೆಯ ವಾಚಕರಿಗೆ ಎಚ್ಚರ ಹೇಳಬಯಸುತ್ತೇನೆ. ಅತಿಶ್ರೇಷ್ಠ ವೃತ್ತಪತ್ರವು ಕೂಡ ಅತಿಶಯೋಕ್ತಿ ಅತಿರಂಜನೆಯ ಪ್ರಲೋಭನವನ್ನು ತೊರೆದಿರಲಾರದು. ವೃತ್ತಪತ್ರಿಕೆಗಳಲ್ಲಿ ಬಂದುದೆಲ್ಲ ನಿಜವಾಗಿದ್ದರೂ ಕೆಡಕು ಮಾಡುವದು ಅನುಕರಣಯೋಗ್ಯವೆಂದೂ ಆಗಲಾರದು.

ಒಳ್ಳೆಯ ನಡತೆ ಬೇಕು

ಪಾಪ ಇಲ್ಲದ ಒಂದು ಚೌಕಟ್ಟು ಇರುವದೆಂದು ತಿಳಿಯುವಾ. ಅದನ್ನು ಒಟ್ಟಾಗಿ ತುಸು ಹಿಡಿದರೂ ಸಾಕು, ಅದರ ಕೋನಗಳು ಓರೆಯಾಗುವವು; ಅದೇ ಆ ಚೌಕಟ್ಟಿನ ಒಂದು ಕೋನವನ್ನು ಕಾಟಕೋನದಲ್ಲಿ ಹಿಡಿದರೂ ಸಾಕು ಉಳಿದ ಮೂರು ಮೂಲೆಗಳು ತಾವಾಗಿ ಕಾಟಕೋನಕ್ಕೆ ನಿಲ್ಲುವವು. ಇದರಂತೆ ಹಿಂದೀ ಒಕ್ಕೂಟದ ಸರಕಾರವೂ ಜನತೆಯೂ ಒಳ್ಳೆಯ ನಡತೆ ತೋರಿದರೆ ಪಾಕಿಸ್ತಾನವು ತಾನಾಗಿ ಹಾದಿಗೆ ಬರುವದೆಂಬುದರಲ್ಲಿಯೂ ಹಿಂದುಸ್ತಾನದಲ್ಲಿ ವಾಸಿಸಿರುವ ತಕರಾರು ತೊರೆಯುವದೆಂಬುದರಲ್ಲಿಯೂ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ಕ್ರಿಶ್ಚಿಯನ್ನರನ್ನು ಕೆಟ್ಟ ರೀತಿಯಿಂದ ನಡೆಸಿಕೊಂಡ ಮಾತು, ಹಿಂದುಸ್ತಾನದಲ್ಲಿ ಇನ್ನು ಮುಂದೆ ಈ ಬಗೆಯ ಕೆಡುಕತನಕ್ಕೆ ಅನುವು ಸಿಗಲಾಗದೆಂಬುದಕ್ಕೆ ಕಾರಣವಾಗಲಿ. ನನಗೆ ಗೊತ್ತಿದ್ದ ಮಟ್ಟಿಗೆ ಕ್ರಿಶ್ಚಿಯನ್ನರನ್ನು ಪೀಡಿಸಲು ಅದಾವ ಕಾರಣವಿತ್ತು, ಆರೋಪವಿತ್ತು? ಈ ಬಗೆಯ ಉಚ್ಛೃಂಖಲ ವೃತ್ತಿಯನ್ನು ಕೂಡಲೇ ನಿಲ್ಲಿಸಿ ನಿಗ್ರಹಿಸಬೇಕು. ಅಂದರೆ ಮಾತ್ರ ಜಗತ್ತಿನ ಎದುರಿಗೆ ಹಿಂದುಸ್ತಾನವು ತಲೆಯೆತ್ತಿ ನಿಂತು ಸರಿಯಾಗಿ ತನ್ನ ಸಮರ್ಥನೆ ಮಾಡಿಕೊಳ್ಳಬಲ್ಲದು.

ನಿರಾಶ್ರಿತರಲ್ಲಿ ಸಹಕಾರ

ಬಳಿಕ ಗಾಂಧೀಜಿ ನಿರಾಶ್ರಿತರ ಸಮಸ್ಯೆಯ ಪ್ರಸ್ತಾಪವೆತ್ತಿ ಹೀಗೆ ನುಡಿದರು.

ನಿರಾಶ್ರಿತರಲ್ಲಿ ಶಿಕ್ಷಕರು, ವಕೀಲರು, ವಿದ್ಯಾರ್ಥಿಗಳು, ಅಧ್ಯಾಪಕರು, ಪಾದ್ರಿಗಳು ಮೊದಲಾದವರು ಇರುತ್ತಾರೆ. ಅವರೆಲ್ಲರು ತಮ್ಮ ನೆರೆ [illegible] ಅಭ್ಯಾಸಗಳಿಂದ [illegible] ಕೈಗೂಡಿಸಿದರೆ [illegible] ಗಿಗಳು, ನಿರುದ್ಯೋಗಿಗಳು ಧನಿಕರು ನಿರ್ಧನರು ಎಲ್ಲರೂ ಹೆಗಲಿಗೆ ಹೆಗಲು ಹಚ್ಚಿ ಆದರ್ಶ ಪಾವನತೆಯನ್ನು ಬೆಳೆಯಿಸಿಕೊಳ್ಳಬಹುದು. ಹಿಂದುಗಳು ಶೀಖರು ಪರಿತ್ಯಜಿಸಿ ಬರಬೇಕಾಗಿ ಬಂದ ಲಾಹೋರವನ್ನು ಅಲ್ಲಿನ ಶ್ರೀಮಂತರು ಆದರ್ಶ ನಗರವನ್ನಾಗಿ ಮಾಡಿರಲಿಲ್ಲವೆ? ಈ ಬಗೆಯ ನಾಗರಿಕ ಸಂಬಂಧಗಳು ದಿಲ್ಲಿಯಂತಹ ಅತಿ ಜನ ಸಂಖ್ಯಾಕ ನಗರಗಳ ಮೇಲೆ ಬೀಳುವ ಭಾರವನ್ನು ತಪ್ಪಿಸಿ ಅಲ್ಲಿ ವಾಸಿಸುವವರೆಲ್ಲರ ಆರೋಗ್ಯ ಭಾಗ್ಯವನ್ನೂ ಸುಖ ಸೌಕರ್ಯಗಳನ್ನೂ ಹೆಚ್ಚಿಸಬಲ್ಲವು. ಕುರುಕ್ಷೇತ್ರದಂತಹ ವಿಶಾಲವಾದ ಬಿಡಾರದಲ್ಲಿ ವಾಸವಾಗಿರುವ ೨ ಲಕ್ಷದಷ್ಟು ನಿರಾಶ್ರಿತರ ಒಳಹೊರ ಜೀವನವು ಪರಿಶುದ್ಧವಾಗಿ ಮೇಲ್ಪಂಕ್ತಿ ಹಾಕಿಕೊಡಬಲ್ಲುದಾದರೆ, ಬಡ ನಿರಾಶ್ರಿತರೊಡನೆ ಉದ್ಯೋಗಸ್ಥರೂ ಧನಿಕರೂ ಸಮಾನಬುದ್ಧಿಯಿಂದ ನಡೆದುಕೊಂಡು ಗೂಡಾರದ ನೆರಳಲ್ಲಿಯೇ ಆಗಲಿ ಸಂತೃಪ್ತ ಜೀವನ ಸಾಗಿಸಬಂದರೆ ಅದೆಷ್ಟು ಒಳಿತು! ಸರಿಯಾಗಿ ಮುಂಡಿಸಲ್ಪಟ್ಟ ಓಣಿಗಳು ಬೀದಿಗಳು, ಕೆಸರು ಕೊಳೆಗಳ ಸ್ವಚ್ಛತೆ ಮೊದಲುಮಾಡಿ ಎಲ್ಲ ಕಾರ್ಯಗಳಲ್ಲಿಯೂ ತಮ್ಮ ತಮ್ಮೊಳಗೆ ಸ್ವಯಂಪ್ರೇರಿತ ಸಹಕಾರ, ಹಗಲಿನ ಒಂದರೆಗಳಿಗೆಯೂ ವ್ಯರ್ಥವಾಗದಹಾಗೆ ಮೈತುಂಬ ಉಪಯುಕ್ತ ಕೆಲಸ ಇವೆಲ್ಲ ಕೂಡಿದ್ದಾದರೆ ಈ ನಿರಾಶ್ರಿತರು ಯಾರ ಮೇಲೇಕೆ ಭಾರವಾಗುವರು? ಭಾರವಾಗರಿಷ್ಟೇ ಅಲ್ಲ, ಇವರ ಸಾಧುಜೀವನವೂ ಸ್ವಯಂಪ್ರೇರಿತ ಸಹಕಾರವೂ ನಗರವಾಸಿಗಳ ಮನಸೆಳೆದು ನಿರಾಶ್ರಿತರು ಅವರ ಹೊಗಳಿಕೆಗೆ ಪಾತ್ರರಾಗುತ್ತಾರೆ ಮತ್ತು ಪಟ್ಟಣಿಗರು ಇವರನ್ನು ನೋಡಿ ನಾಚಿ ತಾವೂ ಇವರಂತೆ ಇರಲು ಪ್ರಯತ್ನಿಸುತ್ತಾರೆ. ಇವರಲ್ಲಿದ್ದ ಒಳಿತನ್ನೆಲ್ಲ ಅನುಸರಿಸಹತ್ತುತ್ತಾರೆ. ಪರಸ್ಪರ ವೈರ ವೈಷಮ್ಯಗಳೇನಾದರೂ ಇದ್ದರೆ ಇವೆಲ್ಲ ಒಂದು ನಿಮಿಷಾರ್ಧದಲ್ಲಿ ಮಾಯವಾಗಿಬಿಡುತ್ತವೆ. ನಿರಾಶ್ರಿತರು, ಅವರಷ್ಟೇ ಜನರಿರಲಿ, ಕೇಂದ್ರ ಸರಕಾರಕ್ಕಾಗಲೀ ಸ್ಥಾನಿಕ ಸರಕಾರಕ್ಕಾಗಲಿ ಒಂದು ತುತ್ತು ತಿನ್ನುವ ಬಗಟವಾಗಿ ಕಾಡುವದಿಲ್ಲ. ಲಕ್ಷಾನುಲಕ್ಷ ನಿರಾಶ್ರಿತರ ಈ ಬಗೆಯ ಆದರ್ಶ ಜೀವನವು ಉದಾಸೀನ ಜಗತ್ತಿನ ಪ್ರಶಂಸೆಗೆ ನಿಶ್ಚಯವಾಗಿ ಪಾತ್ರವಾಗುವದು.

ಸರಕಾರ ಇಕ್ಕಳದಲ್ಲಿ

ಗಾಂಧೀಯವರು ಕಟ್ಟಕಡೆಗೆ ಎತ್ತಿದ್ದು ಅನ್ನವಸ್ತ್ರಗಳ ವಿನಿಯಂತ್ರಣ ವಿಷಯ.

ಸರಕಾರವು ಅನ್ನವಸ್ತ್ರಗಳ ನಿಯಂತ್ರಣವನ್ನು ಎತ್ತಲು ಹಿಂದೆಮುಂದೆ ನೋಡುತ್ತದೆ. ಯಾಕಂದರೆ ಅನ್ನವಸ್ತ್ರದ ತುಟಾಗ್ರತೆ ದೇಶದಲ್ಲಿ ನಿಜವಾಗಿಯೂ ಇರುವದಾಗಿ ಸರಕಾರದ ನಂಬಿಗೆ. ವಿನಿಯಂತ್ರಣದಿಂದ ಬೆಲೆಗಳು ಮೇರೆದಪ್ಪಿ ಏರಬಹುದೆಂದೂ ಹಾಗೂ ಹೀಗೂ [illegible] ಕೊಂಡು ಕಪ್ಪುಧಂದಾ[illegible]ವನ್ನು ಸಂತೈಸುತ್ತಿರುವ ಬಡವರೇ ಈ ಉಬ್ಬರದಿಂದ ತೊಂದರೆ ಪಡಬೇಕಾಗುವದೆಂದೂ ಸರಕಾರದ ಅಭಿಮತವಾಗಿದೆ. ವರ್ತಕರ ದಲಾಲರ ಮತ್ತು ಒಕ್ಕಲಿಗರ ಪ್ರಾಮಾಣಿಕತೆಯ ಬಗ್ಗೆ ಸರಕಾರಕ್ಕೆ ನಂಬಿಗೆ ಇಲ್ಲ. ಇವರಲ್ಲಿ [illegible] ಅನ್ನ ವಸ್ತ್ರಗಳ ವಿನಿಯಂತ್ರಣಕ್ಕಾಗಿ ಹೊಂಚುಹಾಕಿ ಕುಳಿತಿರುವದಾಗಿ ಸರಕಾರದ ಗ್ರಹಿಕೆ. ಇವರು ಬಡವರನ್ನು ಬಡಿದು ತಮ್ಮ ಬೊಕ್ಕಸವನ್ನು ಹೊಲ್ಲದ ಹಾದಿಯಿಂದ ತುಂಬಿಕೊಳ್ಳಬೇಕೆನ್ನುತ್ತಾರೆಂದೂ ಸರಕಾರ ತಿಳಿದಿದೆ. ಆದ್ದರಿಂದ ಸರಕಾರ ಈ ಎರಡು ಕೆಡುಕಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿದ್ದು ನಿಯಂತ್ರಣವು ಕಡಿಮೆ ಕೆಡುಕೆಂದು ಅದನ್ನೇ ಎತ್ತಿ ಹಿಡಿಯಬೇಕೆನ್ನುತ್ತಾರೆ.

ಆದ್ದರಿಂದ ವರ್ತಕರಿಗೂ ದಲಾಲಿಗರಿಗೂ ಒಕ್ಕಲಿಗರಿಗೂ ನಾನು ಬೇಡುವದಿಷ್ಟೇ. ಸರಕಾರದ ಈ ಸಂದೇಹ ನಿರಾಧಾರವೆಂದು ತೋರಿಸಿಕೊಡಿರಿ; ವಿನಿಯಂತ್ರಣದಿಂದ ವಸ್ತುಗಳ ಬೆಲೆ ಏರುವದಿಲ್ಲವಾಗಿ ಭರವಸೆ ಹುಟ್ಟಿಸಿರಿ; ವಿನಿಯಂತ್ರಣದಿಂದ ಬಡವರು ಈಗಿಗಿಂತ ಸುಖಿಗಳಾಗುತ್ತಾರೆಂಬುದನ್ನು ಮನಗಾಣಿಸಿ ಕೊಡಿರಿ; ಹಾಗೂ ಇದರಿಂದ ಕಳ್ಳಪೇಟೆಯೂ ಲಂಚಗುಳಿತನವೂ ನಿರ್ಮೂಲವಾಗದಿದ್ದರೂ ನಿಷ್ಪ್ರಭವಾಗುವವೆಂಬುದನ್ನು ತೋರಿಸಿಕೊಡಿರಿ.

ಬಿರ್ಲಾಭವನ ಹೊಸದಿಲ್ಲಿ ೨೩-೧೧-೪೭

ಪ್ರಾರ್ಥನೆಯ ಕಾಲಕ್ಕೆ ಮೌನ

ಈ ದಿನದ ಪ್ರಾರ್ಥನೋತ್ತರ ಭಾಷಣದಲ್ಲಿ ಗಾಂಧೀಜಿಯವರು ಸಭಿಕರಿಗೆ ಪ್ರಾರ್ಥನೆಯ ಕಾಲಕ್ಕೆ ಮೌನವನ್ನಾಚರಿಸಬೇಕೆಂದು ಒತ್ತಿ ಹೇಳಿದರು. ಪ್ರಾರ್ಥನೆಯ ಕಾಲಕ್ಕೆ ಮೌನವನ್ನಾಚರಿಸುವದೇನೊ ವಾಡಿಕೆಯಾಗಿದ್ದರೂ ಹೆಣ್ಣುಮಕ್ಕಳು ಗುಣುಗುಣಿಸಹತ್ತಿದುದರಿಂದ ಅದಕ್ಕೆ ಭಂಗಬಂದಿತು. ಈ ದಿನ ಸಾಯಂಕಾಲವಂತೂ ಇಂಥ ಹೆಣ್ಣುಮಕ್ಕಳ ಸಂಖ್ಯೆ ಬಹಳ ಹೆಚ್ಚಿಗಿದ್ದಿತು. ಅವರು ಸಭಿಕರು ಮೌನದಿಂದ ಇರಬೇಕೆಂದು ಹೇಳಿದ ಕೂಡಲೆ ಎಲ್ಲೆಲ್ಲಿಯೂ ನಿಃಶಬ್ದತೆಯುಂಟಾಯಿತು.

ಮಿತಿಯನ್ನು ಮೀರುವದು

ತಮ್ಮ ಭಾಷಣವು ೨೦ ನಿಮಿಷಕ್ಕಿಂತ ಕಕ್ಕವಾದರೆ ಹದಿನೈದು ನಿಮಿಷಕ್ಕಿಂತ ಹೆಚ್ಚು ಹೊತ್ತಿನ ವರೆಗೆ ಆಗಬಾರದೆಂಬ ನಿಯಮವನ್ನು ಆಗಾಗ ಮುರಿಯುತ್ತಿರುವುದಕ್ಕಾಗಿ ಅವರು ಆಕಾಶವಾಣಿಯ ಅಧಿಕಾರಿಗಳ ಕ್ಷಮೆಕೋರಿದರು. ತಮ್ಮ ಎದುರಿಗೆ ಪ್ರತ್ಯಕ್ಷವಾಗಿ ಸಮ್ಮಿಲಿತರಾದ ಸಭಿಕರ ಹೃದಯವನ್ನು ಮುಟ್ಟುವುದೇ ತಮ್ಮ ಮುಖ್ಯ ಉದ್ದೇಶವಾಗಿದ್ದರಿಂದ ಯಾವಾಗಲೂ ಆ ನಿಯಮವನ್ನು ಪಾಲಿಸುವದು ತಮಗೆ ಶಕ್ಯವಾಗುವುದಿಲ್ಲ. ಅನಂತರ ಆಕಾಶವಾಣಿ ಬಂದಿತು. ಸುದೀರ್ಘ ಭಾಷಣಗಳನ್ನು ಆಕಾಶವಾಣಿಯಲ್ಲಿ ಹಿಡಿದುಕೊಳ್ಳುವ ವ್ಯವಸ್ಥೆ ಇರುವದೊ ಹೇಗೆಂಬುದು ನನಗೆ ಗೊತ್ತಿಲ್ಲ. ಉದ್ದೇಶವಾಗಿ ಮಾತಾಡುವ ಚಟ ನನಗಿಲ್ಲ ಅಥವಾ ನನ್ನ ಧ್ವನಿಯನ್ನು ನಾನೇ ಕೇಳುವ ಉದ್ದೇಶವೂ ನನಗಿಲ್ಲ.

ಹಿಂಸೆ ನ್ಯಾಯವಲ್ಲ

ಸಭಿಕರೊಬ್ಬರು ಬರೆದು ಕಳಿಸಿದ ಪ್ರಶ್ನೆಯತ್ತ ಗಾಂಧೀಜಿ ಅನಂತರ ಹೊರಳಿದರು. ಯಾರ ಹಕ್ಕು ಬಾಧ್ಯತೆಗಳು ಗಂಡಾಂತರದಲ್ಲಿರುವುವೊ ಅಂಥವರು ಹಿಂಸಾತ್ಮಕ ರೀತಿಯಿಂದ ಅವುಗಳ ರಕ್ಷಣೆ ಮಾಡಿಕೊಳ್ಳಬಲ್ಲರೊ ಎಂದು ಆ ಪ್ರಶ್ನೆಯಲ್ಲಿ ಕೇಳಲಾಗಿದ್ದಿತು. ನಿಶ್ಚಯವಾಗಿ ಹಿಂಸೆಯಿಂದ ಯಾರ ಹಕ್ಕು ರಕ್ಷಿತವಾಗುವದಿಲ್ಲ. ಯಾವದೇ ಹಿತವೂ ರಕ್ಷಿತವಾಗದೆಂಬುದು ಅವರ ಉತ್ತರವಾಗಿದ್ದಿತು. ಯೋಗ್ಯರೀತಿಯಿಂದ ಕರ್ತವ್ಯ ಪಾಲನೆ ಮಾಡಿದನಂತರ ದೊರೆತ ಹಕ್ಕು ಅದಾಗಿದ್ದರೆ ಅದನ್ನಾರೂ ಆಕ್ರಮಿಸಲಾರರು. ತಾನು ಕೈಕೊಂಡ ಕರ್ತವ್ಯವನ್ನು ಪೂರ್ಣವಾಗಿ ಮಾಡಿದ ನಂತರ ಅದರ ಪ್ರತಿಫಲ ಅವನಿಗೆ ಸಿಕ್ಕಬಲ್ಲದು. ಕರ್ತವ್ಯ ಮಾಡದೆ ಪ್ರತಿಫಲವನ್ನು ತೆಗೆದುಕೊಂಡದ್ದಾದರೆ ಅದು ಕಳವು ಎನಿಸುವದು. ಕರ್ತವ್ಯ ಮಾಡಿದ ಬಳಿಕವೆ ಹಕ್ಕು ಉಂಟಾಗುವದಾದ್ದರಿಂದ, ಆ ಕರ್ತವ್ಯವನ್ನು ಉಲ್ಲೇಖಿಸದೆ ಯಾವ ಹಕ್ಕು ಬಾಧ್ಯತೆಗಳ ಬಗ್ಗೆಯೂ ತಾವು ಸದಾಕಾಲ ಪ್ರತಿಪಾದಿಸುವದಿಲ್ಲ ಎಂದು ಅವರು ನುಡಿದರು.

ಹರಿಜನರ ಛಲನೆ

ರೋಹಟಕ ಮತ್ತು ಇತರ ಸ್ಥಳಗಳಲ್ಲಿ ಜಾಟರು ಹರಿಜನರ ಮೇಲೆ ದಾಳಿ ನಡೆಸಿದರೆಂಬ ಸುದ್ದಿಯತ್ತ ಅವರು ಹೊರಳಿದರು. ಇದೇನು ಹೊಸಮಾತಲ್ಲ. ಹರಿಜನರ ಸ್ವಾತಂತ್ರ್ಯದ ಮೇಲೆ ಗದಾಪ್ರಹಾರ ಮಾಡುವದು ಬ್ರಿಟಿಶರಾಳಿಕೆಯಲ್ಲಿಯೂ ಪ್ರಬಲದಲ್ಲಿ ಇದ್ದಿತು. ಆದರೆ ಹೊಸದಾಗಿ ಸ್ವಾತಂತ್ರ್ಯ ಸಿಕ್ಕ ಬಳಿಕವೂ ಅದು ತಿಳಿಯದೆ ಹೆಚ್ಚು ಸ್ಫುಟವಾಗಹತ್ತಿದ್ದು ಹೊಸಮಾತು. ಯಾವದೇ ಜಾತಿಸಂಗಡಗಳಿಗೆ ಸೇರಿರಲಿ ಇಲ್ಲವೆ ಸಮಾಜದಲ್ಲಿ ಯಾವದೇ ವರ್ಗದವರಿರಲಿ ಹಿಂದು ಮಾತೆಯ ಸುಪುತ್ರರೆಲ್ಲರಿಗೂ ಈ ಸ್ವಾತಂತ್ರ್ಯ ಸಿಕ್ಕಿರುವದಿಲ್ಲವೆ? ಮೊನ್ನಿನ ವರೆಗೆ ಇದ್ದಂತೆ ಹರಿಜನರು ಈಗಲು ಗುಲಾಮರೆ? ಒಂದು ತಪ್ಪು ಮತ್ತೊಂದು ತಪ್ಪಿಗೆ ಅವಕಾಶವನ್ನುಂಟುಮಾಡುತ್ತಿದೆ ಎಂದು ನನ್ನ ಅಭಿಪ್ರಾಯ. ಪಾಕಿಸ್ತಾನದಲ್ಲಿ ಏನೇ ನಡೆಯುತ್ತಿದ್ದರೂ ನಮ್ಮ ಮುಸಲ್ಮಾನ ಬಂಧುಗಳನ್ನು ಕೆಟ್ಟರೀತಿಯಿಂದ ನಡೆಸಿಕೊಳ್ಳುವದು ಕ್ರಿಶ್ಚನ್ನರನ್ನು ಹಾಗೆಯೆ ನಡೆಸಿಕೊಳ್ಳುವದಕ್ಕೆ ಅವಕಾಶ ಕಲ್ಪಿಸಿಕೊಟ್ಟಿತು. ಹರಿಜನರ ಬಗೆ ನಮ್ಮ ನಡವಳಿಕೆಯು ಇದೇಕಾರಣದಿಂದ ಬಂದದ್ದು. ಅಸ್ಪೃಶ್ಯರೆಂದು ತಪ್ಪಾಗಿ ಕರೆದು ಹಿಂದುಗಳು ಅವರನ್ನು ಕೆಟ್ಟರೀತಿಯಿಂದ ನಡೆಸಿಕೊಳ್ಳುತ್ತಿರುವದರಿಂದ ಆಗುವ ಹಾನಿಯನ್ನು ಹೋಗಲಾಡಿಸುವದಕ್ಕಾಗಿ ಹರಿಜನ ಸೇವಕ ಸಂಘವು ಸ್ಥಾಪಿತವಾಗಿದೆ. ಕಳೆದ ಅಗಸ್ಟ ೧೫ ಕ್ಕೆ ಹಿಂದುಸ್ತಾನದಲ್ಲಿ ನವಯುಗಾಂತರ ಪ್ರಾರಂಭವಾದುದರ ಪೂರ್ಣರಹಸ್ಯವನ್ನು ನಾವು ತಿಳಿದುಕೊಂಡದ್ದಾದರೆ ಅದರ ಕಾವು ದೇಶದಲ್ಲಿಯ ಅತ್ಯಂತ ನಿಕೃಷ್ಟ ಮನುಷ್ಯನಿಗೂ ತಾಕದೆ ಇರುತ್ತಿರಲಿಲ್ಲ. ಹಾಗಾಗದಿದ್ದರೆ ಇಂದು [illegible] ನಾವು ನೋಡುತ್ತಿರುವ ದುರಂತ ದೃಶ್ಯಗಳನ್ನು ನೋಡುವ ದುರ್ಭಾಗ್ಯ ಒದಗುತ್ತಿರಲಿಲ್ಲ. ಪ್ರತಿಯೊಬ್ಬನು ತನ್ನ ಸ್ವಂತ ಪ್ರಗತಿಗಾಗಿಯೇ ಪ್ರಯತ್ನಿಸುವನು. ಹಿಂದುಸ್ತಾನದ ಪ್ರಗತಿಗಾಗಿ ಯಾರೂ ಪ್ರಯತ್ನಿಸುವದಿಲ್ಲ. ಹಿರಿದು ತೋರುತ್ತದೆ.

ತಾರತಮ್ಯ ದುಸ್ತರ

ರಾಷ್ಟ್ರೀಯತೆ ಮತ್ತು ಧರ್ಮ ಇವುಗಳಲ್ಲಿ ರಾಷ್ಟ್ರೀಯತೆಯು ಹೆಚ್ಚಿನದೆಂದು ನನ್ನ ಅಭಿಪ್ರಾಯವೇ ಹೇಗೆ ಎಂಬುದಾಗಿ ಓರ್ವ ಮಿತ್ರರು ಕೇಳಿದ್ದಾರೆ. ಇವೆರಡೂ ಸಾಮ್ಯವಿರಹಿತವಾದವುಗಳೆಂದೂ ಸಾಮ್ಯವಿಲ್ಲದಲ್ಲಿ ತರತಮ ಭಾವ ಅಸಾಧ್ಯವೆಂದೂ ನಾನು ಹೇಳಿದೆ. ಒಂದರೊಡನೆ ಹೋಲಿಸಿದಾಗ ಒಂದೊಂದೂ ತನ್ನ ತನ್ನ ಸ್ಥಾನದಲ್ಲಿ [illegible]ನದೇ. ತನ್ನ ರಾಷ್ಟ್ರೀಯತೆಯಷ್ಟೇ ಧರ್ಮಕ್ಕೂ ಬೆಲೆಗೊಡುವವನು ಒಂದನ್ನು ಒಂದಕ್ಕೋಸುಗ ಬಿಟ್ಟುಕೊಡಲಾರ. ಅವೆರಡೂ ಅವನಿಗೆ ಸಮಾನ ಪ್ರೇಮದ ವಸ್ತುಗಳೇ. ದೇವರಿಗೆ ಸಲ್ಲತಕ್ಕದನ್ನು ದೇವರಿಗೂ ಸೀಝರನಿಗೆ ಸಲ್ಲತಕ್ಕದನ್ನು ಅವನಿಗೂ ಅವನು ಸಲ್ಲಿಸುತ್ತಾನೆ. ಆದರೆ ಸೀಝರನು ತನ್ನ ಮಿತಿಮೇರೆಗಳನ್ನು ಮರೆತು ಅವನ್ನು ಉಲ್ಲಂಘಿಸಹೋದರೆ ದೇವಾನುವರ್ತಿಯಾದವನು ತನ್ನ ಸೇವೆಯನ್ನೂ ನಿಷ್ಠೆಯನ್ನೂ ಇನ್ನೊಬ್ಬ ಸೀಝರನಿಗೆ ಅರ್ಪಿಸಹೋಗುವದಿಲ್ಲ. ಬಲಾತ್ಕಾರವನ್ನು ಹೇಗೆ ವಿರೋಧಿಸಬೇಕೆಂಬುದೂ ಅವನಿಗೆ ಗೊತ್ತು. ಈ ಬಗೆಯ ಸಂಕಟದ ಪುನರಾವರ್ತನವೇ ಸತ್ಯಾಗ್ರಹಕ್ಕೆ ಜನ್ಮಗೊಟ್ಟಿದೆ.

ಮನೆತನದ ಒಂದು ಸಾದಾ ಸಾಮ್ಯವನ್ನೇ ತೆಗೆದುಕೊಳ್ಳುವ. ನನಗೆ ತಾಯಿ, ಹೆಂಡತಿ ಮತ್ತು ಓರ್ವ ಮಗಳು ಇರುವಳೆಂದು ತಿಳಿಯುವ. ಈ ಮೂವರ ಬಗ್ಗೆಯೂ ಅವರವರ ಮಟ್ಟಿಗೆ ನನಗೆ ಸಮಾನ ಪ್ರೇಮವಿರುವದು ಸಹಜ. ತನ್ನ ಹೆಂಡತಿಗಾಗಿ ತಾಯಿಯನ್ನೂ ಮಗಳನ್ನೂ ಪರಿತ್ಯಾಗ ಮಾಡುವದೆಂದು ಹೇಳಿದರೆ ಅದು ಗುಡ್ಡದಂತಹ ಪದಗೆಟ್ಟ ತಪ್ಪೇ ಸರಿ. ಇದಕ್ಕೆ ಪ್ರತಿಯಾಗಿ ವರ್ತಿಸುವದೂ ಮೂರ್ಖತನವೇ. ಈ ಮೂವರಲ್ಲಿ ಯಾರಾದರೂ ತಮ್ಮ ಮಿತಿಮೀರಿ ಉಲ್ಲಂಘಿಸಿ ನಡೆದುವಾದರೆ ಈ ಮೂರೂ ಶಕ್ತಿಗಳ ತೂಕವನ್ನು ಸರಿಪಡಿಸಲು ಆಗ ಸತ್ಯಾಗ್ರಹ ತತ್ವವು ನೆರವಿಗೆ ಬರುವದೆಂದು ಹೇಳಬಹುದು.

ಹೊಸದಿಲ್ಲಿ
೨೪-೧೧-೧೯೪೭ ಮೋ. ಕ. ಗಾಂಧಿ

ನಿಜಾಮರ ಕೊಲೆಯ ಪ್ರಯತ್ನ !

ಸುದೈವದಿಂದ ಪಾರಾದರು

ಬಾಂಬು ಒಗೆದವನ ಕೈಸೆರೆ

ತಾರೀಕು ೪ ರಂದು ನಿಜಾಮ ಶ್ರೀಪ್ರಭುಗಳು ಸಾಯಂಕಾಲ ಮೋಟಾರಿನಲ್ಲಿ ಕುಳಿತು ದಿನದಂತೆ ನಗರ ಸಂಚಾರಕ್ಕೆ ಹೋಗುವಾಗ ಒಂದು ಬಾಂಬು ಅವರ ಮೋಟಾರಿನ ಮೇಲೆ ಒಗೆಯಲ್ಪಟ್ಟಿತು.

ನಿಜಾಮರು ಅರಮನೆಯಿಂದ ೬-೩೦ ಗಂಟೆಗೆ ಹೊರಟು “ ಬೆಂಗಕೋಠಿ ” ಬೀದಿಯಲ್ಲಿ ಕೆಲವು ಅಂತರ ಹೋಗಿರಬಹುದು. ಆಗ ರಸ್ತೆಯಲ್ಲಿ ನಿಂತ ಓರ್ವನು ಇವರ ಮೋಟಾರಿನ ಮೇಲೆ ಬಾಂಬ ಒಗೆದನು. ಆದರೆ ಆ ಬಾಂಬು ಅವರಿಗೆ ತಾಕದೆ ಕೆಳಗೆ ರಸ್ತೆಯ ಮೇಲೆ ಬಿದ್ದು ಸ್ಫೋಟವಾಯಿತು. ಅದರಿಂದ ದೊಡ್ಡ ಸಪ್ಪಳವಾಗಿ ಚೂರುಗಳು ಪಕ್ಕದಲ್ಲಿದ್ದ ಮನೆಗಳಿಗೆ ಬಡಿದವು. ನಿಜಾಮರು ಮಾತ್ರ ಸುದೈವದಿಂದ ಗಾಯಗಳೇನೂ ಆಗದೆ ಪಾರಾದರು.

ರಸ್ತೆಯಲ್ಲಿ ನಿಂತ ಸುಮಾರು ೫ ಜನರಿಗೆ ಈ ಬಾಂಬಿನ ಚೂರುಗಳು ಬಡಿದು ಗಾಯಗಳಾಗಿವೆ. ಬಾಂಬು ಒಗೆದವನನ್ನು ರಸ್ತೆಯ ಮೇಲೆ [illegible] ನಿಂತಿದ್ದ ಜನರು ಕೂಡಲೇ ಹಿಡಿದರು. ಅವನ ಹತ್ತಿರ ಇನ್ನೂ ಎರಡು ಬಾಂಬುಗಳಿದ್ದವು. ಅರಬರು ಈ ಬಾಂಬು ಒಗೆದ ಮನುಷ್ಯನನ್ನು ಹಿಡಿದು ತಮ್ಮ ಕೈಗತ್ತಿಯನ್ನು ಹಿರಿದು ಅವನನ್ನು ಕೊಲ್ಲಲು ಕೈ ಎತ್ತಿದಾಗ ನಿಜಾಮರು ತಮ್ಮ ಮೋಟಾರು ನಿಲ್ಲಿಸಿ ಅರಬರಿಗೆ ಅವನನ್ನು ಕೊಲ್ಲಕೂಡದೆಂದೂ ಪೋಲೀಸರ ವಶಕ್ಕೆ ಒಪ್ಪಿಸಬೇಕೆಂದೂ ಆಜ್ಞೆ ಮಾಡಿದರು. ಕೂಡಲೇ ಪೋಲೀಸರು ಬಂದು ಅವನನ್ನು ತಮ್ಮ ವಶಕ್ಕೆ ತಕ್ಕೊಂಡರು.

ನಿಜಾಮರ ಕೊಲೆಯ ಪ್ರಯತ್ನ ನಡೆದ ಬಗ್ಗೆ ಹೈದರಾಬಾದ ಸರಕಾರವು ಹೊರಡಿಸಿದ ಪ್ರಕಟನೆಯಲ್ಲಿ ನಿಜಾಮರ ಮೇಲೆ ಒಗೆದ ಬಾಂಬು ದೇಶೀ ಬಾಂಬು ಇರದೆ ಅದು ಉತ್ತಮ ಪ್ರತಿಯ ಕೈಬಾಂಬು ಇರುವದಾಗಿ ತಿಳಿದು ಬಂದಿದೆಯೆಂದೂ ಅದನ್ನು ಒಗೆದವನನ್ನು ಪೋಲೀಸರು ವಿಚಾರಣೆ ಮಾಡಲು ತಾನು ಹೈದರಾಬಾದ ಸಂಸ್ಥಾನದ ಪ್ರಜೆಯಲ್ಲವೆಂದೂ ಹೊರಗಿನಿಂದ ಬಂದವನೆಂದೂ ತನ್ನ ಹೆಸರು ನಾರಾಯಣ [illegible] ಎಂದೂ ಹೇಳಿದ್ದಾನೆ. ಈ ಬಾಂಬಿನ ಸ್ಫೋಟದಿಂದ ಒಬ್ಬ ಮನುಷ್ಯ ಹಾಗೂ ಸ್ತ್ರೀ ಹೀಗೆ ಇಬ್ಬರಿಗೆ [illegible] ಗಾಯಗಳಾಗಿವೆ.

ವಿವಿಧ ಪ್ರಪಂಚ

ಜೀವಶೋಧ

[illegible]ಜ್ಞಾನಿಗಳು [illegible] ಕಂಡು [illegible] ರು, ಅದನ್ನು ಮಾಡಿದರು., ಇದನ್ನು ಸೋಸಿ [illegible] ರು ಎಂದು ಏನೇನೋ ಹೇಳಿದರೂ ಅವರಿಗೆ ಜೀವ ವೆಂದರೇನೆಂದು ತಿಳಿಯಲಾಗಲಿಲ್ಲ; ಅದನ್ನು [illegible]ಮ್ಮ ಪ್ರಯೋಗ ಶಾಲೆಯಲ್ಲಿ ತಯಾರಿಸಲು ಸಾಧ್ಯವಾಗಲಿಲ್ಲ ಎಂದು ನಮ್ಮ ಸನಾತನಿಗಳು [illegible]ಜ್ಞಾನಿಗಳನ್ನು ತಿರಸ್ಕರಿಸುತ್ತಾರೆ, [illegible] [illegible] ಕೊಡಬೇಕು.

ಜೀವದ ಮೂಲ ರೂಪವು ದೇಹದಲ್ಲಿಯ 'ಜೀವಕಣ' ದ ರೂಪದಲ್ಲಿರುತ್ತದೆ. ಅದರ ನಡುವೆ ಒಂದು ಬೀಜ; ಆ ಬೀಜದ ಸುತ್ತಲೂ ಚಿಕ್ಕ ಚಿಕ್ಕ ಅಣುಗಳು ಸುತ್ತುತ್ತಿರುತ್ತವೆ. ಅದೊಂದು ಚಿಕ್ಕ ಸೂರ್ಯ ಮಂಡಲದಂತೆ ಕೆಲಸ ಮಾಡುತ್ತದೆ. ಅದರಲ್ಲಿ ಗಂಡು ಹೆಣ್ಣಿನ ಭೇದ ವಿಲ್ಲ. ಒಂದು ಒಡೆದು ಎರಡಾಗುತ್ತದೆ, ಎರಡು ಹೋಗಿ ನಾಲ್ಕು, ನೂರು, ನಾಲ್ಕು ಸಾವಿರ— ಒಟ್ಟು ಒಂದು ಇಡೀ ಅರಡಿಎತ್ತರದ ಶರೀರ ಕೊನೆಗೆ!

ಆಹಾರ ಜೀರ್ಣಿಸಿ ರಕ್ತಗತವಾಗಿ ವೀರ್ಯವಾಗುವುದು. ಅದನ್ನು ಪ್ರಯೋಗ ಶಾಲೆಯಲ್ಲಿ ಎಂದೋ ತಯಾರಿಸಲಾಗಿದೆ. ಆ ವೀರ್ಯ ಅಥವಾ ಪ್ರಾಣರಸಕ್ಕೂ, ಜೀವಂತ ಜೀವಕಣಕ್ಕೂ ನಡುವಣ 'ವೈರಸ್' ಎಂಬ ಪದಾರ್ಥವನ್ನೊಂದು ರಾಸಾಯನಿಕರು ತಯಾರಿಸಿದ್ದಾರೆ.

ಮೂಲಭೂತ ಜೀವಕಣದಲ್ಲಿ ಲಿಂಗ ಭೇದ ವಿಲ್ಲದೆ ವೃದ್ಧಿಯಾದರೂ, ವೃದ್ಧಿಯಾಗುತ್ತ ಆಗುತ್ತ ಅವು ತಮ್ಮ ಮೂಲಭೂತ ಪ್ರವೃತ್ತಿಯಿಂದ ಹೆಣ್ಣು ಇಲ್ಲವೆ ಗಂಡು ಶರೀರವಾಗಿ ಪರಿಣಮಿಸುವುವು.

ಮೇಲೆ ಹೇಳಿದ 'ವೈರಸ್ಸ'ನ್ನು ಜೀವಂತಕಣದಲ್ಲಿಟ್ಟರೆ ಅದು ಸಮರಸ ಹೊಂದಿ ಬೆಳೆಯ ತೊಡಗುವದು. ಅದು ಸಮರಸ ಹೊಂದವಾಗ ಅದರಿಂದ ಘಲರೋಗ, ಮೈಲಿಗೆ, ವಿಷಮಜ್ವರ ಮುಂತಾದ ಕಾಹಿಲೆಗಳುಂಟಾಗುತ್ತವೆ. ಇದರೊಡನೆ 'ಜೆನಿಸ್' ಎಂಬ ಇದಕ್ಕೆ ಸರಿಸಮವಾದ ಮತ್ತೊಂದು ವಿಧದ ಅಣು ಜೀವ ಕಣದಲ್ಲಿರುತ್ತದೆ. ನ್ಯೂಮನ್ ಎಂಬ ವಿಜ್ಞಾನಿಯ ಪ್ರಕಾರ ಮೊಟ್ಟ ಮೊದಲು ಈ ಸೃಷ್ಟಿಯಲ್ಲಿ ಅವತರಿಸಿದ ಜೀವ ಪ್ರಮಾಣವೆಂದರೆ ಈ 'ಜೆನಿಸ್ಸೇ' ಎಂದು. ನಮ್ಮ ಆಹಾರದಲ್ಲಿರುವ 'ಪ್ರೋಟೀನ್' ಎಂಬ ಪದಾರ್ಥವೇ ಮೇಲಿನ ಅಣುಗಳಿಗೆ ಆಧಾರವಾಗಿರುವುದು. ಉಸಿರೆಂಬುದೊಂದು ರಾಸಾಯನಿಕ ಉಪಾಧಿ ಬಲ್ಲದಗಿದ ಗಾಳಿಯೆಂದು ಇಂದು ವಿಜ್ಞಾನಿಗಳ ಮತ. ಇದಕ್ಕೆ ಅನುಕೂಲವಾದ ಸನ್ನಿವೇಶಗಳನ್ನು ರಾಸಾಯನಿಕರು ಆಗಲೇ ಕಂಡು ಹಿಡಿಯ ತೊಡಗಿದ್ದಾರೆ.

ಕೃತಕವಾಗಿ ರಬ್ಬರ್, ಸಕ್ಕರೆ, ಬೆಣ್ಣೆ ಇತ್ಯಾದ್ಯನೇಕ ಪದಾರ್ಥಗಳನ್ನು ತಯಾರಿಸಲು ಶಕ್ತರಾದ ವಿಜ್ಞಾನಿಗಳು ಜೀವವನ್ನು ತಯಾರಿಸದಿರಲಾರರು. ಆದಾದರೆ ದೇವರಿಗೊಂದು ಅಪ್ಪಾನ ವಿತ್ತಂತೆಯೇ ಸರಿ. ಆದರಿಂದ ಮಾನವನ ಆ[illegible] [illegible]ರ್ಯ, ಆರೋಗ್ಯ ಮುಂತಾದವುಗಳ ಬಗೆ [illegible]ಶೇಷಜ್ಞಾನವುಂಟಾಗಿ ಮನುಷ್ಯನು ನಾಗರಿಕತೆಯ [illegible] ಅತ್ಯುಚ್ಚ ಅಂತಃಪನ್ನೇರಬಹುದು. "ವಿಜ್ಞಾನಂ ಬ್ರಹ್ಮ" ಎಂಬುದರ ಅರ್ಥ ಇದೇ ಇರಬಹುದೇ?

ಮನೋರೋಗ

ಮನುಷ್ಯನ ಮನಸ್ಸು ಪರಮಾಣುವಿನಷ್ಟಿದೆಯೆಂದು ತರ್ಕಶಾಸ್ತ್ರದಲ್ಲಿ ಹೇಳಲಾಗಿದೆ. ಆದರೆ ಈ ಸಣ್ಣದಂಥ ವಸ್ತುವಿನ ಕಾರ್ಯಪ್ರಪಂಚದ ವಿಸ್ತಾರ ಜಗತ್ತು ಅಳತೆಗೆ ಮೀರಿದ್ದು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು!

ಮನಸ್ಸಿಗೆ ಹಿಡಿದ ಸ್ಥೂಲರೋಗವೆಂದರೆ ಮಿದುಳು ಅಸ್ತವ್ಯಸ್ತವಾಗುವುದು. ಇದಕ್ಕೆ ಸಾಮಾನ್ಯ ವೈದ್ಯ ಸಹಾಯ ಅಗತ್ಯ. ಹಾಗಲ್ಲದೆ ಅದಕ್ಕೆ ಹಿಡಿವ ನಿತ್ಯರೋಗವೆಂದರೆ ರಾಗದ್ವೇಷಗಳ ಉದ್ರೇಕದಿಂದುಂಟಾಗುವ ಚಿಂತೆ. ಇದಕ್ಕೆ ಸಾಮಾನ್ಯ ವೈದ್ಯನ ಮದ್ದು ಸಾಲದು; ಭವರೋಗ ಭೇಷಜನೆನಿಸಿದ ಮನಃಶಾಸ್ತ್ರಿಯ ಪ್ರಯೋಗವೇ ಬೇಕು. ಇದನ್ನರಿತೇ Mender of Bad Souls ಕೆಟ್ಟ ಆತ್ಮಗಳನ್ನು ಸುಧಾರಿಸುವ ಪರಿಣತ ಡಾ. ಏ. ಈ. ಬೆನೆಟ್ಟರು, ಬೆಲೆಯ ಸರಕು, ಮುಷ್ಕರ, ಅಲ್ಪಸಂಖ್ಯಾತರಿಗೆ ಕಾಟ ಕೊಡುವುದು, ಕೊಲೆ, ಚಿಕ್ಕ ವಯಸ್ಸಿನಲ್ಲೇ ಕುಡುಕರಾಗುವದು— ಇವೇ ಮೊದಲಾದ ಮನೋರೋಗಗಳು ರಾಜಕೀಯ ಹುತ್ತು ಸಾಮಾಜಿಕ ಸಮಸ್ಯೆಗಳಷ್ಟೇ ಅಲ್ಲ, ವೈದ್ಯಕೀಯ ಸಮಸ್ಯೆಗಳೂ ಹೌದು ಎಂದು ಹೇಳುತ್ತಾರೆ. ಸದ್ಯ ರುಬಿನುಷದೇಶದಲ್ಲಿದ್ದ ರಿಂದಲೇ ಮಿತ್ರ ರಾಷ್ಟ್ರಗಳು ಕಳೆದ ಮಹಾಯುದ್ಧದಲ್ಲಿ ಜರ್ಮನಿ [illegible] ಮಾಡಿದನೆಂದು [illegible] ಮಾಡಲಾರದ್ದ ನೈಪಿ [illegible] ಅವರ ಮತ.

ಫ್ರಾನ್ಸಿನ "ಲೆಸ್ ಟೆಂಪ್ಸ್ ಮಾಡರ್ನ್ಸ್" ಎಂಬ ಪತ್ರಿಕೆಯ ಪ್ರಕಾರ ಫ್ರೆಂಚ ತರುಣರಿಂದು ಪ್ರಾಪ್ತ ಸಂದರ್ಭದಲ್ಲಿ ಯುಕ್ತವಾಗಿ ನಡೆದುಕೊಳ್ಳಲಾರದ, ಉದ್ರೇಕ ಭಾವನೆಯ, ಆತುರದ, ಗಲಿಬಿಲಿಗೆ ಕಿವಿ ನೆಟ್ಟಿಗೆ ಮಾಡುವ, ಮುರಿವಿನ, ಅಶಾಂತವಾದ, ಭಯ ಆತ್ಮವಿಶ್ವಾಸ ಶೂನ್ಯತೆಗಳ ಮತ್ತು ಸಾಮೂಹಿಕ ಆತ್ಮಾಧಮಭಾವದ ಅಳಾಗಿರುವುದು ಕಂಡು ಬರುವುದಂತೆ. ಇದನ್ನು ಗಮನಿಸಿದರೆ ಮನಃಶಾಸ್ತ್ರಪ್ರಯೋಗಗಳು ಇಂದಿನ ಸಾಮಾಜಿಕರಿಗೆ ಎಷ್ಟು ಅಗತ್ಯವೆಂಬುದು ಗೊತ್ತಾಗುತ್ತದೆ. ಈ ಕಾರಣದಿಂದ ಸರಕಾರಗಳು ಮನಃಶಾಸ್ತ್ರಜ್ಞರನ್ನು ಸಲಹೆ ಕೊಡಲು ಇಟ್ಟುಕೊಳ್ಳಬೇಕು, ಅಂತರ್ರಾಷ್ಟ್ರೀಯ ಮಾನಸಿಕ ಆರೋಗ್ಯ ಪದ್ಧತಿಯನ್ನು ಜಾರಿಗೆ ತರಬೇಕು. ವೈಜ್ಞಾನಿಕವಾಗಿ ಸಾಮಾಜಿಕ ನಡೆಯನ್ನು ಪರೀಕ್ಷಿಸುವುದು ಮತ್ತು ರಾಜಕೀಯ ರೂಢಿಗಳಿಗೆ ಮನಃಶಾಸ್ತ್ರದ ಜ್ಞಾನವನ್ನು ಬಳಸುವುದು— ಈ ಎಲ್ಲವನ್ನು ನಮ್ಮ ಸರಕಾರಗಳು ವಿಶೇಷ ಕಾಳಜಿಯಿಂದ ಆಚರಣೆಗೆ ತಂದರೆ ಜಗತ್ತಿನ ಶಾಂತಿಯ ಪೀಠಕ್ಕೆ ಅಪ್ಪಬಂಧ ಮಾಡಿಸಿದಂತಾಗುತ್ತದೆಯೆನ್ನಬಹುದಲ್ಲವೆ?

ವಧೂ ಶಾಲೆಗಳು

ಹುಟ್ಟಿದ ಹುಡುಗಿಯನ್ನು ಯಾವನಾದರೊಬ್ಬನ ಕೊರಳಿಗೆ ಕಟ್ಟಿದರೆ ಅವಳು "ಹೆಂಡತಿ" ಯಾಗುವಳೆಂದು ನಮ್ಮಲ್ಲಿ ಹಲವರು ತಿಳಿದುಕೊಂಡಂತೆ ತೋರುತ್ತದೆ ಒಂದು ವೇಳೆ ಕೇಳಿದರೆ ಹಾಗೆ ಹೇಳದಿದ್ದರೂ ಕಾರ್ಯದಲ್ಲಿ ಹಾಗೆ ನಡೆದುಕೊಂಡಿರುವುದಕ್ಕೆ ಎಲ್ಲೆಂದರಲ್ಲಿ ಉದಾಹರಣೆಗಳು ಸಿಕ್ಕುತ್ತವೆ.

ಅಮೇರಿಕದಲ್ಲಿ ಕ್ವಿಬೆಕ್ ಎಂಬ ಪಟ್ಟಣವಿದೆ. ಅಲ್ಲಿ "ಕುಟುಂಬ ಜೀವನದ ಶಾಲೆಗಳು" ಎಂಬವುಗಳನ್ನು ತೆರೆಯಲಾಗಿದೆ. ಇದನ್ನು ಕೇಳಿ ನಮ್ಮ ವೃದ್ಧರು ಹಾಸ್ಯಮಾಡಬಹುದು. "ಏನಯ್ಯಾ, ಶಾಲೆಗೆ ಹೋಗಿ ಕಲಿಯುವುದಂಥದು ಅದರಲ್ಲೇನಿದೆ; ಮನೆಯಲ್ಲೇ ಕೆಲಸ ಮಾಡುತ್ತ ಬಿದ್ದಿದ್ದರೆ ತಿಳಿಯುವುದಿಲ್ಲವೇ?" ಎಂದು. ಈ ಭಾವನೆಯಿಂದಲೇ ಹಿಂದುಸ್ತಾನದ ಭಾವೀ ಪ್ರಜೆಗಳಿಂದು ತಮ್ಮ ಮಾನಸಿಕ ಮತ್ತು ದೈಹಿಕ ಬೆಳವಣಿಗೆಯಲ್ಲಿ ಹಿಂದುಳಿಯುವಂತಾಗಿರುವುದು.

ಒಂದು ಎಂಜಿನಿಯರ್ ಶಾಲೆಯಲ್ಲಿ ಕೆಲಸ ಮಾಡಬೇಕಾದರೆ ಆ ವಿಷಯದ ಜ್ಞಾನವನ್ನು ಅಂತಹ ವಿಶಿಷ್ಟ ಶಾಲೆಯಲ್ಲಿ ಕಲಿತುಬಂದಿರಬೇಕಲ್ಲವೆ? ಡಾಕ್ಟರ್ ಆಗತಕ್ಕವನು ಅದಕ್ಕೆ ಸಂಬಂಧಿಸಿದ ಪರೀಕ್ಷೆಯಲ್ಲಿ ಪಾಸಾಗಿಬಂದಿರಬೇಕಲ್ಲವೆ? ಅದೇ ಮೇರೆಗೆ ಮನೆಯೆಂಬ ಕಂಪನಿಯ ವ್ಯವಸ್ಥಾಪಕಳೆನಿಸುವ ಗೃಹಿಣಿಯು ಗೃಹಶಾಚೆಗೆ ಸಂಬಂಧಿಸಿದ ಮಾತೃತ್ವನಿರ್ವಹಣ, ಶಿಶುಸಂಗೋಪನ, ಆದಾಯ ವೆಚ್ಚಯೋಜನೆ ಇತ್ಯಾದಿ ಅನೇಕ ಕಲೆಗಳಲ್ಲಿ ತರಬೇತುಹೊಂದಿರಬೇಡವೇ? ಇಂದಿನ "ಅಪ್‌ಟುಡೇಟ್" ಹುಡುಗಿಯರನ್ನು ಮದುವೆಯಾದವರು ಅಡಿಗೆಭಟ್ಟರನ್ನು ಇಟ್ಟುಕೊಳ್ಳುವಂತಹ ಪ್ರಸಂಗ ಬರುವುದಾದರೂ ಏಕೆ? ಎಂದು ನಾವು ಯೋಚಿಸಬೇಡವೆ?

ಕ್ವಿಬೆಕ್ಕಿನ ಶಾಲೆಗಳಲ್ಲಿ ಭಾವೀ ವಧುಗಳಿಗೆ ಕಾಮಶಾಸ್ತ್ರ, ಪಾಕಶಾಸ್ತ್ರ, ತೋಟಗಾರಿಕೆ, ಹೊಲಿಗೆ, ನೇಯಿಗೆ, ನೂಲುವುದು, ಮನೋವಿಜ್ಞಾನ, ಶಿಶುಸಂಗೋಪನ, [illegible], ಆಹಾರ ವಿಜ್ಞಾನ, ಆದಾಯ ವೆಚ್ಚ ವಿತರಣ ಮುಂತಾದ ಗೃಹಸ್ಥ ಜೀವನಕ್ಕೆ ಉಪಯುಕ್ತವಾದ ವಿವಿಧ ವಿಷಯಗಳ ಜ್ಞಾನವನ್ನು ಕೊಡಲಾಗುತ್ತದೆ. ಇಂತಹ ಶಾಲೆಗಳು ಅಲ್ಲಿ ೬೪ ಇವೆ. ಅವುಗಳಲ್ಲಿ ೪ ಸಾವಿರ ವಿದ್ಯಾರ್ಥಿನಿಯರಿದ್ದಾರೆ. ನಮ್ಮಲ್ಲಿ ಇವು ಬೇಡವೆ? ನಮ್ಮ ಗೃಹಿಣಿಯರು ಆದರ್ಶ ಸೊಸೆಯರಾಗಬೇಡವೆ? ಕೇವಲ ಹಸಿ ಹುಡುಗಿಯರಾಗಿ ಅಲ್ಲವೆ ಬಣ್ಣದ ಬೀಸಣಿಗೆಗಳಾಗಿ ಅವರು ತಿರುಗುತ್ತಿರಬೇಕೆ? ಎಷ್ಟೋ ಸಾಮಾನ್ಯ ವಿಷಯಗಳನ್ನು ಕಂಡು ಕಲಿಯಬಹುದಾದರೂ ಶಾಸ್ತ್ರೀಯವಿಷಯಗಳನ್ನು ಮನೆಗೆಲಸ ಮಾಡುವ[illegible] ಕಲಿಯಲಾಗುವುದೆಂಬುದು ಸುಳ್ಳು. ಇದರ ಬಗೆ[illegible] [illegible] ಕಾಣಿಯುವರು ಗಮನಿಸಿಯುವರೆ!

[illegible]ಗಳಲ್ಲಿರುವ ನಿರಾಶ್ರಿತರಿಗೆ ಉದ್ಯೋಗ

ನಿರಾಶ್ರಿತರಿಗೆ ಸಂಪಾದನೆಯ [illegible] ಕಲ್ಪಿಸಿಕೊಡಲು ಹಿಂದುಸ್ತಾನ [illegible] [illegible] [illegible] [illegible] ಅಕ್ಕಿ [illegible] [illegible] [illegible] ಸಂತೆಗಳ [illegible]

ಮೊಟ್ಟಮೊದಲು ಇಂಥ ಕೇಂದ್ರವನ್ನು ದಿಲ್ಲಿಯ ಕಿಂಗ್ಸ್‌ವೇ ಕ್ಯಾಂಪಿನಲ್ಲಿ ತೆರೆಯಲಾಗುವುದು. ಸದ್ಯದಲ್ಲಿ ಸೂಚಿತವಾದ ಕೈಗಾರಿಕೆಗಳೆಂದರೆ ನೂಲುವುದು, ನೇಯುವುದು, ಹೊಲಿಯುವುದು, ಗೊಂಬೆಮಾಡುವುದು, ಸಾಬೂನು ತಯಾರಿಸುವುದು, [illegible] ಹೆಣೆಯುವುದು.

ಇನ್ನೂರು ಚರಕಗಳು ಮತ್ತು ನಲವತ್ತು ಮಗ್ಗಗಳು ಪೂರೈಸಲ್ಪಡುವವು. ಇದರಿಂದ ಇನ್ನೂರ ಎಪ್ಪತ್ತೈದು ಹೆಂಗಸರು ಮತ್ತು ಹುಡುಗಿಯರಿಗೆ ಕೆಲಸ ಸಿಗುವಂತಾಗುತ್ತದೆ. ಮಗ್ಗಗಳಿಂದ ಇನ್ನೂರು ಜನ ಗಂಡಸರು ಮತ್ತು ಮಕ್ಕಳಿಗೆ ಕೆಲಸ ದೊರೆಯುತ್ತದೆ. ಇದಕ್ಕೆ ಬೇಕಾಗಿರುವ ಸಾಧನ ಸಾಮಗ್ರಿಗಳನ್ನು ಕೊಳ್ಳಲು ಏಳು ಸಾವಿರ ರೂಪಾಯಿ ಖರ್ಚು ಬೀಳುತ್ತದೆ.

ಬಣ್ಣ ಹಾಕುವುದು ಮತ್ತು ಕ್ಯಾಲಿಕೋ ಮುದ್ರಣ ಇವುಗಳಿಂದ ಇನ್ನೂರು ಜನ ಸ್ತ್ರೀ ಪುರುಷರಿಗೆ ಕೆಲಸ ಸಿಗುತ್ತದೆ. ಇದಕ್ಕೆ ಬೇಕಾದ ಮೂಲಧನ ಸಾವಿರದ ಇನ್ನೂರ ಐವತ್ತು ರೂಪಾಯಿ.

ಹೊಲಿಗೆಯಿಂದ ನೂರು ಜನ ಸ್ತ್ರೀ [illegible] ಉದ್ಯೋಗ ಲಭಿಸುತ್ತದೆ. ಒಂದೊಂದಕ್ಕೆ [illegible] ಮೂವತ್ತು ರೂ. ಕಳಂತೆ ೩೦ ಕೈಹೊಲಿಗೆಯ ಯಂತ್ರಗಳನ್ನು ಒದಗಿಸಲಾಗುವುದು. ಇದಕ್ಕೆಲ್ಲ ಒಟ್ಟಿಗೆ ೮೧೫೦ ರೂಗಳ ಖರ್ಚು ಬೀಳುತ್ತದೆ. ಗುಂಡಿಮಾಡಲು ಬೇಕಾದ ಸಾಮಗ್ರಿಗಳಿಗೆ ೧೫೦೦ ರೂಪಾಯಿ ಬೇಕು. ಅದರಿಂದ ಐವತ್ತು ಗಂಡಸರು ಮತ್ತು ಮಕ್ಕಳಿಗೆ ಉದ್ಯೋಗ ಸಿಗುತ್ತದೆ. ನೂಲುಂಡೆ ಮಾಡುವುದಕ್ಕೆ ೧೫೦೦ ರೂಪಾಯಿ ಮೂಲಧನ ಬೇಕು. ಇದರಿಂದ ೫೦ ಹೆಂಗಸರು ಮತ್ತು ಹುಡುಗಿಯರಿಗೆ [illegible]ತ್ತದೆ. ಸಾಬೂನು ತಯಾರಿಕೆ [illegible] ರೂಪಾಯಿ ಬೀಳುವುದಲ್ಲದೆ [illegible] ಜನರಿಗೆ ಕೆಲಸ ದೊರಕುತ್ತದೆ. [illegible] ನಿವಾರ ಮಾಡುವುದಕ್ಕೆ ೫೦೦ [illegible] ವಾಲ ಬೇಕು. ಇದರಿಂದ ೩೦ ಜನ [illegible] ಗಂಡಸರು ಮತ್ತು ಮಕ್ಕಳಿಗೆ ಉದ್ಯೋಗ [illegible]ತ್ತದೆ.

ಈ ಎಲ್ಲವುಗಳಿಗೆ ಒಟ್ಟು ೧೬೩೦೦ [illegible] ಅಗತ್ಯವಿದ್ದು ಇವುಗಳಿಂದ ೧೩೨೫ [illegible] ಸರು, ಗಂಡಸರು ಮತ್ತು ಮಕ್ಕಳಿಗೆ [illegible] ದಾರಿಯಾಗುತ್ತದೆ. ಇದಕ್ಕೆ [illegible] ಖರ್ಚನ್ನು [illegible] ತುಂಬಿಕೊಳ್ಳಲಾಗುತ್ತದೆ ಅನಲೇ [illegible] [illegible] ಅಗತ್ಯವಾದ [illegible] ಕೂಲಗಳನ್ನು [illegible] ಪ್ರಾರಂಭಿಸಿ [illegible] ಉದ್ಯೋಗಗಳಲ್ಲಿ [illegible] ನಿರಾಶ್ರಿತರಿಗೆ [illegible] [illegible] ತರ ಸಹಾಯ ಮತ್ತು [illegible] ಶಾಖೆಯು ಸಾರಿದೆ.

[illegible]

[illegible] ರುದ್ರನೆಂದು [illegible] [illegible] ಪ್ರಾರಂಭಿಸಲು ಕೊಡ [illegible] ಗುಣದು. [illegible] ರುದ್ರಾಭಿಷೇಕ ಮಾಡಿಸು[illegible] [illegible] ಜೀವಿಗೆ ಅನೇಕ ಆಹಾರ [illegible] [illegible] ಕೆಂದರೆ ಅದನ [illegible] [illegible] ಕಾಲದಿಂದ [illegible] [illegible]

ಅದರಿಂದ ಯುಗ ಬದಲಾಗಿದೆ. ವಿಜ್ಞಾನ [illegible] ಸೂರ್ಯನು [illegible] [illegible] ಮುಳಿಯ ಕೊನೆ ಮತ್ತು ಬರಗಾಲಗಳನ್ನು [illegible] [illegible] ಅದೀಗ ವಿಜ್ಞಾನ [illegible]

[illegible]

ಬ್ರಿಟಿಷ್ [illegible] ಅನೇಕ ಈ [illegible] [illegible] ಜಗತ್ತಿನ ವಿವಿಧ ಭಾಗಗಳಲ್ಲಿ [illegible] [illegible]

ಈ ಕಳೆದ [illegible] [illegible] [illegible] [illegible] ಮುಂತಾದ [illegible] ಬಹುದು. ಹಿಂದೀ [illegible] ಸಾಧನಗಳನ್ನು ಒದಗಿಸಿಕೊಡುವುದು ಸರಕಾರದ ಕರ್ತವ್ಯವಲ್ಲವೇ?

ಲಾರ್ಡ್ ಮತ್ತು ಲೇಡಿಯರ ಸ್ಪರ್ಧೆ

ಇಂಗ್ಲಂಡಿನ ಶಾಸನ ಸಭೆಯು [illegible] ಯನ್ನು ಅಲ್ಲಿಯ "ಲಾರ್ಡರು" [illegible] ಯುವರಿಗೆ [illegible] [illegible] ಸದಸ್ಯತ್ವಕ್ಕಾಗಿ [illegible] ಅವರನ್ನು [illegible] [illegible] ಸದಸ್ಯರ [illegible] ಮತ್ತೊಂದು [illegible] ಯನ್ನು "ಲೇಡಿ"ಯರಿಂದ ತಯಾರಿಸುತ್ತಿ[illegible] [illegible] ಲಾರ್ಡ[illegible] [illegible] ಮನೆಯಲ್ಲಿ "ಹೆಂಡತಿಯ [illegible] ಹೊಲೆಯ" ಎಂಬ [illegible]

[illegible] ಯಿಂದ ಉದ್ಯೋಗ, ಕಲೆ, ಕೈಗಾರಿಕೆ [illegible]

[illegible]

ಹಿರಿಯೋಲಗ

ರೈತರಿಗೆ ಸಹಾಯ ಧನ ನೀಡಿರಿ

ಪಣಕಾಸಿನ ಚರ್ಚೆಯಲ್ಲಿ ಶ್ರೀ ದಿವಾಕರರ ಭಾಷಣ

ಹೊಸದಿಲ್ಲಿ ತಾ. ೭.— ಭಾರತದ ಹಿರಿಯೋಲಗದಲ್ಲಿ ನಿನ್ನೆ ಅಂದಾಜು ಪತ್ರಿಕೆಯ ಬಗ್ಗೆ ನಡೆದ ಚರ್ಚೆಯಲ್ಲಿ ಶ್ರೀ. ದಿವಾಕರ ರಂಗರಾಯರು ಭಾಗವಹಿಸುತ್ತ ವಿದೇಶ ಆಹಾರ ಧಾನ್ಯಗಳ ನಿರ್ಯಾತದ ಮೇಲೆ ಹೊರಲ ಭಾರತ ಸರಕಾರವು ಈ ಧಾನ್ಯಗಳಿಗಾಗಿ ಸುಮಾರು ೧೦೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದೆಂದೂ ಇದೇ ಹಣವನ್ನು ರೈತನಿಗೆ ಸಹಾಯ ಧನವನ್ನು ಕೊಡುವದಕ್ಕಾಗಿ ಮತ್ತು ನೀರಾವರಿಗಳಿಗಾಗಿ ಉಪಯೋಗಿಸಿದ್ದರೆ ಆಹಾರ ಉತ್ಪಾದನೆಯು ಹೆಚ್ಚಾಗುತ್ತಿತ್ತೆಂದೂ ಇಷ್ಟು ಅಧಿಕ ಪ್ರಮಾಣದಲ್ಲಿ ಆಹಾರ ಧಾನ್ಯಗಳು ವಿದೇಶಗಳಿಂದ ಈಗ ಬರುತ್ತಿರುವಾಗ ಭಾರತಕ್ಕೆ ಅವಶ್ಯವಿರುವ ಮಹತ್ವದ ಯಂತ್ರೋಪಕರಣಗಳನ್ನು ತರಿಸುವದಕ್ಕೆ ಅಡ್ಡಿಯಾಗುತ್ತಿದೆಂದೂ ಹೇಳಿದರು.

ಸರಕಾರವು ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕು; ನೇಕಾರರಿಗೆ ಹಣ ಒದಗಿಸುವದಕ್ಕಾಗಿ ಒಂದು ಸಂಸ್ಥೆಯನ್ನೇರ್ಪಡಿಸಬೇಕು. ಸಂರಕ್ಷಣ ವೆಚ್ಚವು ತಗ್ಗಬೇಕು. ಮತ್ತು ರಾಷ್ಟ್ರೀಯ ಸೇನೆಯನ್ನು ಸ್ಥಾಪಿಸಬೇಕು ಎಂದು ಅವರು ಸೂಚಿಸಿದರು.

ಕೂಲಿಕಾರರ ಸಮಸ್ಯೆಯ ಕಡೆಗೆ ಅವರು ಹೊರಳಿ ಕೂಲಿಯ ಪ್ರಮಾಣವನ್ನು ಏರಿಸಿದ್ದರೂ ಉತ್ಪಾದನೆಯು ಹೆಚ್ಚಿಲ್ಲವೆಂದು ಉದ್ದಿಮೆದಾರರಿಂದ ದೂರುಗಳು ಬರುತ್ತಿವೆಯೆಂದೂ ಕೂಲಿಕಾರನಿಗೆ ತನ್ನ ಹೊಣೆಯ ಅರಿವು ಉಂಟಾಗುವಂತೆ ಮಾಡುವದವಶ್ಯವಿದೆಂದೂ ಉತ್ಪಾದನೆಯನ್ನು ಹೆಚ್ಚಿಸುವದರಲ್ಲಿಯೆ ತನ್ನ ಹಿತವಿದೆಂಬುದನ್ನು ಅವನಿಗೆ ಮನಗಾಣಿಸಬೇಕೆಂದೂ ಅಭಿಪ್ರಾಯಪಟ್ಟರು. ತ್ರಿಪಕ್ಷೀಯ ಪರಿಷತ್ತನ್ನು ಏರ್ಪಡಿಸಲು ಸರಕಾರವು ನಿರ್ಧರಿಸಿರುವದನ್ನು ಅವರು ಸ್ವಾಗತಿಸುತ್ತ ಈ ಪರಿಷತ್ತಿನ ಸದಸ್ಯರು ರಾಜಕಾರಣಿಗಳಿರಬಾರದೆಂದೂ ಅವರೆಲ್ಲರು ಕೂಲಿಕಾರರ ಪ್ರತಿನಿಧಿಗಳಿರತಕ್ಕದೆಂದೂ ನುಡಿದರು.

ಪ್ರಶ್ನೋತ್ತರಗಳು

ಶ್ರೀ ದಿವಾಕರ[illegible] ಕೇಳಿದ ಪ್ರಶ್ನೆಗಳಿಗೆ ಈ [illegible] ಉತ್ತರ ದೊರೆಯಿತು

[illegible]

ಹಿಂದುಸ್ತಾನದಲ್ಲಿ ತಯಾರಾಗುವ ಎಲುಬಿನ ಗೊಬ್ಬರದ (Bone-Meal) ವಾರ್ಷಿಕ ಉತ್ಪತ್ತಿಯು ಸರಾಸರಿ ೨೫ ರಿಂದ ೩೯ ಸಾವಿರ ಟನ್ ಇರುವದು. ಇವರಲ್ಲಿ ಅರ್ಧದಷ್ಟು, ಚಹ, ಕಾಫಿ ರಬರ ಮುಂತಾದ ತೋಟಗಳಿಗಾಗಿ ಉಪಯೋಗ ಮಾಡಲಾಗುತ್ತದೆ. ಉಳಿದದ್ದನ್ನು ಬಹುತರವಾಗಿ ಕಬ್ಬು, ಭತ್ತ ಹಾಗೂ ಹಣ್ಣು ಹಂಪಲದ ತೋಟಕ್ಕಾಗಿ ಉಪಯೋಗ ಮಾಡುತ್ತಾರೆ. ಇದಕ್ಕೂ ಹೆಚ್ಚಿನ ಸಂಗತಿಗಳು ಸರಕಾರಕ್ಕೆ ತಿಳಿದಿಲ್ಲ.

ಎಲುಬಿನ ಪುಡಿಯನ್ನು ದನಗಳಿಗೆ ಆಹಾರವೆಂದು ಕೊಟ್ಟರೆ ಅದರ ವಿಶೇಷವೇನು ಎಂದು ಕೇಳಿದ್ದಕ್ಕೆ ಸರಕಾರದವರು ಎಲುಬಿನ ಪುಡಿಯಲ್ಲಿ ಮುಖ್ಯವಾಗಿ ಖನಿಜ ದ್ರವ್ಯಗಳು ಅದರಲ್ಲಿಯೂ ವಿಶೇಷವಾಗಿ ಕ್ಯಾಲ್ಸಿಯಮ್ ಹಾಗೂ ಫೊಸ್ಪರಸ್ ಇರುವದರಿಂದ, ಎಲ್ಲ ದನಗಳ ಆರೋಗ್ಯಕ್ಕೂ ಅದು ಹಿತಕರವು. ದನಗಳ ಶರೀರದಲ್ಲಿ ಯಾವ ಪ್ರಮಾಣದಲ್ಲಿ ಈ ಎರಡು ಖನಿಜಗಳು ಹೊಂದಿಕೊಂಡಿರುವವೊ ಅದೇ ಪ್ರಮಾಣದಲ್ಲಿ ಇದರ ಸೇವನೆಯಿಂದ ಸಿಗುವದು ಸರಾಸರಿ ನೂರಕ್ಕೆ ೩೦.೩ ಹಾಗೂ ೧೪-೪ ಕ್ರಮವಾಗಿ ಇರುವವು. ಆದ್ದರಿಂದ ಇದನ್ನು ಆಹಾರದಲ್ಲಿ ಉಪಯೋಗಿಸುವದು ಉಪಯುಕ್ತವು.

ಎಲುಬಿನ ಗಿರಣಿಗಳು ಹಿಂದುಸ್ತಾನದಲ್ಲಿ ಒಟ್ಟು ೨೩ ಇರುತ್ತವೆ

ಪ್ರಶ್ನೆ:— ಶೆಗಣಿಯನ್ನು ಉರುವಲದಂತೆ ಉಪಯೋಗಿಸದೆ ಗೊಬ್ಬರದ ಸಲುವಾಗಿ ಕಾದಿಡುವದಕ್ಕಾಗಿ ಸರಕಾರವು ಯಾವ ಉಪಾಯಗಳನ್ನು ಕೈಕೊಂಡಿದೆ ?

ಉತ್ತರ:— ಸರಕಾರದವರು ಶೆಗಣಿಯಲ್ಲಿಯ ಗೊಬ್ಬರದ ಮಹತ್ವವನ್ನು ಅರಿತಿದ್ದಾರೆ. ಅದಕ್ಕಾಗಿ ಉರುವಲಕ್ಕೆ ಅದನ್ನು ಉಪಯೋಗಿಸುವದನ್ನು ಬಿಡಿಸುವದಕ್ಕಾಗಿ ಅಲ್ಲಲ್ಲಿಗೆ ಅರಣ್ಯ ಬೆಳೆಸಲಿಕ್ಕೆ ಉತ್ತೇಜನ ಕೊಡಹತ್ತಿದ್ದಾರೆ. ಇದರಿಂದ ಜನರಿಗೆ ಸೋವಿ ದರದಲ್ಲಿ ಉರವಲು ಕಟ್ಟಿಗೆ ಸಿಗಬಹುದು.

ಒಟ್ಟು ಶೆಗಣಿಯ ಸುಮಾರು ೨/೩ ಭಾಗವನ್ನು ಸದ್ಯಕ್ಕೆ ಜನರು ಉರುವಲವೆಂದು ಉಪಯೋಗಿಸುತ್ತಾರೆ. ಗೊಬ್ಬರವೆಂದು ಸಿಗುವ ಒಟ್ಟು ಶೆಗಣಿಯ ಪ್ರಮಾಣವು ಸರಾಸರಿ (ಹಸಿ) ಒಟ್ಟು ೮೪ ಕೋಟಿ ಟನ್ ಇದ್ದು ಒಣಗಿದ ಮೇಲೆ ೩೩.೬ ಕೋಟಿ ಟನ್ ಆಗುತ್ತದೆ.

ಸರಕಾರಕ್ಕೆ ಆಹಾರವನ್ನು ಹೆಚ್ಚಿಗೆ ಬೆಳೆಸುವ ಉದ್ದೇಶವಿರುವದರಿಂದ ಗೊಬ್ಬರವನ್ನು ಉಪಯೋಗಿಸುವದಕ್ಕಾಗಿ ಸಹಾಯ ಧನವನ್ನು ಹಾಗೂ ಇತರ ಸೌಕರ್ಯಗಳನ್ನು ಜನರಿಗೆ ಒದಗಿಸಲಾಗಿದೆ.

[illegible] ಹಿಂದುಸ್ತಾನದಲ್ಲಿ [illegible] ಟನ್ [illegible] ಆದಷ್ಟು [illegible] ಟನ್ [illegible] ಸೌಕರ್ಯದ [illegible] ಯಿಂದ ಇಷ್ಟು ಎಲುಬುಗಳನ್ನು ಸಂಗ್ರಹಿಸುವದಾಗಿಲ್ಲ ಆದರೆ ಎಲ್ಲಿಯಾದರೂ ಎಲುಬುಗಳು ನಿರುಪಯುಕ್ತವಾಗಿ ಬಿದ್ದು ಹೋಗುತ್ತಿವೆಯೆಂದು ಸರಕಾರಕ್ಕೆ ತಿಳಿದುಬಂದಿಲ್ಲ. ಸರಕಾರದವರು ಎಲುಬುಗಳ ಸಂಚಯಕ್ಕೆ ಉತ್ತೇಜನ ಕೊಡಬೇಕೆಂದು ಇಂಡಿಯನ್ ಮಿನರಲ್ ಮ್ಯಾನ್ಯುಫ್ಯಾಕ್ಚರರ್ಸ್ ಅಸೋಸಿಯೇಶನದವರಿಗೆ ತಿಳಿಸಿದ್ದಾರೆ.

ಭಾರತದಲ್ಲಿ ಶ್ರೀಮತಿ ವಿಜಯಲಕ್ಷ್ಮಿ

ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಭಾರತದ ಪ್ರತಿನಿಧಿ ಮಂಡಲದ ಧುರೀಣರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ತಾ. ೪ ರಂದು ಮುಂಬಯಿಗೆ ನ್ಯೂಯಾರ್ಕದಿಂದ ಬಂದರು. ಸುದ್ದಿಗಾರರಿಗಿತ್ತ ಸಂದರ್ಶನದಲ್ಲಿ ಅವರು, "ಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಈ ವರೆಗಿನ ತಮ್ಮ ಕೆಲಸದ ವರದಿಯನ್ನು ಭಾರತ ಮುಖ್ಯ ಪ್ರಧಾನರಿಗೆ ಒಪ್ಪಿಸಿ ಒಂದು ವಾರದ ನಂತರ ದಿಲ್ಲಿಯಿಂದ ಮಾಸ್ಕೋಕ್ಕೆ ತೆರಳುವೆನು" ಎಂದು ಹೇಳಿದರು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

ಡಿಸೆಂಬರ ೨—

ತಾತಾ ಸಾದಾ ೩೮೪, ತಾತಾ ಡೆಫರ್ಡ ೧೯೩೦, ಇಂಡಿಯನ್ ಕಬ್ಬಿಣ ೩೪-೧೩, ಸ್ಟೀಲ್ ಕಾರ್ಪೊರೇಶನ್ ಆಫ್ ಬಂಗಾಲ್ ೨೯-೪, ಬಾಂಬೆ ಡಾಯಿಂಗ ೧೯೭-೮, ಮಧ್ಯ ಇಂಡಿಯ ೩೧೩-೧೨, ಗೋಕಾಕ ೩೨೮-೧೨, ಕೋಹಿನೂರ್ ೫೮೧-೪, ಸಿಂಪ್ಲೆಕ್ಸ್ ೨೪೩, ಸ್ವದೇಶಿ ೬೧೩-೧೨, ತಾತಾ ಪವರ್ ೧೭೬೫, ಅಸೋಸಿಯೇಟೆಡ್ ಸಿಮೆಂಟ್ ೧೬೭, ಬೇಲಾಪುರ್ ೩೩೫-೨, ಬಾಂಬೆ ಬರ್ಮಾ (ಹಳೆ) ೪೭೬-೪, ಸಿಂಧ್ಯ ೩೪-೧೪, ಸೆಂಟ್ರಲ್ ಬ್ಯಾಂಕ್ ೮೬-೧೪, ನ್ಯೂ ಇಂಡಿಯ ೭೨-೮, ತಾತಾ ಸೆಕೆಂಡ್ ಪ್ರಿಫರೆನ್ಸ್ ೧೫೧.೪.

ಚಿನ್ನ—ಬೆಳ್ಳಿ

ಚಿನ್ನ ಬೆಳ್ಳಿ ಪೇಟೆಯು ತಕ್ಕ ಮಟ್ಟಿಗೆ ಒಂದು ನಿರ್ದಿಷ್ಟ ಸ್ಥಿತಿಯಲ್ಲಿದೆ. ವ್ಯಾಪಾರ ಸಾಧಾರಣ. ಫಾರ್ವರ್ಡ ಬೆಳ್ಳಿ ರೂ. ೧೬೪ ರಿಂದ ಪ್ರಾರಂಭವಾಗಿ ರೂ. ೧೬೩-೧೨ ಕ್ಕೆ ಇಳಿದು ಮತ್ತೆ ರೂ. ೧೬೪.೮ ಕ್ಕೇರಿತು. ಸಿದ್ಧ ಬೆಳ್ಳಿ ರೂ. ೧೬೪-೧೦ ರಲ್ಲಿತ್ತು. ಫಾರ್ವರ್ಡ ಚಿನ್ನ ರೂ ೧೦೬-೧೧ ರಿಂದ ರೂ ೧೦೬-೨ ಕ್ಕಿಳಿದು ರೂ ೧೦೬.೮ ಕ್ಕೆ ಸುಧಾರಿಸಿತು. ಸಿದ್ಧ ಬಂಗಾರ ರೂ ೧೦೬-೪ ರಲ್ಲಿತ್ತು. ಪವನುಗಳು ರೂ ೬೯-೮ ರಲ್ಲಿದ್ದವು.

ಕಡೆಯಲ್ಲಿ ಇಷ್ಟಕ್ಕೆ ನಿಂತವು

ಸಿದ್ಧ ಬೆಳ್ಳಿ	೧೬೪—೧೨—೦
ಫಾರ್ವರ್ಡ ಬೆಳ್ಳಿ	೧೬೪—೧೦—೦
ಸಿದ್ಧ ಬಂಗಾರ	೧೦೫—೧೨—೦
ಫಾರವರ್ಡ ಚಿನ್ನ	೧೦೫—೧೫—೦

ಅರಳೆ

ಅರಳೆ ಪೇಟೆ ಮೊದಲು ಅಷ್ಟೇನೂ ಸ್ತಿಮಿತದಲ್ಲಿರದಿದ್ದರೂ ಕಡೆ ಕಡೆಗೆ ತಕ್ಕ ಮಟ್ಟಿಗೆ ಸ್ಥಿರವಾಯಿತು.

ಮೊದಲು ಜನವರಿಯು ರೂ. ೪೭೪-೧೨ ರಲ್ಲಿ ಸುರುವಾಗಿ ರೂ. ೪೭೩-೧೨ ಕ್ಕಿಳಿದು ರೂ. ೧೭೫-೮ ಕ್ಕೆ ಬಂದು ಮುಟ್ಟಿತು. ಅನಂತರ ವ್ಯಾಪಾರ ಹೆಚ್ಚಿನದಿಲ್ಲ ಜನವರಿಯು ರೂ. ೫೭೫-೪ ರಲ್ಲೇ ನಿಂತು ಮಾರ್ಚ ರೂ. ೪೭೨-೮ ರಲ್ಲಿ ನಡೆದಿತ್ತು.

ಅನಂತರ ಸ್ತಿಮಿತ ಪರಿಸ್ಥಿತಿಯಿದ್ದು ಜನವರಿ ರೂ ೪೭೫-೧೨ ರಲ್ಲೂ ಮಾರ್ಚ ರೂ ೪೪೭-೦ ರಲ್ಲೂ ಹರಿದಾಡಿದವು.

ಸಂತೆ ಮುಚ್ಚುವಾಗ ಹೀಗಿತ್ತು

ಐ. ಸಿ. ಸಿ.	ಜನವರಿ	೪೭೫—೧೪—೦
,,	ಮಾರ್ಚ	೪೭೩—[illegible]—೦
,,	ಮೇ	೪೭೯—೬—೦
,,	ಜುಲೈ	೪೮೭—೦—೦
,,	ಸೆಪ್ಟೆಂಬರ್	೪೯೨—[illegible]—೦

ಅರಳೆಯ ಪ್ರಥಮ ಮತ್ತು ಪರಮಾವಧಿ ಬೆಲೆಗಳು

	ಪರ.	ಪ್ರ.	ಕ್ಲೋಸಿಂಗ್
ಜನ	೪೭೭-೧/೪	೪೭೫	೪೭೪-೧/೮
ಮಾರ್ಚ	೪೭೩	೪೭೨-೧/೨	[illegible]
ಮೇ	೯೭೯	೪೭೮-೧/೨	[illegible]
ಜುಲೈ	೪೮೬-೧/೨	೪೮೬	[illegible]
ಕರಾಚಿ ೪ F			
ಜನ	೫೨-೧-೦	೫೨-೦-೦	೫೨-೦-೦

ಎಣ್ಣೆ ಕಾಳುಗಳು

ಶೇಂಗಾ	೧೪೩—೦—೦
,, (ಹೊಸತು)	೧೪೨—೦—೦
ಅಗಸಿ	೨೯—೧೦—೦
ಅಗಸೆ ಎಣ್ಣೆ	೧೭—೧೦—೦

ಸಾಂಗಲಿ ಪೇಟೆ

ಅರಿಸಿಣ ಹೇರು	೧೦೦-೧೧೧
ಹೊಸ ವೆಣಿಪಕಾಯಿ	೧೨೦-೧೪೦
ಶೇಂಗಾ ಖಂಡಿ	೧೦೦-೧೨೦

ಶಿವಮೊಗ್ಗ

ಶಿವಮೊಗ್ಗ ಅಡಿಕೆಪೇಟೆ ಈರೀತಿ ಇದೆ—

ದೇಶಾವರ ನಂ. ೧ ಮಣ ೧ ಕ್ಕೆ	೪೫-೫೦
ಕೊಪ್ಪ-ಶೃಂಗೇರಿ	೪೪-೪೮
ಬೀರೂರು ತುಡಿಕೆ	೪೭-೪೨
ತೋರ ಸಾಲು	೪೪-೪೮
ರಾಜಾ ಅಪವು ,,	೪೬-೪೭
ದ.ಚಿಪ್ಪಿ	೨೬-೨೭
ಅಸ್ನಾಪಿ	೩೨-೪೪

ಅಡಿಕೆಗೆ ಬೇಡಿಕೆ ಇಲ್ಲ. ಮಾಲು ನಿರ್ಯಾತ [illegible].

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ ನಂ.	೧	೩೧೦-೩೨೦
,,	೨	೨೯೦-೩೦೦
,,	೩	೨೭೦-೨೮೦
ಹಳೇ ಜಯವಂತ ಹತ್ತಿ		೩೩೦-೩೪೦
ಅಪಲಂಡ ಹತ್ತಿ		—
ಜಿನ ಹಳೆದು		೨೧೫-೨೨೨
ಜಿನ ಹೊಸದು		೧೯೫-೨೧೦
ಅಪಲಾಂಡ ಡಬಲರೋಲಿ		೧೯೫-೨೦೫

ಮೂವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಕಾಸರಗೋಡು

ಈ ವರ್ಷ ಸಾಹಿತ್ಯ ಸಮ್ಮೇಳನವು ಜರಗಲಿರುವ ಕಾಸರಗೋಡು ಮಂಗಳೂರಿನಿಂದ ೩೦ ಮೈಲು ದಕ್ಷಿಣಕ್ಕೆ ಪಶ್ಚಿಮ ಸಮುದ್ರ ತೀರದಲ್ಲಿ ಚಂದ್ರಗಿರಿ ನದಿಯ ದಡದಲ್ಲಿ ಕೇರಳ, ಕರ್ನಾಟಕಗಳ ಗಡಿಯಲ್ಲಿರುವ ತಾಲೂಕು ಸ್ಥಳ. ಸುಮಾರು ೨೫ ಸಾವಿರ ಜನಸಂಖ್ಯೆಯಿರುವ ಈ ಪಟ್ಟಣದಲ್ಲಿ ಮುನ್ಸಿಫ್ ಕೋರ್ಟು, ತಾಲೂಕು ಆಫೀಸು ಮೊದಲಾದ ಕಚೇರಿಗಳೂ ಮೂರು ಹೈಸ್ಕೂಲುಗಳೂ ಇವೆ. ಇದು ಜಿಲ್ಲೆಯಲ್ಲಿ ಮರದ ವ್ಯಾಪಾರಕ್ಕೆ ಹೆಸರಾದ ಸ್ಥಳ.

ಕಾಸರಗೋಡಿಗೆ ಬರುವ ದಾರಿಗಳು

ಕಾಸರಗೋಡಿಗೆ ಹೋಗಬೇಕಾದರೆ ಹೆಚ್ಚು ಕಡಿಮೆ ಮಂಗಳೂರು ದಾರಿಯಾಗಿಯೇ ಹೋಗಬೇಕು. ಧಾರವಾಡ, ಬೆಳಗಾಂ, ವಿಜಾಪುರ ಮೊದಲಾದ ಉತ್ತರ ಕರ್ನಾಟಕದಿಂದ ಬರುವವರು ಕಡೂರು ವರೆಗೆ ರೈಲಿನಲ್ಲಿ ಬಂದು ಅಲ್ಲಿಂದ ಬಸ್ಸಿನ ಮೂಲಕ ಚಿಕ್ಕಮಗಳೂರು ದಾರಿಯಾಗಿ ಮಂಗಳೂರಿಗೆ ಬರಬೇಕು. ಕಡೂರಿನಿಂದ ಮಂಗಳೂರಿಗೆ ೧೨೫ ಮೈಲು. ಬಸ್ ಚಾರ್ಜು ರೂ. ೮-೮-೦ ನಾಲ್ಕು ಬಸ್ ಸರ್ವೀಸುಗಳಿವೆ. ಉತ್ತರ ಕನ್ನಡ ಜಿಲ್ಲೆಯಿಂದ ಬರುವವರು ಭಟ್ಕಳ, ಕುಂದಾಪುರ ದಾರಿಯಾಗಿ ಮಂಗಳೂರಿಗೆ ಬರಬಹುದು. ದೂರ ಸುಮಾರು ೧೦೦ ಮೈಲು; ಚಾರ್ಜು ರೂ ೩-೮-೦ ಉತ್ತರ ಕರ್ನಾಟಕದವರು ಹರಿಹರ, ಶಿವಮೊಗ್ಗ ದಾರಿಯಾಗಿಯೂ ಬರಬಹುದು. ಮೈಸೂರು, ಬೆಂಗಳೂರಿನವರು ಮಡಿಕೇರಿ ಮೂಲಕ ಮಂಗಳೂರಿಗೆ ಬರಬಹುದು. ಮಡಿಕೇರಿಯಿಂದ ಮಂಗಳೂರಿಗೆ ದೂರ ೮೫ ಮೈಲು; ಬಸ್ ಚಾರ್ಜು ರೂ. ೨-೧೨-೦. ಮಡಿಕೇರಿಯಿಂದ ಮಂಗಳೂರಿಗೆ ನಾಲ್ಕು ಸರ್ವಿಸಗಳಿವೆ. ಮಡಿಕೇರಿಯಿಂದ ಕಾಸರಗೋಡಿಗೆ ಒಂದು ಸರ್ವಿಸು ಇದೆ. ದೂರ ೭೦ ಮೈಲು; ಚಾರ್ಜು ರೂ. ೨—೪—೦. ಬೆಂಗಳೂರಿನಿಂದ ಬರುವವರು ಹಾಸನದ ದಾರಿಯಾಗಿ ಮಂಗಳೂರಿಗೆ ಬರಬಹುದು. ಹಾಸನದ ಗಡಿಯಿಂದ ಮಂಗಳೂರಿಗೆ ೬೨ ಮೈಲು ದೂರ; ಚಾರ್ಜು ರೂ. ೪-೦-೦. ಮಂಗಳೂರಿನಿಂದ ಕಾಸರಗೋಡಿಗೆ ದಿನಕ್ಕೆ ನಾಲ್ಕು ಬಾರಿ ರೈಲು ಹೋಗುತ್ತದೆ; ಚಾರ್ಜು ೦-೧೦-೬. ಬೆಳಗ್ಗೆ ೬-೩೦, ೧೦-೫, ಮಧ್ಯಾಹ್ನ ೧-೫೦, ೫-೪೦.

ಸಮ್ಮೇಳನ ಕಾಲದಲ್ಲಿ ಪ್ರತಿಯೊಬ್ಬನಿಗೆ ಎರಡು ಊಟ, ಎರಡು ಕಾಫಿಗೆ ರೂ ೨-೦-೦ ಚಾರ್ಜು ಮಾಡಲಾಗುವದು. ಸಮ್ಮೇಳನದ ಡೆಲಿಗೇಶನ್ ಫೀಸು ರೂ. ೨—೦—೦ ಅತಿಥಿಗಳಿಗೆ ಉಳಕೊಳ್ಳಲು ಬೇಕಾದ ವ್ಯವಸ್ಥೆ ಮಾಡಲಾಗಿದೆ. ಚಳಿಗಾಲವಾದ್ದರಿಂದ ಹಾಸು ಹೊದಿಕೆಗಳನ್ನು ತರುವುದು ಯೋಗ್ಯ. ಸಮ್ಮೇಳನಕ್ಕೆ ಬರುವವರು ಮೊದಲಾಗಿ ತಿಳಿಸಿದರೆ ಉತ್ತಮ.

ವಿ. ಸೂ. — ಸಮ್ಮೇಳನಕ್ಕೆ ಬರುವವರು ೨೬ ನೆಯ ತಾರೀಕಿನ ದಿವಸವೇ ಮಂಗಳೂರಿಗೆ ತಲುಪುವಂತೆ ಬಂದರೆ ಉತ್ತಮ. ಮಂಗಳೂರಲ್ಲಿ ಉಳಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಜಿಲ್ಲೆಯ ಮೋಟರ್ ಕಂಪೆನಿಯವರು ಸಮ್ಮೇಳನಕ್ಕೆ ಬರುವವರಿಗೆ ಟಿಕೇಟಿನ ವ್ಯವಸ್ಥೆ ಮಾಡುವ ಭರವಸೆ ಕೊಟ್ಟಿದ್ದಾರೆ.

ಬಿ. ಶಂಕರ ಭಟ್ಟ,
ಕಾರ್ಯದರ್ಶಿ, ಪ್ರಕಟಣಾ ಶಾಖೆ

ಹಿಂದುಸ್ಥಾನ

ಮುಂಬಯಿ

ಮುಂಬಯಿಯ ಗವರ್ನರರಾದ ಸರ್‌ಜಾನ ಕಾಲವಿಲ್ಲರು ಮುಂದಿನ ತಿಂಗಳ ನಿವೃತ್ತರಾಗಿ ಸ್ವದೇಶಕ್ಕೆ ಮರಳುವವರಿದ್ದು ಅವರ ತರುವಾಯ ಸಿ. ರಾಜಗೋಪಾಲಾಚಾರ್ಯರು ಮುಂಬಯಿಯ ಗವ್ಹರ್ನರರಾಗುವರೆಂದು ತಿಳಿದು ಬರುತ್ತದೆ.

ಸಿಕ್ಕ ಸ್ವಾತಂತ್ರ್ಯವನ್ನು ಸಂರಕ್ಷಿಸುವದು ದೊಡ್ಡ ಕೆಲಸವೆಂದು ಮುಂಬಯಿ ಗವ್ಹರ್ನರರಾದ ಜಾನ ಕಾಲವಿಲ್ಲರು ತಾ ೨೮ ರಂದು ಅಹಮದಾಬಾದದಲ್ಲಿ ಪೋಲೀಸ ಗೃಹರಕ್ಷಕ ದಲಗಳ ಪರೇಡಿನಲ್ಲಿ ಭಾಷಣಮಾಡುತ್ತ ಹೇಳಿದರು. ಸ್ವಾತಂತ್ರ್ಯ ರಕ್ಷಣೆಯ ವಿಷಯದಲ್ಲಿ ಮುಂಬಯಿ ಪ್ರಾಂತವು ಮುಂದಾಗಿದೆಯೆಂದೂ ಅವರು ನುಡಿದರು.

ಗವರ್ನರರು ಗಾಂಧೀಜಿಯವರ ಸಾಬರಮತಿ ಆಶ್ರಮವನ್ನು ಸಂದರ್ಶಿಸಿ ಅಲ್ಲಿ ಕಾದಿಟ್ಟ ಮಹಾತ್ಮರ ಹಳೆಯ ಭಾವಚಿತ್ರಗಳ ಸಂಗ್ರಹವನ್ನು ನೋಡಿ ಇವು ಭಾವೀ ಇತಿಹಾಸಕಾರರಿಗೆ ಬಹಳ ಅಮೌಲ್ಯ ವಸ್ತುಗಳಾಗುವವೆಂದು ಉದ್ಗಾರತೆಗೆದರು.

ಕಡಲೆ ಮತ್ತು ತಜ್ಜನ್ಯ ಪದಾರ್ಥಗಳನ್ನು ಸ್ಥಳಾಂತರಿಸುವ ಹಾಗು ಹಂಚುವ ಬಗ್ಗೆ ಇದ್ದ ಈಗಿನ ನಿಯಂತ್ರಣ ಹಾಗೆಯೇ ನಡೆಯುವದೆಂದು ಮುಂಬಯಿ ಸರಕಾರದವರು ಪ್ರಕಟನೆ ಹೊರಡಿಸಿದ್ದಾರೆ.

ನಿಜಾಮ ಸರಕಾರವು, ಒಂದು ಕಡೆ ಹಿಂದಿ ಒಕ್ಕೂಟದೊಡನೆ ಯಥಾಸ್ಥಿತಿ ಒಪ್ಪಂದ ಮಾಡಿಕೊಳ್ಳುತ್ತ ಇನ್ನೊಂದು ಕಡೆಗೆ ತನ್ನ ಮಿಲಟರಿ ಬಲ ಬೆಳೆಸುವಲ್ಲಿ ನಿರತವಾಗಿದೆ. ಸಂಸ್ಥಾನದಲ್ಲಿ ಈಗ ಆರು ಮೂರು ಗುಪ್ತ ಶಸ್ತ್ರಾಸ್ತ್ರ ಕಾರಖಾನೆಗಳನ್ನು ಸ್ಥಾಪಿಸಿರುವದೆಂದೂ ಹೈದರಾಬಾದ ಕಾರಖಾನೆಯಲ್ಲಿ ದಿನಕ್ಕೆ ೫೦ ಪಿಸ್ತೂಲುಗಳು ತಯಾರಾಗುತ್ತಿರುವವೆಂದೂ ಹೊರಗಿನಿಂದ ಹೇರಳ ಮದ್ದು ಗುಂಡುಗಳನ್ನು ಕಳ್ಳತನದಿಂದ ತರಿಸಿದೆಯೆಂದೂ ತಿಳಿದು ಬರುತ್ತದೆ.

ಮದ್ರಾಸ

ಮದ್ರಾಸ ಸರಕಾರದವರು, ಡಿಸೆಂಬರ ೧ ರಿಂದ ಸಕ್ಕರೆಯ ಸೀದಾ ರದ್ದುಪಡಿಸಲು ಹಾಗು ಬೆಲ್ಲದ ಧಾರಣೆ ಮತ್ತು ಚಲನವಲನದ ಮೇಲಿನ ನಿಯಂತ್ರಣ ತೆಗೆದೊಗೆಯಲು ನಿಶ್ಚಯಿಸಿದ್ದಾರೆಂದು ತಿಳಿಯುತ್ತದೆ. ಹಿಂದುಸ್ತಾನ ಸರಕಾರದವರ ಸಕ್ಕರೆ ಮೇಲಿನ ನಿಯಂತ್ರಣ ತೆಗೆಯಲು ನಿಶ್ಚಯಿಸಿದ್ದುದೇ ಇದಕ್ಕೆ ಕಾರಣ.

ಮದ್ರಾಸ ಪ್ರಾಂತದ ಎಲ್ಲ ನಾನ್ ಗ್ಯಾಜಿಟೆಡ್ ಅಧಿಕಾರಿಗಳು ಡಿಸೆಂಬರ ೫ ನೇ ದಿನ ಮಧ್ಯಾನ್ಹ ೧೧ ರಿಂದ ೧೨ ರ ವರೆಗೆ ಒಂದು ತಾಸು ಸಾಂಕೇತಿಕ ಸಂಪು ಹೂಡಬೇಕೆಂದು ತಾ ೨೮ ರಂದು ಸೇರಿದ ಈ ಸಂಘದ ಸಭೆಯಲ್ಲಿ ನಿರ್ಧಾರಮಾಡಲಾಗಿದೆ.

ಹೈದರಾಬಾದದಲ್ಲಿಯ ಗಲಭೆಗಳ ಮೂಲಕ ಪ್ರಾಂತದ ಗಡಿಗಳಲ್ಲಿ ಉಂಟಾದ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಮದ್ರಾಸ ಸರಕಾರಕ್ಕೆ ಕೇಂದ್ರ ಸರಕಾರದಿಂದ ಯಾವ ಸೂಚನೆಗಳೂ ಬಂದಿಲ್ಲವೆಂದು ಮದ್ರಾಸ ಪ್ರಾಂತದ ಗೃಹಮಂತ್ರಿಗಳಾದ ಡಾ. ಸುಬ್ಬರಾಯನ್ನರು ತಾ ೨೮ ರಂದು ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಗಳ ಪರವಾಗಿ ಒಂದು ಪ್ರಶ್ನೆಗೆ ಉತ್ತರಕೊಡುತ್ತ ಹೇಳಿದರು.

ಮದ್ರಾಸ ಮಂತ್ರಿಮಂಡಲದವರು ತಾ ೨೮ ರಂದಿನ ತಮ್ಮ ಸಭೆಯಲ್ಲಿ ತಮಿಳ, ತೆಲಗು, ಮಲಿಯಾಳಿ ಹಾಗು ಕನ್ನಡ ಆಸ್ಥಾನ ಕವಿಪೀಠಗಳನ್ನು ಪ್ರತಿಷ್ಠಾಪಿಸಲು ನಿರ್ಧರಿಸಿದರು. ಈ ಪೀಠಗಳ ಅವಧಿಯು ೫ ವರ್ಷಗಳಿದ್ದು ಪ್ರತಿಯೊಬ್ಬ ಆಸ್ಥಾನಕವಿಗೆ ೧೦೦೦ ರೂ. ಗೌರವ ಧನ ಕೊಡಲಾಗುವದು. ಇದರಂತೆ ಸಂಸ್ಕೃತದ ಶ್ರೇಷ್ಠ ವಿದ್ವಾಂಸನಿಗೂ ಮೇಲಿನಷ್ಟು ಗೌರವ ಧನ ಮಂಜೂರಾಗಿದೆ. ಇದಲ್ಲದೆ ಸರಕಾರದವರು, ಕಲೆ, ಇತಿಹಾಸ, ಸಂಶೋಧನ, ತತ್ವಜ್ಞಾನ, ತಸ್ತ್ರಕ್ರಿಯೆ, ಮೊದಲಾದ ವಿಷಯಗಳ ಬಗ್ಗೆ ನಾಲ್ಕು ಭಾಷೆಯಲ್ಲಿ ಬರೆಯಲ್ಪಟ್ಟ ಉತ್ತಮ ಗ್ರಂಥಗಳಿಗೆ ಬಹುಮಾನಕೊಡಲು ನಿರ್ಧರಿಸಿದ್ದಾರೆ.

ಬಿಹಾರ

ಬಿಹಾರ ಸೆಕ್ರೆಟೇರಿಯಟ್‌ದ ಕೆಳದರ್ಜೆಯ ಅಧಿಕಾರಿಗಳ ಸಂಘವು ಸರಕಾರವು ತಮ್ಮ ಮನವಿಯಂತೆ ನಡೆಯದಿದ್ದರೆ ಅಹಿಂಸಾತ್ಮಕ ಪ್ರತ್ಯಕ್ಷ ಹೋರಾಟ ಹೂಡುವದಾಗಿ ಬೆದರಿಸಿದೆ.

ಆಕಸ್ಮಿಕ ಅಗ್ನಿಯ ಅನಾಹುತದಿಂದ ಸೊರಬ ತಾಲೂಕ ಬಿಸ್ನೂರಲ್ಲಿ ೨೮ ಕುಟುಗಣ್ಣೆಯಲ್ಲಿ ೪೨ ಗುಡಿಸಲುಗಳು ನಾಶವಾಗಿವೆಯೆಂದು ತಿಳಿಯುತ್ತದೆ.

ಹೊಸದಿಲ್ಲಿ

ಮಹಾತ್ಮಾ ಗಾಂಧಿಜಿಯವರು ತಾ ೨೯ ರಂದು ಪ್ರಾರ್ಥನೋತ್ತರ ಭಾಷಣದಲ್ಲಿ ನಿಯಂತ್ರಣಗಳ ಬಗ್ಗೆ ಮಾತನಾಡುತ್ತ ಸಕ್ಕರೆಯ ಮೇಲಿನ ನಿಯಂತ್ರಣವನ್ನು ಕಿತ್ತ ಮೂಲಕ ಸಕ್ಕರೆಯ ದರ ಏರದಂತೆ ನೋಡಿಕೊಳ್ಳುವದು ಕಾರಖಾನೆಯ ಒಡೆಯರು ಮತ್ತು ವ್ಯಾಪಾರಿಗಳು ಇವರನ್ನೆ ಕೂಡಿರುವದೆಂದು ಹೇಳಿದರು.

ಪಂಡಿತ ಜವಾಹರಲಾಲರು ಗುರು ನಾನಕರ ಜಯಂತಿಯ ನಿಮಿತ್ತ ಶೀಖ ಸೇವಾದಲದವರು ಏರ್ಪಡಿಸಿದ ಸಭೆಯಲ್ಲಿ ಭಾಷಣ ಮಾಡುತ್ತ, ಹಿಂದುಸ್ತಾನ ಪಾಕಿಸ್ತಾನಗಳ ಸಂಸ್ಕೃತಿ ಇತಿಹಾಸ ಒಂದೇ ಆಗಿರುವದರಿಂದ ಅವು ರಾಜಕೀಯ ವಿಭಜನೆಯಿಂದ ಬದಲಾಗಲಾರವೆಂದೂ ಒಂದಿಲ್ಲೊಂದು ದಿನ ಅವು ಕೂಡಲೇಬೇಕೆಂದೂ ಹೇಳಿದರು.

ಇಲ್ಲಿ ಕಾಶ್ಮೀರ ಸಮಸ್ಯೆಯ ಬಗ್ಗೆ ಮಹತ್ವದ ಮಾತುಕತೆ ನಡೆದಿದ್ದು ಅದರಲ್ಲಿ ಹಿಂದುಸ್ತಾನ ಕಾಶ್ಮೀರ ಮತ್ತು ಪಾಕಿಸ್ತಾನದ ಮುಖ್ಯ ಪ್ರಧಾನರು ಭಾಗವಹಿಸಿದ್ದರು.

ಭಾಷಾನ್ವಯ ಪ್ರಾಂತ ರಚನೆಯ ಬಗ್ಗೆ ಕೇಂದ್ರ ಶಾಸನ ಸಭೆಯಲ್ಲಿ ಪಂ. ಜವಾಹರಲಾಲರು ಕೊಟ್ಟ ಹೇಳಿಕೆಯನ್ನು ಕುರಿತು ಶ್ರೀ. ರಂಗರಾವ ದಿವಾಕರರನ್ನು ಸಂದರ್ಶಿಸಲು ಅವರು, ಈ ವಿಷಯವನ್ನು ಪರಿಸ್ಥಿತಿ ಕೈಮೀರುವ ವರೆಗೆ ಮುಂದೂಡಬಾರದೆಂದೂ ಆ ಮುನ್ನವೇ ಸರಕಾರವು ಪ್ರಾಂತೀಕರಣದ ಪ್ರಶ್ನೆಯನ್ನು ಬಿಡಿಸುವ ಮುತ್ಸದ್ದಿತನವನ್ನು ತೋರಬೇಕೆಂದೂ ಹೇಳಿದರು.

ನಿರಾಶ್ರಿತರ ಪುನರ್ವಸತಿ ಶಾಖೆಯ ಮಂತ್ರಿಗಳಾದ ಶ್ರೀ. ಕೆ. ಸಿ. ನಿಯೋಗಿಯವರು, ಅಪಹೃತ ಸ್ತ್ರೀಯರನ್ನೂ ಬಲಾತ್ಕಾರದಿಂದ ಧರ್ಮಾಂತರ ಹೊಂದಿದವರನ್ನೂ ಹರಿಜನರನ್ನೂ ಪಾಕಿಸ್ತಾನದಿಂದ ಇನ್ನೂ ಪಾರುಮಾಡಬೇಕಾಗಿದೆಯೆಂದು ತಾ. ೨೯ ರಂದು ಕೇಂದ್ರ ಶಾಸನ ಸಭೆಯಲ್ಲಿ ನಿವೇದಿಸಿದರು.

ಹಿಂದುಸ್ತಾನ ಸರಕಾರದವರು ಉದ್ದ ಎಳೆಯ ಹತ್ತಿಯ ನಿರ್ಯಾತವನ್ನು ಪ್ರತಿಬಂಧಿಸಿದ್ದಾರೆ. ಪಾಕಿಸ್ತಾನಕ್ಕೂ ಹತ್ತಿಯನ್ನು ಕಳಿಸಕೂಡದಂತೆ.

ನವಾಬ ಮೋಯಿನಜಂಗ, ಅಬ್ದುರ್ ರಹೀಮ ಮತ್ತು ಪಿಂಗಳೆ ವೆಂಕಟರಾಮರೆಡ್ಡಿ ಮೊದಲಾದ ಹೈದರಾಬಾದ ಶಿಷ್ಟಮಂಡಲವು ಒಪ್ಪಂದಕ್ಕೆ ನಿಜಾಮರ ಅಂಕಿತ ಪಡೆದು ತಾ. ೨೯ ರಂದು ಮುಂಜಾನೆ ಹೊಸದಿಲ್ಲಿಗೆ ಮರಳಿದರು. ಮತ್ತು ಹಿಂದುಸ್ತಾನ—ಹೈದರಾಬಾದ ಯಥಾಸ್ಥಿತಿ ಒಪ್ಪಂದಕ್ಕೆ ಇದೇ ದಿನ ಮಧ್ಯಾನ್ಹ ೧೨—೪೦ ಕ್ಕೆ ಸಹಿ ಹಾಕಲ್ಪಟ್ಟಿತು. ಗವರ್ನರ ಜನರಲ್ ಲಾರ್ಡ ಮೌಂಟಬ್ಯಾಟನರು ಹಿಂದುಸ್ತಾನದ ಪರವಾಗಿ ಅದಕ್ಕೆ ಅಂಕಿತವಿಟ್ಟರು.

ಶ್ರೀ. ಶೇಖ ಅಬ್ದುಲ್ಲಾರವರು ಅ. ಭಾ. ಸಂಸ್ಥಾನೀ ಪರಿಷತ್ತಿನ ಅಧ್ಯಕ್ಷರಿರುವದರಿಂದ ಹಿಂದುಸ್ತಾನದ ಮೂಲೆ ಮೂಲೆಗಳಿಂದ ಪ್ರಜಾಪರಿಷತ್ತಿನ ಕಾರ್ಯಕರ್ತರು ಬಂದು ಅವರನ್ನು ಕಂಡರು. ಕಾಶ್ಮೀರ ಜನತೆಯನ್ನು ಗುಲಾಮಗಿರಿಯಿಂದ ಪಾರುಮಾಡಿದ ಅಲ್ಲಿಯ ರಾಷ್ಟ್ರೀಯ ಶಕ್ತಿಗೇ ಬೆಂಬಲ ಕೊಟ್ಟು ಹಿಂದುಸ್ತಾನವನ್ನು ಬಲಪಡಿಸಬೇಕೆಂದೂ ಅವರು ಹೇಳಿದರು.

ಶೇಖ ಅಬ್ದುಲ್ಲಾರವರು ತಮ್ಮ ಗೌರವಾರ್ಥ ಏರ್ಪಡಿಸಲ್ಪಟ್ಟ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ, ಪಾಕಿಸ್ತಾನದ ಹೂಲಿಯನ್ನೆಬ್ಬಿಸಿ ಜಿನ್ನಾರು ಕೋಟ್ಯಂತರ ಮುಸಲ್ಮಾನರನ್ನ ಮೋಸಗೊಳಿಸಿದರೆಂದೂ ಕೋಟ್ಯಂತರ ಮುಸಲ್ಮಾನರು ಬಡತನದಲ್ಲಿ ನರಳುತ್ತಿರುವಂತೆ ಮಾಡಿದರೆಂದೂ ಲಕ್ಷಾಂತರ ಮುಸಲ್ಮಾನರು ಉಪವಾಸ ಸಾಯುವ ಪರಿಸ್ಥಿತಿ ತಂದರೆಂದೂ ಹೇಳಿ ಮುಸಲ್ಮಾನರಿಗೆ ಈ ದುರ್ದೆಶೆ ತರಲೆಂದೇ ಜಿನ್ನಾರು ಪಾಕಿಸ್ತಾನದ ಬೇಡಿಕೆ ಮುಂದಿಸಿದರೆಂದೆನ್ನಲು ಪರವಿಲ್ಲವೆಂದು ಅಭಿಪ್ರಾಯ ಪಟ್ಟರು.

ಶಿವಮೊಗ್ಗ ಗಲಭೆ ಸಂಬಂಧದಲ್ಲಿ ೫೪ ಜನರ ಮೇಲೆ ಖಟ್ಲೆ ದಾಖಲಾಗಿದೆ. ಸಂತೇಬೆನ್ನೂರಿನ ಗಲಭೆ ಸಂಬಂಧದಲ್ಲಿ ೨೯ ಜನರು ಬಂಧಿಸಲ್ಪಟ್ಟಿದ್ದಾರೆ.

ಹೈದರಾಬಾದ

ಇತ್ತಿಹಾದೂಲ್ ಮುಸಲ್ಮೀನ ಸಂಘದ ಕಚೇರಿಯ ಎದುರು ಸೇರಿದ ವಿದ್ಯಾರ್ಥಿಗಳ ಪ್ರಚಂಡ ಸಭೆಯಲ್ಲಿ ಹೈದರಾಬಾದ ಸ್ವಾತಂತ್ರ್ಯ ರಕ್ಷಣೆಗೆ ೫೦೦೦ ಮುಸ್ಲಿಂ ವಿದ್ಯಾರ್ಥಿಗಳು ೩ ಲೆ ಕಾಲೇಜುಗಳಿಗೆ ರಜಾ ಪಡೆಯಬೇಕೆಂದು ನಿರ್ಧರಿಸಿದರು.

ಹೈದರಾಬಾದದಲ್ಲಿಯ ಸಂಯುಕ್ತ ಕರ್ನಾಟಕದ ಸುದ್ದಿಗಾರರಾದ ಶ್ರೀ. ವೆಂಕಟೇಶ ಪೇಠಾರಿ ಅವರು ಸಂರಕ್ಷಣ ಕಾಯದೆಯನ್ವಯ ಬಂಧಿಸಲ್ಪಟ್ಟಿರುವರೆಂದು ಸುದ್ದಿ ಬಂದಿದೆ.

ಚಿತಾಪುರದಲ್ಲಿ ಗುಂಡ ಮುಸಲ್ಮಾನರು ಶಸ್ತ್ರಧಾರಿಗಳಾಗಿ ತಿರುಗುತ್ತಿದ್ದಾರೆ. ಅಧಿಕಾರಿಗಳು ಹಿಂದುಗಳ ಬಂದೂಕುಗಳನ್ನು ವಶಪಡಿಸಿಕೊಂಡು ಅವನ್ನು ಮುಸಲ್ಮಾನರಿಗೆ ಕೊಟ್ಟು ವಾತಾವರಣವನ್ನು ಇನ್ನೂ ಕೆಡಿಸತೊಡಗಿರುವರು.

ಶಾಲಾಶಾಖೆಯ ಮೊಹತಮೀಮರು ಗಂಗಾವತಿ ಶಾಲೆಗಳ ಮೇಲ್ವಿಚಾರಣೆಗೆ ಬಂದಾಗ ಶಸ್ತ್ರ ಧರಿಸಿಕೊಂಡಿದ್ದರು.

ಯಥಾಸ್ಥಿತ ಒಪ್ಪಂದಕ್ಕೆ ಇತ್ತೇಹಾದುಲ್ ಮುಸ್ಲೇಮಿನ ಅಧ್ಯಕ್ಷರರಾದ ರಜವಿಯವರು ಸಮಾಧಾನ ವ್ಯಕ್ತಮಾಡಿದ್ದಾರೆ.

ಹಿಂದೀ ಸಂಸ್ಥಾನ

ಪಶ್ಚಿಮ ಪಂಜಾಬದಿಂದ ಬಂದು ಪತಿಯಾಳಾ ಸಂಸ್ಥಾನದಲ್ಲಿ ನೆಲೆಸಿದ ಪ್ರತಿಯೊಬ್ಬನಿಗೂ ಪತಿಯಾಳಾದ ನಾಗರಿಕನಿಗಿರುವಷ್ಟೇ ಹಕ್ಕು ಬಾಧ್ಯತೆಗಳನ್ನು ಕೊಡಲಾಗುವದೆಂದು ಪತಿಯಾಳಾದ ಮಹಾರಾಜರು ಜೋರಾಹಾದಲ್ಲಿ ನೆರೆದ ೧೫ ಸಾವಿರ ಶೀಖ ಮತ್ತು ಹಿಂದುಗಳ ಸಭೆಯನ್ನು ದ್ದೇಶಿಸಿ ಹೇಳಿದರು.

ಕೊಲ್ಹಾಪೂರ ಸಂಸ್ಥಾನದಲ್ಲಿ ಹೊಣೆಗಾರ ಸರಕಾರ ಸ್ಥಾಪನೆಗಾಗಿ ನಡೆದ ಹೋರಾಟದಲ್ಲಿ ಪ್ರಾಣಕೊಟ್ಟವರ ಕುಟುಂಬಗಳಿಗೆ ಮಾಸಿಕ ಪಿಂಚಣಿಯನ್ನು ಕೊಡಬೇಕೆಂದು ಕೊಲ್ಹಾಪೂರದ ಸರಕಾರವು ವಿಧಿಸಿದೆಯೆಂದು ತಿಳಿಯುತ್ತದೆ.

ಕಾಶ್ಮೀರ ಸಂಸ್ಥಾನ ಸೈನ್ಯವು ಮೀರಪುರ ಪಟ್ಟಣವನ್ನು ತ್ಯಜಿಸಿದೆಯೆಂದು ಅ. ಪ್ರ. ದ ವಿಶೇಷ ಸುದ್ದಿಗಾರನು ಬರೆಯುತ್ತಾನೆ.

ರಾಜಕೋಟದ ಠಾಕೂರ ಸಾಹೇಬರು, ಸಂಸ್ಥಾನದ ಅಲ್ಪಸಂಖ್ಯಾಕರಿಗೆ ಎಲ್ಲ ಹಕ್ಕು ಬಾಧ್ಯತೆಗಳನ್ನು ಕೊಡುವದಾಗಿ ಸಾರ್ವಜನಿಕ ಭಾಷಣ ಮಾಡುತ್ತ ತಾ. ೨೮ ರಂದು ಆಶ್ವಾಸನ ಕೊಟ್ಟರು.

ಕಾಶ್ಮೀರ ಮತ್ತು ಹಿಂದುಸ್ತಾನ

ದ್ರಾವಿಡ ಭಾಗಗಳಾದ ಆಂಧ್ರ, ಕರ್ನಾಟಕ ಮತ್ತು ತಮಿಳುನಾಡುಗಳಂತೆಯೇ ಕಾಶ್ಮೀರ ನಾಡವೂ ಭಾರತದ ಭಾಗವಾಗಿದೆ. 'ರಾಜತರಂಗಿಣಿ' ಎಂಬ ಕಲ್ಹಣನ ಬಹು ಮಹತ್ವದ ಇತಿಹಾಸಗ್ರಂಥವು ಇದನ್ನು ಸರಿಯಾಗಿ ಓದಿಸುತ್ತದೆ. ಇತಿಹಾಸಕಾಲದ ಪೂರ್ವದಲ್ಲಿ ದ್ರಾವಿಡರು ಕಾಶ್ಮೀರದಲ್ಲಿ ನೆಲಸಿದ್ದರು. ಕಾಶ್ಮೀರದ ಹಿರ್ಷ ಅರಸು, ಕರ್ನಾಟಕದವರ ದೇವಭಾಷೆಯನ್ನು ಅನುಕರಿಸಲು ತನ್ನ ಪ್ರಜೆಗಳಿಗೆ ಪ್ರೋತ್ಸಾಹಿಸಿದನು ಮತ್ತು ಕರ್ನಾಟಕಕ್ಕೆ ಈ ಬಗ್ಗೆ ತನ್ನ ಪಡೆದೆಂದು ತನ್ನ ಮಂಡಲ ಕಳುಹಿಸಿದನು. ಅಶ್ವಘೋಷನು ಕಾಶ್ಮೀರದಲ್ಲಿ ಬೌದ್ಧಮತದ ಪ್ರಸಾರ ಮಾಡಿದನು. ಕರ್ನಾಟಕರ್ದೂ ಆಗಿ ಬಂದ ಒಂದು ಹಳೆಯ ಪರಂಪರೆಯು, ಶ್ರೀನಗರದ ಹತ್ತಿರ ಶಂಕರಾಚಾರ್ಯರು ತಂಗಿತರ ವಿಷ ಪ್ರಯೋಗದಿಂದ ದೇಹಬಿಟ್ಟರೆಂದು ತಿಳಿಸುತ್ತದೆ. ಶ್ರೀನಗರದಲ್ಲಿ ಶ್ರೀರಾಮಾನುಜಾಚಾರ್ಯರು ಒಂದು ಅಮೋಘವಾದ ಬ್ರಹ್ಮಸೂತ್ರಭಾಷ್ಯವನ್ನು ಶೋಧಿಸಿತೆಗೆದರು. ಈ ಗ್ರಂಥದ ಮೂಲಕವೇ ಅವರು ಸ್ಫೂರ್ತಿ ಪಡೆದು ತಮ್ಮ ಅಮೌಲ್ಯವಾದ ಶ್ರೀಭಾಷ್ಯವನ್ನು ರಚಿಸಿದರು ಹಾಗೂ ವಿಶಿಷ್ಟಾದ್ವೈತದ ತತ್ವವನ್ನು ಪ್ರತಿಪಾದಿಸಿದರು. ಇಂದು ಅಸ್ತಿತ್ವದಲ್ಲಿದ್ದ ಇಬ್ಬಗೆಯ ಶೈವಪಂಥಗಳು ಕಾಶ್ಮೀರದಲ್ಲಿಯೂ ತಮಿಳುನಾಡಿನಲ್ಲಿಯೂ ಇರುವವು. ಈ ಎಲ್ಲ ಅಂಶಗಳೂ ಕಾಶ್ಮೀರವು ಭಾರತದ ಅಂತರಂಗವೆಂದೂ ಮೂರು ಬದಿಗೆ ಸಮುದ್ರಗಳಿಂದ ಒಂದು ಬದಿಗೆ ಹಿಮಾಲಯದಿಂದ ಸುತ್ತುವರಿದ ದೇಶವೆಂಬದಾಗಿದ್ದ ಪ್ರಾಚೀನ ಮತ್ತು ಪರಂಪರಾಗತ ವ್ಯಾಖ್ಯೆಗನುಸರಿಸಿ ಅದು ಭಾರತದ ೫೨ ವಿಭಾಗಗಳಲ್ಲಿ ಒಂದೆಂದೂ ಖಚಿತವಾಗಿ ತೋರಿಸಿಕೊಡುತ್ತವೆ. ಆದ್ದರಿಂದ ಕಾಶ್ಮೀರಕೆ ಪೆಟ್ಟು ತಗಲಿದರೆ ಭಾರತದ ಸುರಕ್ಷಿತತೆಗೆ [illegible] ಭಂಗ ಬಾರದಿರದು.

ಪಾಕಿಸ್ತಾನ

ಬ್ಯಾ. ಜಿನ್ನಾರು ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದಾರೆಂದು ಪಸ್ಸಿದ ಸುದ್ದಿಗಳು ನಿರಾಧಾರವಾದವು. ಕೆಲಸದ [illegible]ದಿಂದ ಅವರಿಗೆ ಮೂರು ದಿನ ಸ್ವಲ್ಪ ಜ್ವರ ಬಂದಿತ್ತೆಂಬುದಾಗಿ ಪ್ರಕಟನೆ ಹೊರಟಿದೆ. ಅವರೂ ಅವರಿಗೆ ಕಾಯಿದೆ.

ಸಿಂಧದಿಂದ ಪದಾರ್ಥಗಳ ನಿರ್ಯಾತ ತಡೆಯಲು ಸಿಂಧ ಸರಕಾರವು ಹೊರಡಿಸಿದ ಆರ್ಡರನ್ನಕ್ಕೆ ಸಿಂಧದ ಗವ್ಹರ್ನರರಾದ ಸರ್ ಗುಲಾಮ ಹುಸೇನ ಹಿದಾಯತುಲ್ಲಾ ಅವರು ಸಮ್ಮತಿ ಕೊಡಲು ನಿರಾಕರಿಸಿರುವರೆಂದು ಹೇಳಲಾಗುತ್ತಿದೆ. ಇದರಿಂದ ತೊಡಕಿನ ಪರಿಸ್ಥಿತಿ ಉಂಟಾಗಿರುವದು.

ಸಿಂಧ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಚೋಯಿತರಾಮ ಗಿಡ್ವಾನಿಯವರು ಡಾ. ಅಂಬೇಡಕರರಿಗೆ ಒಂದು ತಂತಿ ಕಳಿಸಿ ಪಾಕಿಸ್ತಾನದಲ್ಲಿಯ ಹರಿಜನರು ಹಿಂದುಸ್ತಾನಕ್ಕೆ ಹೊರಟು ಬರಲು ಬಯಸುತ್ತಿದ್ದು ಹಿಂದುಸ್ತಾನ ಸರಕಾರವು ಈ ಪ್ರಶ್ನೆಯನ್ನು ಕೈಯಲ್ಲಿ ತೆಗೆದುಕೊಂಡು ಅವರ ಮಾರ್ಗದಲ್ಲಿ ಸಿಂಧ ಸರಕಾರವು ಆರ್ಡರನ್ನ ಮೊದಲಾದವುಗಳಿಂದ ಒಡ್ಡಿದ ಅಡಚಣೆಗಳನ್ನು ದೂರ ಮಾಡಬೇಕೆಂದು ಕೇಳಿಕೊಂಡಿದ್ದಾರೆ.

ಧಾರವಾಡ

ಮುಳಗುಂದದಲ್ಲಿ ಗೋದಿ ಬೆಳೆಗಳು ಪಿಡುಗಿ ಹತ್ತಿ ನಾಶವಾಗಹತ್ತಿವೆ.

ಧಾರವಾಡ ಜಿಲ್ಹೆಯಲ್ಲಿ ಮದ್ಯಪಾನ ನಿರೋಧ ವನ್ನು ಬೇಗ ಜಾರಿಯಲ್ಲಿ ತರಬೇಕು. ಮಾಧ್ಯಮಿಕ ಶಾಲೆಗಳಲ್ಲಿಯ ಹರಿಜನ ವಿದ್ಯಾರ್ಥಿ ವಿದ್ಯಾರ್ಥಿನಿಯರ ಫೀ ಪೂರ್ಣ ಮಾಫಿ ಮಾಡ ಬೇಕು, ವಿದ್ಯಾರ್ಥಿ ವೇತನದ ಏರ್ಪಾಡು ಮಾಡ ಬೇಕು ಎಂಬ ಮುಂತಾಗಿ ಗೊತ್ತುವಳಿ ಧಾರವಾಡ ಹರಿಜನ ಹಿತೈಷಿ ಮಂಡಳದ ವ್ಯವಸ್ಥಾಪಕ ಸಮಿತಿಯ ಸಭೆಯಲ್ಲಿ ಸ್ವೀಕೃತವಾದವು.

ಹಳೇ ಹುಬ್ಬಳ್ಳಿಗೆ ಪ್ರತ್ಯೇಕ ಮುನಿಸಿಪಾಲಿಟಿ ಯನ್ನು ಕೊಡಬೇಕೆಂದು ಅಲ್ಲಿನ ನಿವಾಸಿಗಳು ಸರಕಾರಕ್ಕೆ ಕೇಳಿಕೊಂಡಿದ್ದಾರಷ್ಟೆ. ಈ ವಿಷಯವನ್ನು ವಿಚಾರಿಸಬೇಕೆಂದು ಈಗ ಹುಬ್ಬಳ್ಳಿ ಮುನಿಸಿಪಾಲಿಟಿಗೆ ಸರಕಾರದವರಿಂದ ಬರೆದು ಬಂದಿದೆ. ಹುಬ್ಬಳ್ಳಿ ಮುನಿಸಿಪಾಲಿಟಿಯವರು ಈ ವಿಷಯವನ್ನು ಸಹಾನುಭೂತಿಯಿಂದ ವಿಚಾರಿಸಬೇಕೆಂದೂ ಹಳೆ ಹುಬ್ಬಳ್ಳಿಯ ನಾಗರಿಕರು ತಮ್ಮ ಬೇಡಿಕೆಯನ್ನು ಸಂಘಟಿತ ರೀತಿಯಿಂದ ಮುಂದೆ ಮಾಡಬೇಕೆಂದೂ ಹಳೆ ಹುಬ್ಬಳ್ಳಿ ಮುನಿಸಿಪಾಲಿಟಿಯ ಕಾರ್ಯದರ್ಶಿಗಳು ಬಿನ್ನವಿಸುತ್ತಾರೆ.

ಹವಾನಾದಲ್ಲಿ ಕೂಡಿದ ಅಂತರ್‌ರಾಷ್ಟ್ರೀಯ ವಾಣಿಜ್ಯ ಪರಿಷತ್ತಿನ ಸದಸ್ಯರಾದ ಶ್ರೀ ದ. ಪ. ಕರಮರಕರರು ಹವಾನಾಕ್ಕೆ ಹೋಗುವದರ ಸಲುವಾಗಿ ೩ ನೇ ತಾರೀಕು ಮೇಲಗಾಡಿಯಿಂದ ಧಾರವಾಡದಿಂದ ಮುಂಬಯಿಗೆ ಹೋದರು. ೬ ನೇ ತಾರೀಕು ಅವರು ಮುಂಬಯಿಯಿಂದ ವಿಮಾನ ಮಾರ್ಗವಾಗಿ ಹವಾನಾಕ್ಕೆ ಹೋಗುವರು. ಧಾರವಾಡ ಸ್ಟೇಶನದಲ್ಲಿ ಅನೇಕ ಆಪ್ತಮಿತ್ರರು ಶ್ರೀ ಕರಮರಕರರನ್ನು ತಮ್ಮ ಶುಭಾಶಯದೊಂದಿಗೆ ಬೀಳ್ಕೊಟ್ಟರು.

ಮಾನಶೂರ ವೀರಪ್ಪ ಬಸರಿಗಿಡದ ಇವರು ಹುಬ್ಬಳ್ಳಿಯಲ್ಲಿಯ ಪೋಲಿಟೆಕ್ನಿಕ್ ಸ್ಕೂಲಿಗೆ ೫೫೫೫೫ ರೂಪಾಯಿಗಳನ್ನು ಕೊಟ್ಟದ್ದಕ್ಕಾಗಿ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಯವರು ಶ್ರೀ ಭೂಮರಡ್ಡಿಯವರ ಅಧ್ಯಕ್ಷತೆಯಲ್ಲಿ ೧ ನೇ ತಾರೀಕಿನ ದಿವಸ ಮಾನಪತ್ರವನ್ನು ಸಮರ್ಪಿಸಿದರು. ಆ ಕಾಲಕ್ಕೆ ಪ್ರಿನ್ಸಿಪಾಲ ಪರಮಶಿವಯ್ಯನವರು ಭಾಷಣ ಮಾಡಿದರು. ಶ್ರೀ ಎಚ್. ಎಫ್. ಕಟ್ಟೀಮನಿಯವರು ಮಾನಪತ್ರವನ್ನು ಓದಿದರು.

ಬೆಳಗಾವಿ

ಇಂಗ್ಲಂಡಿಗೆ ಮರಳಿ ಹೋಗಲಿರುವ ಬೆಳಗಾವಿಯ ಮರಾಠಾ ಲಾ ಇಟ ಇನ್‌ಫಂಟೆರಿಯ ಕಮಾಂಡರರಾದ ಕರ್ನಲ್ ಗ್ರಿಫಿಥ್‌ರ ಆಮಂತ್ರಣದ ಮೇರೆಗೆ ಮುಂಬಯಿ ಮುಖ್ಯ ಮಂತ್ರಿಗಳಾದ ಶ್ರೀ ಬಿ. ಜಿ. ಖೇರರು ೨೫ ಕ್ಕೆ ಬೆಳಗಾವಿಗೆ ಬಂದರು. ಸೈನಿಕರ ಶಿಸ್ತು ಚಟುವಟಿಕೆಗಳನ್ನು ಪರೀಕ್ಷಿಸಿ ಖೇರರು ಅವರನ್ನುದ್ದೇಶಿಸಿ ಭಾಷಣ ಮಾಡಿ ಹಿಂದಿನ ಶೌರ್ಯಪರಂಪರೆಗಳನ್ನು ಕಾಯ್ದುಕೊಳ್ಳಬೇಕೆಂದು ಉಪದೇಶಿಸಿದರು.

ಮಹಾತ್ಮಾ ಗಾಂಧಿಯವರ ಅಹಿಂಸಾ ಯೋಜನೆಗೆ ಅಂಟಿಕೊಂಡಿರುವ ವರೆಗೆ ಹಿಂದು ಸ್ಥಾನವು ಪರರ ಮೇಲೆ ಆಕ್ರಮಣ ಮಾಡಲಾರದು ಹಾಗು ಅನವಶ್ಯಕವಾಗಿ ಹಿಂಸೆಯನ್ನುಂಟು ಮಾಡಲಾರದು. ಆದರೆ ಅನ್ಯಾಯವನ್ನು ಹತ್ತಿಕ್ಕಿ ದುರ್ಬಲರನ್ನು ರಕ್ಷಿಸುವಲ್ಲಿ ಹಾಗು ಪರಚಕ್ರದಾಳಿಯನ್ನು ಪ್ರತಿಭಟಿಸುವಲ್ಲಿ ಪಶ್ಚಿರಿಯಲು ಅದು ಎಂದಿಗೂ ಹಿಂದೆಮುಂದೆ ನೋಡಲಾರದು. ಅದರಿಂದ ಇಂದಿನ ಜಗತ್ತಿನಲ್ಲಿ ಬಲವಾದ ಮತ್ತು ಸುಸಂಘಟಿತವಾದ ಸೈನ್ಯವನ್ನು ಹೊಂದುವ ಅವಶ್ಯ ಎಂದೂ ಅವರು ಹೇಳಿದರು.

ವಿಜಾಪುರ

ಕೊಲ್ಹಾಪುರದಲ್ಲಿ ಸೇರಿ ಹೊಡೆದ ಬೈಲ ಜಕ್ಕಾಪುರದನ್ನು ಸುಲಿಯಲು ೧೪ ನೇ ತಾರೀಕು ದರೋಡೆಗಾರರ ಒಂದು ತಂಡವು ರಾತ್ರಿ ೧೨ ರ ಸುಮಾರಕ್ಕೆ ಮುತ್ತಿಗೆ ಹಾಕಿ ಹೆಂಗಸರನ್ನೂ ಗಂಡಸರನ್ನೂ ಹೊಡೆದು ಸುಲಿಗೆ ನಡೆಸಿತು. ಹಾಹಾಕಾರವನ್ನು ಕೇಳಿ ಊರೊಳಗಿನ ಜನ ನೆರೆದರು. ಶ್ರೀ ಅಪ್ಪಪ್ಪ ದೇಸಾಯರು ಜನರೊಂದಿಗೆ ದರೋಡೆಗಾರರೊಡನೆ ಕಾದಾಡಿ ಅವರನ್ನು ಹೊಡೆದೋಡಿಸಿದರು. ಅವರು ಸಾಮಾನುಗಳನ್ನು ಒಗೆದು ಹೋಗಿರುವರು. ಬಡಿದಾಟದಲ್ಲಿ ಊರೊಳಗಿನ ೫ ಜನರಿಗೆ ಪೆಟ್ಟು ಬಿದ್ದಿದೆ.

ಕರಾಡಗಿಯಿಂದ ಬಂಡಿಯಲ್ಲಿ ಹತ್ತಿಕಟ್ಟಿಗೆ ಹಾಕ್ಕಿ ಹೊರಟ ತರುತ್ತಿದ್ದ ೨ ಚೀಲ ಜೋಳವನ್ನು ... ಹೋಲೀಸರಾದ ಗಾಂಧ ಭೀಮು ... ದಾರಿಯಲ್ಲಿಯ ... ವಾಗಿರುವಲು. ... ಕರಬಸಪ್ಪ ಇವರದು ಇವೆಯಂತೆ.

ಕರ್ನಾಟಕ

ಬಳ್ಳಾರಿ

ಕಳೆದ ೨೨ ಕ್ಕೆ ಬಳ್ಳಾರಿಯ ಶ್ರೀ ಕರಬಸಪ್ಪನವರು ತಮ್ಮ ಪತ್ನಿ ಶ್ರೀಮತಿ ಸುಮಂಗಲಮ್ಮನ ವರೊಡನೆ ಕಾರಿನಲ್ಲಿ ಶ್ರೀ ಕುಮಾರಸ್ವಾಮಿ ರಥೋತ್ಸವಕ್ಕೆ ಹೊರಟಾಗ ಮೋಟರ ಮೇಲಿದ್ದ ರಾಷ್ಟ್ರಧ್ವಜವನ್ನು ಸೊಂಡೂರ ಅಧಿಕಾರಿಗಳು ತೆಗೆದೊಗೆದರೆಂದೂ ಈ ಸಂಗತಿಯನ್ನು ಹಿಂದುಸ್ಥಾನ ಸರಕಾರಕ್ಕೆ ತಿಳಿಸಲಾಗಿದೆಯೆಂದೂ ಓರ್ವ ಸುದ್ದಿಗಾರರು ತಿಳಿಸುತ್ತಾರೆ.

ಮದ್ರಾಸ ಸರಕಾರದ ಬಟ್ಟೆ ನಿಯಂತ್ರಣಾಧಿಕಾರಿಗಳು ಹೊಸದಾಗಿ ಕೊಟ್ಟ ಬಟ್ಟೆ ಲೈಸನ್ಸುಗಳನ್ನು ರದ್ದು ಮಾಡಬೇಕೆಂಬಾಜ್ಞೆಯನ್ನು ಸದ್ಯಕ್ಕೆ ಜಾರಿಯಲ್ಲಿ ತರಬಾರದೆಂದು ಸರಕಾರದಿಂದ ಬರೆದು ಬಂದಿರುವದಾಗಿ ತಿಳಿಯುತ್ತದೆ.

ಹೈದರಾಬಾದ ಗಡಿಗ್ರಾಮಗಳವರಿಗೆ ಕೊಟ್ಟ ಶಸ್ತ್ರಾಸ್ತ್ರಗಳ ಲೈಸೆನ್ಸುಗಳು ಎಲ್ಲೂ ಶಸ್ತ್ರಾಸ್ತ್ರಗಳು ದೊರೆಯದೆ ನಿರರ್ಥಕವಾಗಿರುವ ಕಾರಣ ಸರಕಾರವು ಸಹಾಯ ಮಾಡಬೇಕೆಂದು ಕೇಳಲಾಗಿದೆ.

ದಕ್ಷಿಣ ಕನ್ನಡ

ಉಡುಪಿಯ ತಾಲೂಕ ಹಿರಿಯ ರೈತ ಸಂಘದ ಆಶ್ರಯದಲ್ಲಿ ೨೦ ಕ್ಕೆ ಶ್ರೀ ಎಂ. ಡಿ. ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ರೈತರು ಸಭೆಸೇರಿ ಸಂಘದ ಮೂಲಕ ಎಲ್ಲ ರೈತರು ಪರಿಹಾರ ಪಡೆಯಬೇಕೆಂಬಾಶಯದ ಭಾಷಣಗಳಾದವು. ಕೆಲವು ವರ್ಗದಾರರು ಗೇಣಿದಾರರನ್ನು ಒಕ್ಕಲೆಬ್ಬಿಸಲು ಕೋರ್ಟಿನಲ್ಲಿ ಮಾಡಿದ ದಾವೆಗಳನ್ನು ತಡೆಹಿಡಿಯಲು ಮದ್ರಾಸ ಸರಕಾರಕ್ಕೆ ಕೇಳುವದು ನ್ಯಾಯವಾದ ಗೇಣಿ ಕೊಡಿಸಲು ಸಂಘವು ಸಿದ್ಧವಿದೆಯೆಂದು ಸರಕಾರದ ಗಮನಕ್ಕೆ ತರುವದು ಮೊದಲಾದ ನಿರ್ಣಯಗಳು ಸ್ವೀಕೃತವಾಗಿ ಸಭೆ ಮುಗಿಯಿತು.

ಸುಬ್ರಹ್ಮಣ್ಯದಲ್ಲಿ ಶ್ರೀ ಕುಕ್ಕೆ ಸುಬ್ರಹ್ಮಣ್ಯಂ ದೇವಸ್ಥಾನದಲ್ಲಿ ಚಂಪಾಷಷ್ಠಿ ಮಹೋತ್ಸವ ಇದೇ ೯ ನೇ ತಾರೀಕಿನಿಂದ ೧೯ ನೇ ತಾರೀಕು ಪೂರ್ತಿ ನಡೆಯುತ್ತದೆ. ಭಕ್ತ ಮಹಾಜನರೆಲ್ಲ ಭಾಗವಹಿಸಬೇಕಾಗಿ ದೇವಾಲಯದ ಅಧಿಕಾರಿಗಳು ತಿಳಿಸುತ್ತಾರೆ.

ಕರ್ನಾಟಕ ವಿಶ್ವವಿದ್ಯಾಲಯ ಸದಸ್ಯರು ಮಂಗಳೂರಿಗೆ ೨೮ ಕ್ಕೆ ಬಂದಿದ್ದರು. ಅಂದು ಸಾಯಂಕಾಲ ೬ ಕ್ಕೆ ಸ್ಥಳೀಯ ಬೆಸಂಟ ಬಾಲಿಕಾ ಪಾಠಶಾಲೆಯಲ್ಲಿ ಸ್ವಾಗತ ಸಭೆ ಜರುಗಿತು. ಲಘು ಫಲಾಹಾರದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಬಂದ ಸಮಿತಿಯ ಸದಸ್ಯರ ಪರಿಚಯ ಮಾಡಿಕೊಟ್ಟು ಈ ಕಾರ್ಯದಲ್ಲಿ ಮಂಗಳೂರಿನ ಪೂರ್ಣ ಬೆಂಬಲವಿದೆಯೆಂದು ಹೇಳಿದರು. ಅತಿಥಿಗಳ ಪರವಾಗಿ ಶ್ರೀ ಬಸವನಾಳರು ಮಾತಾಡುತ್ತ ಕರ್ನಾಟಕ ವಿಶ್ವವಿದ್ಯಾಲಯದ ಗೊತ್ತುಗುರಿಗಳನ್ನು ವಿವೇಚಿಸಿದರು. ಶ್ರೀ ಜಿನರಾಜ ಹೆಗಡೆಯವರು ಸಮಿತಿಯ ಕಾರ್ಯ ಎಂತು ಸಾಗಿದೆಯೆಂಬುದನ್ನು ಹೇಳಿದರು. ಸಮಿತಿಯವರು ಶಿಕ್ಷಣ ತಜ್ಞರ ಅಭಿಪ್ರಾಯವನ್ನು ಸಂಗ್ರಹಿಸಿದರು.

ಮಂಗಳೂರು ನಗರ ಸಭೆಯ ಸಭೆ ಸೇರಿ ನೀರಿನ ಸರಬರಾಯಿಯ ಬಗ್ಗೆ ನಿರ್ಣಯ ಸ್ವೀಕೃತವಾಯಿತು. ಗುರುಪುರದಿಂದ ನೀರುತರುವದಕ್ಕಾಗಿಬರುವ ವೆಚ್ಚಮುಂತಾದ್ದನ್ನು ಸರಕಾರದೊಡನೆ ವಿಚಾರಿಸಿ ಕ್ರಮ ಕೈಕೊಳ್ಳಬೇಕೆಂದು ಗೊತ್ತಾಯಿತು. ಸುಮಾರು ೪೮ ಕೋಟಿ ರೂಪಾಯಿ ವೆಚ್ಚಬರುವದೆಂದು ಅಂದಾಜು.

ಮಂಗಳೂರು ನಗರ ಸಭೆಯ ಸಭೆ ಸೇರಿ ಮುನಿಸಿಪಾಲಿಟಿಯ ಎಲ್ಲ ವರ್ಗದವರಿಗೆ ಸರಕಾರಿ ಸಂಬಳದ ದರದಲ್ಲಿ ಸಂಬಳ ತುಟ್ಟಿ ಭತ್ತೆ ಮುಂತಾದ್ದನ್ನು ೧-೧-೪೭ ರಿಂದ ಕೊಡಬೇಕೆನ್ನುವ ಗೊತ್ತುವಳಿಯು ಸ್ವೀಕೃತವಾಯಿತು. ಅಲ್ಲದೆ ಬಿಲ್ ಕಲೆಕ್ಟರರಿಗೆ ಒಂದು ತಿಂಗಳ ಸಂಬಳದ ಬೋನಸು ಕೊಡುವದೆಂದು ನಿರ್ಣಯವಾಯಿತು.

ಜಿಲ್ಲ ಮಾರಿದರೆಂದು ಜಿಲ್ಲವನ್ನು ಜಪ್ತಮಾಡಿ ಹಂಚಲಾಗಿ ಮಾಡಿರುವರು. ಒಬ್ಬರಲ್ಲಿ ಕಡ್ಡಿ ಪೆಟ್ಟಿಗೆಗಳು ಸಿಕ್ಕವಂತೆ.

ಹೈದ್ರಾಬಾದ ಸಂಸ್ಥಾನದಿಂದ ಸುಮಾರು ೧೩೦ ...

ಉತ್ತರ ಕನ್ನಡ

ಬಾಸಗೋಡ ಕಿರಿಯರ ಕೂಟದವರು ೨೭ ಕ್ಕೆ ಮಾಣೇಶ್ವರ ನಾಯಕ ತೂಕಣವರ ಇವರ ಅಧ್ಯಕ್ಷತೆಯಲ್ಲಿ ಮನರಂಜನೆಯ ಕಾರ್ಯಕ್ರಮವನ್ನು ಮಾಡಿ ತೋರಿಸಿದರು. ಏಕಾಂಕ ನಾಟಕಗಳು ಪ್ರದರ್ಶಿಸಲ್ಪಟ್ಟವು.

ಧಾರವಾಡದಿಂದ ಕಾರವಾರಕ್ಕೆ ಹೋಗುತ್ತಿದ್ದ ಬಸ್ಸೊಂದು ಉರುಳಿ ಬಿದ್ದದ್ದರಿಂದ ಕಂಡಕ್ಟರನನ್ನೊಳಗೊಂಡು ನಾಲ್ಕು ಜನರಿಗೆ ಗಾಯಗಳಾಗಿವೆ. ಕಳೆದ ಶನಿವಾರ ಕಾರವಾರದಿಂದ ೨೦ ಮೈಲು ದೂರದಲ್ಲಿ ಈ ಅಪಘಾತಸಂಭವಿಸಿದ್ದು ಗಾಯಾಳುಗಳೆಲ್ಲ ಕಾರವಾರ ಆಸ್ಪತ್ರೆಯಲ್ಲಿ ಉಪಚಾರ ಹೊಂದುತ್ತಿರುವರು.

ಕರ್ನಾಟಕ ಮಾಧ್ಯಮಿಕ ಶಿಕ್ಷಕರ ಸಮ್ಮೇಲನ ಶಿರ್ಶಿಯಲ್ಲಿ ಡಿಶೆಂಬರ ೨೬—೨೭ ಕ್ಕೆ ಕೂಡುವದಿದ್ದು ಶ್ರೀ ಆರ್. ಎಸ್. ಹುಕ್ಕೇರಿಕರರು ಎಂ. ಎಲ್. ಎ. ಇವರು ಅಧ್ಯಕ್ಷರಾಗಲಿರುವರು. ಈ ಬಗ್ಗೆ ಸ್ವಾಗತ ಸಮಿತಿಯು ಶ್ರೀ ಮಾರಿಕಾಂಬಾ ಹಾಯಸ್ಕೂಲಿನ ಹೆಡ್‌ಮಾಸ್ತರ ಶ್ರೀ ರಾಘವೇಂದ್ರರಾಯರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಗಿದೆ. ಉಳಿದ ಸಮಿತಿಗಳು ಸ್ಥಾಪಿತವಾಗಿವೆ. ಇದೇ ಕಾಲಕ್ಕೆ ಹೆಡ್‌ಮಾಸ್ತರರ ಸಮ್ಮೇಲನವೂ ನಡೆಯುವದೆಂದು ತಿಳಿಯುತ್ತದೆ.

ಕನ್ನಡ ಸಂಸ್ಥಾನ

ನಿಲುಗಲ್ಲಕ್ಕೆ ೨೯ ಕ್ಕೆ ೫೦ ಜನ ಮಿಲಿಟರಿ ಮತ್ತು ಇನ್ನೂರು ಜನ ಸಶಸ್ತ್ರ ಮುಸಲ್ಮಾನರು ಬಂದು ಹ್ಯಾಮವ್ವನಗುಡಿ ಮತ್ತು ಬಸವಣ್ಣನ ಗುಡಿಗಳನ್ನು ಹೊಕ್ಕು ಮೂರ್ತಿಗಳನ್ನು ಒಡೆದು ಗುಡಿಗಳನ್ನು ನೆಲಸಮ ಮಾಡಿದ್ದಾರೆ. ಅಲ್ಲದೆ ೧೫ ಸಾವಿರ ರೂಪಾಯಿ ಬೆಲೆ ಬಾಳುವ ತೇರನ್ನು ನಾಶಗೊಳಿಸಿದ್ದಲ್ಲದೆ ಇಬ್ಬರು ಹಿಂದುಗಳ ಮನೆಗಳನ್ನು ಧ್ವಂಸಮಾಡಿದ್ದಾರೆ. ಇದಲ್ಲದೆ ಸಾವಿರಾರು ಚೀಲ ಜೋಳದ ಬೆಳೆಯನ್ನೂ ನಾಲ್ಕೈದು ನೂರು ಚೀಲ ಭತ್ತದ ಬೆಳೆಯನ್ನೂ ತಮ್ಮ ವಶಪಡಿಸಿಕೊಂಡಿದ್ದಾರೆ.

ಹಾಸನದಲ್ಲಿ ೩೦ ನೇ ತಾರೀಕು ಓರ್ವ ಮುಸಲ್ಮಾನ ವಿದ್ಯಾರ್ಥಿಯು ಹಾಯಸ್ಕೂಲ ಬೈಲನಲ್ಲಿ ಬಂದೂಕಿನ ಗುಂಡಿನಿಂದ ಗಾಯಗೊಂಡು ಬಿದ್ದದ್ದು ಕಂಡುಬಂತು.

ಹೈದರಾಬಾದ ಸಂಸ್ಥಾನಕ್ಕೆ ಹೊಂದಿಕೊಂಡಿರುವ ಅಕ್ಕಲಕೋಟ ಕುರಂದವಾಡ ಸಂಸ್ಥಾನ ಪ್ರಜೆಗಳು ಸ್ವಾತಂತ್ರ್ಯ ರಕ್ಷಣೆಯ ಬಗ್ಗೆ ಸಂಸ್ಥಾನಿಕರು ಹಿಂದುಸ್ಥಾನ ಸರಕಾರಕ್ಕೆ ತಿಳಿಸಿದ್ದಾರೆ.

ಅರಸೀಕೆರೆ ತಾಲೂಕ ಕಾಂಗ್ರೆಸ ಕಮಿಟಿ ಸಭೆ ಸೇರಿ ಪ್ರತಿಯೊಂದು ಹೋಬಳಿ ಹಾಗು ಅರಸೀಕೆರೆ ಬಗ್ಗೆ ಆಹಾರ ಹಾಗು ಬಟ್ಟೆ ಹಂಚುವಿಕೆ ಲಂಚ ನಿರ್ಮೂಲನ ಮತ್ತು ಆಹಾರ ಧಾನ್ಯ ವಸೂಲ ಸಮಿತಿಗಳು ನಿರ್ಮಿಸಲ್ಪಟ್ಟವು.

ಶಿವಮೊಗ್ಗೆಯಲ್ಲಿ ಪ್ಲೇಗು ಪ್ರಾರಂಭವಾಗಿದೆ. ಮುನಸಿಪಾಲಟಿಯವರು ಸಾಯನೋಗ್ಯಾಸಿಂಗ ಮತ್ತು ಪ್ಲೈಲೀ ಚುಚ್ಚುವದು ಮೊದಲಾದನನ್ನು ಪ್ರಾರಂಭಿಸಿದ್ದಾರೆ,

---

ಬನಾರಸದಲ್ಲಿ ಹೊರನಾಡ ಕನ್ನಡಿಗರ ೩ನೇ ಸಮ್ಮೇಲನ

ಶ್ರೀ ದಿವಾಕರರ ಅಧ್ಯಕ್ಷತೆ

ಜಾನೇವಾರಿ ಮೂರನೇ ವಾರದಲ್ಲಿ

ಮುಂಬಯಿ ೧— ಜಾನೇವಾರಿ ಮೂರನೇವಾರದಲ್ಲಿ ಬನಾರಸದಲ್ಲಿ ಹೊರನಾಡ ಕನ್ನಡಿಗರ ಮೂರನೇ ಸಮ್ಮೇಲನವನ್ನು ಕನ್ನಡ ಸಂಘದ ಪರವಾಗಿ ಕೂಡಿಸಬೇಕೆಂದು ಗೊತ್ತಾಗಿದೆ. ಹಿಂದುಸ್ತಾನದ ಒರಿಯೋಲಗದ ಸದಸ್ಯರು, ಕರ್ನಾಟಕದ ಪ್ರಮುಖ ಮುಂದಾಳುಗಳೂ ಆದ ಶ್ರೀ ದಿವಾಕರ ರಂಗರಾಯ ರನ್ನು ಅಧ್ಯಕ್ಷತೆವಹಿಸಲು ಬಿನ್ನವಿಸಿಕೊಳ್ಳಲಾಗಿದೆ. ಕರ್ನಾಟಕದ ಹೊರಗೆ ಬೇರೆಬೇರೆ ಪ್ರಾಂತಗಳಲ್ಲಿ ವಾಸಿಸುತ್ತಿರುವ ಕನ್ನಡಿಗರು ಆಯಾ ಪ್ರಾಂತಗಳ ಜನರೊಡನೆ ಕೂಡಿಕೊಂಡು ತಮ್ಮ ಸಂಕಷ್ಟಗಳನ್ನು ನಿವಾರಿಸಿಕೊಳ್ಳಲಿಕ್ಕೆ ಪ್ರಯತ್ನಿಸುವದು ಅವಶ್ಯವಾಗಿದೆ. ಇದಕ್ಕಾಗಿಯೇ ಹೊರನಾಡ ಕನ್ನಡಿಗರ ಸಮ್ಮೇಲನ ...

ಬೆಂಗಳೂರು—ಮೈಸೂರು

ಕರ್ನಾಟಕ ಕಮ್ಯುನಿಸ್ಟ ಪಕ್ಷದ ಸಭೆ ಬೆಂಗಳೂರಿನಲ್ಲಿ ಒಂದು ವಾರದ ವರೆಗೆ ನಡೆದು ೨೬ಕ್ಕೆ ಮುಕ್ತಾಯವಾಯಿತು. ಸದ್ಯದ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆದು ಕೋಮುವಾರ ಶಾಂತಿ ಮತ್ತು ಪ್ರಜಾಪ್ರಭುತ್ವದ ಮುನ್ನಡೆಗಾಗಿ ನೆಹರು ಸರಕಾರದವರು ನಡೆಯಿಸಿದ ಹೋರಾಟಕ್ಕೆ ಪೂರ್ಣ ಬೆಂಬಲಕೊಡುವ ಗೊತ್ತುವಳಿ ಸ್ವೀಕೃತವಾಯಿತು. ಅರಾಷ್ಟ್ರೀಯ ಜಾತೀಯ ಬಂಡವಲುಗಾರ ಪ್ರತಿನಿಧಿಗಳಾದ ಭಾಭಾ, ಷಣ್ಮುಖಂ ಚೆಟ್ಟಿ, ಶ್ಯಾಮಪ್ರಸಾದ ಮೂಕರ್ಜಿ ಇವರನ್ನು ಮಂತ್ರಿಮಂಡಳದಿಂದ ತಳ್ಳಿ ಎಡಪಕ್ಷದವರನ್ನು ಸೇರಿಸಿಕೊಳ್ಳಬೇಕೆಂದು ಅಭಿಪ್ರಾಯ ಪಡಲಾಯಿತು. ಸಂಸ್ಥಾನವನ್ನೊಳಗೊಂಡು ಕರ್ನಾಟಕ ಪ್ರಾಂತರಚನೆಯನ್ನು ಮಾಡಬೇಕೆಂಬ ಗೊತ್ತುವಳಿಯೂ ಸ್ವೀಕೃತವಾಯಿತು.

೧೯೪೨ರ ಚಲೇಜಾವ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಕೆಲಸದಿಂದ ತೆಗೆಯಲ್ಪಟ್ಟ ಕೂಲಿಕಾರರಿಗೆ ಮತ್ತೆ ಅದೇ ಕೆಲಸವನ್ನು ಸಾಧ್ಯವಾದ ಮಟ್ಟಿಗೆ ಕೊಡಬೇಕೆಂದು ಮೈಸೂರು ಸರಕಾರವು ಆಜ್ಞಾಪಿಸಿದೆ. ಹೊಣೆಗಾರ ಸರಕಾರ ಸ್ಥಾಪನೆಯ ಸಂಬಂಧದಲ್ಲಿ ನಡೆದ ಕಾಂಗ್ರೆಸ ಚಳವಳಿಯಲ್ಲಿ ಭಾಗವಹಿಸಿ ಕೆಲಸ ಕಳೆದುಕೊಂಡವರಿಗೆ ಮತ್ತೆ ಕೆಲಸ ಕೊಡಲಾಗುವದು.

ಪ್ರಥಮ ವರ್ಗದ ವೈದ್ಯರಿಕರನ್ನು ತರಬೇತಿಗೊಳಿಸಲು (ಬೆಂಗಳೂರಿನಲ್ಲಿ ಶೀಘ್ರದಲ್ಲಿ ಒಂದು ಉದ್ಯಾನ ಕ್ಲಬ್ಬು ಸ್ಥಾಪಿತವಾಗುವದು.) ಹೊಸ ಸರಕಾರ ಈಗಾಗಲೇ ಈ ಯೋಜನೆಯ ವಿಚಾರ ನಡೆಸಿರುವದು. ಸಂರಕ್ಷಕ ಬಲಗಳನ್ನು ಬೆಳೆಸಲೂ ಅದು ಯೋಜಿಸಿದೆ.

ಹಿಂದುಸ್ತಾನ ಹೈದರಾಬಾದ

ಯಥಾಸ್ಥಿತಿ ಒಪ್ಪಂದ

(೪ ನೇ ಪುಟದಿಂದ)

ಮಾರ್ಗ ಹಿಡಿದು ಒಪ್ಪಂದಕ್ಕೆ ಬಂದಿದ್ದೇವೆ. ಈ ಒಪ್ಪಂದದಿಂದ ಕೇವಲ ಕೆಲವೊಂದು ಕರಾರುಗಳಿಗೆ ಒಪ್ಪಿಗೆಕೊಟ್ಟು ಅಂಕಿತ ಹಾಕುವದಷ್ಟೇ ಸಾಧಿಸಿರದೆ ಎರಡೂ ರಾಷ್ಟ್ರಗಳಲ್ಲಿ ಉಂಟಾಗಿದ್ದ ಒಂದು ಬಗೆಯ ತಿಕ್ಕಾಟ ಸಮೂಲ ನಾಶವಾಗಿದೆ. ನಾವು ಈ ಒಪ್ಪಂದಕ್ಕೆ ಬಾರದೇ ಹೋಗಿದ್ದರೆ ದೇಶದಾತ್ಯಂತ ಅನಿಷ್ಟಸಂಭವಿಸುತ್ತಿತ್ತು. ಒಪ್ಪಂದದ ಜೊತೆಗಿದ್ದ ಪತ್ರ ವ್ಯವಹಾರವು ಒಪ್ಪಂದದ ಒಂದು ಅಂಗವೆಂದು ಗ್ರಹಿಸದೆ ಅದರ ಅರ್ಥ ನಿರೂಪಣೆಯ ಸ್ವರೂಪದಲ್ಲಿ ಓದಬೇಕಾದುದು ಯೋಗ್ಯ.

ನಿರೀಕ್ಷೆ

ಅಂತೂ ಈ ಒಪ್ಪಂದದಿಂದ ಆದ ಪ್ರತಿಕ್ರಿಯೆಯನ್ನು ನಿರೀಕ್ಷಿಸಿದರೆ ಅದು ಅಷ್ಟೊಂದು ಸಮಾಧಾನಕರವಾಗಿಲ್ಲವೆಂದೇ ಹೇಳಬೇಕಾಗುತ್ತದೆ. ಈ ಬಗ್ಗೆ ಸರದಾರ ವಲ್ಲಭಭಾಯಿ ಪಟೇಲರು ಕೇಂದ್ರ ಶಾಸನ ಸಭೆಯಲ್ಲಿ ಮಾತನಾಡುತ್ತ, "ಸಂಸ್ಥಾನದ ರಾಜಕೀಯ ಸುಧಾರಣೆಗಳ ವಿಷಯವು ನಿಜಾಮರ ಚಿತ್ತವನ್ನೀಗ ಸೆಳೆದಿದೆ. ಈ ಬಗ್ಗೆ ಮತ್ತು ಹಿಂದೀ ಒಕ್ಕೂಟದಲ್ಲಿ ಸಂಸ್ಥಾನವು ಸೇರ್ಪಡೆ ಹೊಂದಬೇಕೆಂಬ ಬಗ್ಗೆ ಪ್ರಜಾಜನರ ಅಭಿಮತದಂತೆ ವರ್ತಿಸುವದು ಯೋಗ್ಯವೆಂಬ ಮಾತನ್ನು ನಿಜಾಮರು ಒಪ್ಪುವರೆಂದು ಆಶಿಸುತ್ತೇನೆ. ಸಂಸ್ಥಾನದಲ್ಲಿ ಪ್ರಜಾಭಿಪ್ರಾಯಕ್ಕೆ ಬೆಲೆಯದೊರಕುವ ಲಕ್ಷಣ ಎಲ್ಲೆಲ್ಲೂ ಕಂಡು ಬರುತ್ತದೆ. ನಿಜಾಮರು ಸಹ ತಮ್ಮ ಘನತೆಗೆ ಒಪ್ಪುವ ರೀತಿಯಲ್ಲಿ ಪ್ರಜಾಮತಕ್ಕೆ ತಲೆಬಾಗುವ ತತ್ವವನ್ನು ಅಂಗೀಕರಿಸಿ ಮಾರ್ಗದರ್ಶಕರಾಗುವರೆಂದು ನಾನು ಹಾರೈಸುತ್ತೇನೆ" ಎಂಬುದಾಗಿ ಉಸುರಿದ್ದಾರೆ. ನಿಜಾಮರು ಯಾರ ದುರಾಗ್ರಹಕ್ಕೂ ಸೊಪ್ಪು ಹಾಕದೆ ಬಹುಸಂಖ್ಯಾಕರ ಸಂಖ್ಯವನ್ನೂ ಅಭಿಮತವನ್ನೂ ಪರಿಗಣಿಸುವರೆಂದು ಆಶಿಸುವಾ.

ಮುಲ್ಕಿಯ ಶ್ರೀ ಪಂಜೆ ವಿಠ್ಠಲ ಶಾನಭಾಗರು ೨೭ ನೇ ತಾ. ಗೆ ನಿಧನಹೊಂದಿದರು. ಇವರು ನಿವೃತ್ತ ಪ್ರಾಥಮಿಕ ಶಿಕ್ಷಕರಾಗಿದ್ದರು. ಆಯುರ್ವೇದದಲ್ಲಿ ನುರಿತವರಾಗಿದ್ದರಿಂದ ಬಡಬಗ್ಗರಿಗೆ ಪುಕ್ಕಟೆ ಔಷಧೋಪಚಾರ ಮಾಡುತ್ತಿದ್ದರು.

ಶ್ರೀ ಕಂಠಯ್ಯನವರ ಅಧ್ಯಕ್ಷತೆಯಲ್ಲಿ ನಡೆದಿತ್ತು. ಎರಡನೆ ಸಮ್ಮೇಲನ ಶ್ರೀ ಆಲೂರ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಮುಂಬಯಿಯಲ್ಲಿ ಕೂಡಿತ್ತು. ಇದೀಗ ಕೂಡುತ್ತಿರುವದು ೩ ನೇ ಸಮ್ಮೇಲನ. ದೇಶದಲ್ಲಿಯ ಎಲ್ಲ ಭಾಗಗಳಲ್ಲಿಯ ಕನ್ನಡಿಗರು ಸಾವಿರಗಟ್ಟಲೆ ಸಮ್ಮೇಲನಕ್ಕೆ ... ಸಮ್ಮೇಲನ ...

ಚಿಕ್ಕ ಕತೆ

★ ಪ್ರತ್ಯುಪಕಾರ ★

●●●●● ಲೇ— ಶ್ರೀ. ಗೋವಿಂದ ದೇಸಾಯಿ, ಸವಣೂರ ●●●●●

ದಿಗಂತದ ಹಸಿರು ಮಲೆಗಳ ಮೇಲೆ ತಿಂಗಳನು, ನೀಲಿಯಾಗಸದಲ್ಲಿ ತೇಲುವ ಹೊನ್ನಿನ ಚಂಡಿನಂತೆ ಜ್ಯೋತ್ಸ್ನಾವರ್ಷವನ್ನು ಬೀರಿ, ಸೊಬಗನ್ನು ಕೊಡುತ್ತ ಮೂಡಿ ಬರುತ್ತಿದ್ದನು. ವಿಶ್ವದಲ್ಲಿ ಎಲ್ಲೆಡೆಗೆ ಮಂದಮಾರುತನು ತನ್ನ ತನಿಗಂಪನ್ನು ಬೀರುತ್ತ ಸುಯ್ಗುಡುತ್ತಲಿದ್ದನು. ನಿತ್ಯಕರ್ಮಕ್ಕನುಸಾರವಾಗಿ ಅರ್ಚಕನು ದೇವಾಲಯದಲ್ಲಿ ಮಂಗಳಾರತಿ ಎತ್ತಲು ಘಂಟೆಗಳು ತಾಳವು ಎಲ್ಲ ಕಡೆಗೂ ಪಸರಿಸಹತ್ತಿತು. ಘಂಟೆಗಳ ನಾದವು ಕರ್ಣಗಳ ಮೇಲೆ ಅಪ್ಪಳಿಸಲು ರಾಯರ ಮನೆಯ ಮಕ್ಕಳೆಲ್ಲ ತಮ್ಮ ಓದನ್ನು ಮುಗಿಸಿ ಮಲಗಲು ಒಳ ಹೊರಟರು. ಒಳಗಡೆ ಅಜ್ಜಿಯು ರಾತ್ರಿಯ ಉಪಹಾರಕ್ಕಾಗಿ ಕಲಪರಟಿ (ಒಂದು ಪಾತ್ರೆ) ಸಮೇತ ಸನ್ನದ್ಧಳಾಗಿ ಕಾಳಗಕ್ಕೆ ಹೊರಟ ಯೋಧರಂತೆ ಗಂಭೀರವಾಗಿ ಹೆಜ್ಜೆಗಳನ್ನಿಡುತ್ತ ಅಡ್ಡಾಡಹತ್ತಿದಳು- ತಂಗಾಳಿಗೆ ಮೈಯನ್ನು ಒಡ್ಡಿ, ತಿಂಗಳಿನ ಬೆಳದಿಂಗಳ ಸೊಬಗನ್ನು ಸವಿಯುತ್ತ ಕುಳಿತ ರಾಯರ ಕಿವಿಗೆ ಘಂಟಾಘೋಷವು ಅಪ್ಪಳಿಸಲು ಹತ್ತು ಘಂಟೆಯಾಯಿತೆಂದು ಶ್ಲೋಕವೊಂದನ್ನು ಉಚ್ಚರಿಸಲು ಪ್ರಾರಂಭಿಸಿದರು. ಕೂಡಲೆ ವ್ಯಕ್ತಿ ಒಂದು ರಾಯರ ಒಳಂಗಣದಲ್ಲಿ ನುಗ್ಗಿತು.

ರಾಯರು ಆಶ್ಚರ್ಯಚಕಿತರಾಗಿ “ ಯಾವಾಗ ಬಂದೆ ಯಂಕಣ್ಣಾ ” ಎಂದು ಮುಗುಳು ನಗೆ ಬೀರಿ ಪ್ರಶ್ನಿಸಿದರು.

“ಇದೀಗ ಬಂದದ್ದಾಯಿತು ರಾಯರೆ”.

“ ಯಾವ ಊರಿಂದಾ ಬಂದೆ ಯಂಕಣ್ಣಾ?” ರಾಯರು ಕೇಳಿದರು.

“ಮುಳಗುಂದದಿಂದಾ ರಾಯರೆ. ಇಂದು, ಮುಳಗುಂದದ ಮೇಲಿಂದಾ ಹಾಯ್ದು ಶಿರಹಟ್ಟಿಗೆ ಹೋಗುವ ಟಪಾಲ ಬಸ್ಸನ್ನು ತಡೆದು ಟಪಾಲನ್ನು ಹೊಡೆದೆವು. ಅದಕ್ಕಾಗಿ ನಾನು ನಿಮ್ಮ ಭೆಟ್ಟಿಗೆ ಬಂದೆ ರಾಯರೆ”

“ಒಳ್ಳೇದಾಯಿತು, ಹಸಿವೆಯಾಗಿರಬಹುದು ಒಳಗೆ ನಡೆ. ಅಂತೂ ಕೊನೆಗೊಮ್ಮೆ ಸಾಧಿಸಿ, ನಮ್ಮೂರ ಟಪಾಲನ್ನು ಹೊಡೆದಂತಾಯಿತು”

“ನಿಮ್ಮ ಕೃಪೆ ರಾಯರೆ” ಎಂದು ಅನ್ನುತ್ತ ಊಟಕ್ಕೆ ಕುಳಿತನು.

“ನಿಮ್ಮ ಗುಂಪಿನಲ್ಲಿ ಸದ್ಯಕ್ಕೆ ಎಷ್ಟು ಜನರು ಇರುವರು?”

“ಎಂಭತ್ತು ಜನ ಉಂಟು ರಾಯರೆ”

“ನಿಮ್ಮ ಮಹದೇವಪ್ಪನವರು ಕ್ಷೇಮದಿಂದ ಇರುವರೆ?”

“ಸುಖವಾಗಿರುವರು ರಾಯರೆ.”

“ಇನ್ನೂ ಮುಂದೆ ಎಲ್ಲಿಗೆ ಹೋಗಬೇಕು?”

“ಹೆಬ್ಬಾಳಕ್ಕೆ ಹೋಗಬೇಕಾಗಿದೆ. ಗುರುವಾರ ಅಲ್ಲಿಗೆ ಆ ತಾಲೂಕಿನ ಮುಖ್ಯಾಧಿಕಾರಿಗಳು ಬರುವವರಿರುವರು. ಅವರು ಹಪ್ತೆ ವಸೂಲ ಮಾಡಿದ ಕೂಡಲೆ ಅದನ್ನಷ್ಟು ಹೊಡೆದುಕೊಂಡು ಹೋಗಬೇಕಾಗಿದೆ. ಅಲ್ಲದೆ ನನ್ನ ಮಹದೇವಪ್ಪನವರಲ್ಲಿ ಇನ್ನೊಂದು ಪಾಗ್ದಾದ ಹಬ್ಬಿದೆ ರಾಯರೆ ನಾನು ಸವಣೂರ ನಿಲ್ದಾಣವನ್ನು ಅಗ್ನಿಗೆ ಆಹುತಿ ಕೊಡಬೇಕು ಎನ್ನುವೆನು ಆದರೆ ಅವರು ಬೇಡಾ ಎನ್ನುವರು. ಇದಕ್ಕೆ ನಿಮ್ಮ ಅಭಿಪ್ರಾಯವೇನು?

“ನಿಮ್ಮ ಗುಂಪಿನದನ್ನು ನಾನು ಹೇಗೆ ಹೇಳಲಪ್ಪಾ? ಆದರೂ ನೀನು ಹಿಂಸೆಯನ್ನು ಬಿಡಬೇಕು ಹಿಂಸೆಯೊಂದನ್ನು ಬಿಟ್ಟರೆ ನೀನು ನಿಜವಾಗಿಯೂ ಮಹಾತ್ಮನಾಗುವದರಲ್ಲಿ ಸಂದೇಹವಿಲ್ಲ ಯಂಕಣ್ಣಾ”

ಇದು ಯಾವದಕ್ಕೂ ಲಕ್ಷಗೊಡದೆ ತನ್ನ ಊಟವನ್ನು ಮುಗಿಸಿ ಕೈ ತೊಳೆದುಕೊಂಡು ಖಾದಿ ಬಟ್ಟೆಗಳನ್ನು ಧರಿಸಿ ಹೊರಡಲು ಅಣಿಯಾದನು. ಕೂಡಲೆ ರಾಯರು ಹೊರಟುಬಿಟ್ಟೆಯೇನು ಯಂಕಣ್ಣಾ? ಎಂದು ಪ್ರಶ್ನಿಸಿದರು. ಹೌದು ರಾಯರೆ. ನಾಳೆ ನಾನು ಅಲ್ಲಿ ಇದ್ದೇ ತೀರಬೇಕು. ಎಂದು ಹೇಳಿ ರಾಯರನ್ನು ನಮಸ್ಕರಿಸಿದನು.

“ಇನ್ನು ಯಾವಾಗ ಭೆಟ್ಟಿಯಾಗುವದೋ ಏನೋ”

“ನಿಮ್ಮ ಆಶೀರ್ವಾದದ ಬಲ ಒಂದು ಇದ್ದರೆ ನೋಡಿದ ಮೇಲೆ ಭೆಟ್ಟಿಯಾಗುವದು ರಾಯರೆ” ಎಂದು ಹೇಳಿ ಹೊರಟನು. ಕ್ಷಣಹೊತ್ತು ಅವನು ಹೋದ ಬೀದಿಯನ್ನೇ ನೋಡುತ್ತ ನಿಂತ ರಾಯರು ಅವನು ಕಾಣದಾಗಲು ಮೊಗಶಾಲೆಯನ್ನು ಪ್ರವೇಶಿಸಿದರು. ಕಣ್ಣೊಳಗಿಂದ ಅಶ್ರುಗಳು ತಾವೇ ಉದುರುತ್ತಿದವು. ತಮ್ಮ ಬಾದಿಯ ಉತ್ತರೀಯದಿಂದ ಒರಸಿಕೊಂಡು ಮಲಗುವ ಕೋಣೆಗೆ ಹೋಗಿ ತಮ್ಮ ಗುರುಗಳಾದ ಲೋಕಮಾನ್ಯ ಟಿಳಕರ ಭಾವಚಿತ್ರವನ್ನು ಮುಟ್ಟಿ ನಮಸ್ಕರಿಸಿದರು. “ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು” ಎಂದು ಅವರು ಹೇಳಿ ಗಹಗಹಿಸಿ ನಕ್ಕಂತೆ ರಾಯರಿಗೆ ಕಾಣಿಸಿತು. ಕೂಡಲೆ ಮತ್ತೊಮ್ಮೆ ನಮಸ್ಕಾರವನ್ನು ಮಾಡಿ ಮಲಗಿಕೊಂಡರು.

ಬೆಳಗಿನ ಜಾವದ ಬೆಳಕು ಪಸರಿಸಿತ್ತು. ಜಾಸ್ ದೇವಿಯು ಕೆನ್ನೆಗೆ ಕುಂಕುಮವರಚಿದಂತೆನಿಸುತಿತ್ತು. ಗಗನ ತಲದಲ್ಲಿ ಸ್ವಚ್ಛಂದವಾಗಿ ಹಾರಾಡಲು ಪಕ್ಷಿಗಳೆಲ್ಲ ತಮ್ಮ ಮರಿಗಳಿಗೆ ಗುಟುಕು ಕೊಟ್ಟು ಸಜ್ಜಾಗಿದ್ದವು. ಇನ್ನು ಕೆಲ ಸಮಯದಲ್ಲಿ ಆಗಬಹುದಾದ ಘೋರ ಕಾಳಗವನ್ನು ನೆನಸಿ ಯಂಕಣ್ಣನು ಹೆಬ್ಬಾಳದ ಚಾವಡಿಯ ಎದುರು ನಿಂತು ಮುಗುಳು ನಗೆ ನಕ್ಕು, ಗೌಡರ ಮನೆಯನ್ನು ಪ್ರವೇಶಿಸಿ ನಾಲವತ್ತರ ಹರ ಆಗಸ್ಟ ಕ್ರಾಂತಿಯ ಕಹಳೆಯ ಕೂಗಿಗೆ ಕಿವಿಗೊಟ್ಟ ಆಜಾನುಬಾಹು ಮಹದೇವಪ್ಪನವರನ್ನು ನಮಸ್ಕರಿಸಿದನು.

“ ಏನು ಯಂಕಣ್ಣಾ ಊರಿಂದ ಈಗ ಬಂದೆಯಾ, ರಾಯರು ನೆಟ್ಟಗಿರುವರೆ, ತಮ್ಮ ಆಶೀರ್ವಾದ ಸಲ್ಲಿಸಿದರೆ” ಒಮ್ಮೆಲೆ ಹೀಗೆ ಅನೇಕ ಪ್ರಶ್ನೆಗಳನ್ನು ಕೇಳಿದರು.

“ ಅಹುದು ಸುಖವಾಗಿದ್ದಾರೆ ” ಎಂದಿಷ್ಟೆ ಉತ್ತರವನ್ನು ಕೊಟ್ಟನು.

ಸಂಜೆಯ ಮುಂದೆ ನಡೆಯಲಿರುವ ಕಾಳಗಕ್ಕೆ ಎಲ್ಲವನ್ನು ಅಣಿಮಾಡಪ್ಪಾ, ಎಂದು ಹೇಳಿ ತಾವು ತಮ್ಮ ಮುಂಜಾವಿನ ಪ್ರಾರ್ಥನೆಗೆ ಎದ್ದರು. ಕೂಡಲೆ ಯಂಕಣ್ಣನೂ ಅವರನ್ನು ಹಿಂಬಾಲಿಸಿದ. ಪ್ರಾರ್ಥನೆಯನ್ನು ಮುಗಿಸಿ ಮತ್ತೆ ಬಂದು ಕುಳಿತರು.

“ ನಿನ್ನೆಯ ನಮ್ಮ ಗುಪ್ತ ಬಟ್ಟೆಗಳು ಬಂದಂತೆ ತೋರುತ್ತವೆ. ಸಾತಾರಾದಿಂದ ಬಂದ ಪಿಸ್ತೂಲಂತೂ ಸಿದ್ಧವಿರುತ್ತವೆ” ಇನ್ನೇನು ಬೇಕು ಮಹದೇವಪ್ಪನವರೆ? ಎಂದು ಕೇಳಿದನು. ಕೂಡಲೆ ಮಹದೇವಪ್ಪನವರು “ ನಾವು ಅಹಿಂಸಾವಾದಿಗಳು. ಹಿಂಸಾಯೋಧರಲ್ಲ ಯಂಕಣ್ಣಾ ಎಂದು ಹೇಳಿ ಆ ಪಿಸ್ತೂಲನ್ನು ಯಾರಿಗೂ ಹಾಕಬಾರದೆಂದು ಆಜ್ಞಾಪಿಸಿದರು. ಕೂಡಲೆ ಗಿರಿಜವ್ವನ ಕೂಗು ಕೇಳ ಬರಲು ಇಬ್ಬರೂ ಎದ್ದು ಊಟಕ್ಕೆ ಹೊರಟರು.

ಇತ್ತ ಬಂಡಿಯೊಂದು ಚಾವಡಿಯ ಎದುರು ಬಂದು ನಿಂತಿತು. ಅದರಲ್ಲಿಂದ ಮಾಮಲೇದಾರರು ಇಳಿಯಲು ಗೌಡ ಕುಲಕರ್ಣಿಯವರು ದೇವರಿಗೂ ತೋರಿಸದ ಭಯಭಕ್ತಿಗಳಿಂದ ಅವರನ್ನು ನಮಸ್ಕರಿಸಿ ಎದುರುಗೊಂಡರು. ಇಷ್ಟಾದರೂ ಅವರು ತಮ್ಮ ದರ್ಪಯುಕ್ತ ವಾಣಿಯಿಂದ ಗೌಡರೆ ಇಂದು ಸಂಜೆಗೆ ಎಲ್ಲ ಹಪ್ತೆಯ ಹಣವು ವಸೂಲಾಗಬೇಕು. ಏಕೆಂದರೆ ಕಾಂಗ್ರೆಸ್ಸಿನವರ ಉಪಟಳವು ಇತ್ತ ಕಡೆಗೆ ಹೆಚ್ಚಾಗಿದೆ. ಅದನ್ನು ಅಡಗಿಸಲು ಪೋಲೀಸ ಪಡೆಯೊಂದು ಬರಲಿದೆ. ಇನ್ನು ನೀವು ಹೊರಡಿ ಎಂದು ಹೇಳಿ ತಮ್ಮ ಮುಂದಿನ ಕಾರ್ಯಕ್ಕೆ ಚಾವಡಿಯ ಕಟ್ಟೆಯನ್ನು ಹತ್ತಿದರು. ಗೌಡರು ಮಾತ್ರ ಮನದಲ್ಲಿಯೆ ನಕ್ಕು ತಮಗೆ ಏನೂ ಗೊತ್ತಿಲ್ಲದವರಂತೆ ನಟಿಸಿ ಹಪ್ತೆ ವಸೂಲಿಗೆ ಹೊರಟುಹೋದರು.

ಸಂಜೆಯ ಸಮಯಕ್ಕೆ ಒತ್ತಾಯ ಮಾಡಿ ರೈತರಿಂದ ಹಪ್ತೆಯನ್ನು ವಸೂಲು ಮಾಡಿ ರೊಕ್ಕವನ್ನೆಲ್ಲ ಎಣಿಸಿ ಚೀಲದಲ್ಲಿ ಹಾಕಿ ಸರಕಾರಿ ಮೊಹರನ್ನು ಒತ್ತಿ ಮಾಮಲೆದಾರರ ಕೈಗೆ ಕೊಟ್ಟರು. ಮತ್ತು ಹಣವು ಮುಟ್ಟಿತೆಂದು ಅವರಿಂದ ಪಾವತಿಗೆ ಸಹಿ ಮಾಡಿಸಿಕೊಂಡು, ಇಂದು ಅವಲಕ್ಕಿ ಮೊಸರನ್ನು ಮಾಡಿಸಬೇಕೆಂದು ಇಚ್ಛೆ ಇದೆ ಸಾಹೇಬರೆ, ಅದಕ್ಕೆ ನೀವು ಇದೊಂದು ರಾತ್ರಿ ಇರಬೇಕು ಎಂದು ಗೌಡರು ಹೇಳಿದರು. ಅವಲಕ್ಕಿ ಮೊಸರು ಎಂದೊಡನೆಯೆ ರಾಯರ ಬಾಯಲ್ಲಿಯೂ ನೀರು ಬಿಟ್ಟಿತು. ಪಾಪಾ ಅವರೇನು ಮಾಡುವರು? ಆಶೆ ಉದ್ಭವಿಸಿತು. ಗೌಡರು ಮೊಸರು ತರುವೆನೆಂದು ಹೇಳಿ ಮನೆಗೆ ಬಂದರು. ಬಂದು ಮಹದೇವಪ್ಪನವರಿಗೆ ಎಲ್ಲ ಸಂಗತಿಯನ್ನು ಅರುಹಲು, ಮನದಲ್ಲಿ ಗೌಡರನ್ನು ಅಭಿನಂದಿಸಿ ಯಂಕಣ್ಣನಿಗೆ ಸಿದ್ಧರಾಗಲು ಹೇಳಿದರು. ಎಲ್ಲರೂ ಹಿತ್ತಿಲ ಬಾಗಿಲಿನಿಂದ ಹೊರಟು ಊರಹೊರಗಿನಿಂದ ಬಂದವರಂತೆ ನಟಿಸಿ ಚಾವಡಿಯನ್ನು ಮುತ್ತಿದರು. ಮುಂಜಾವಿನಿಂದ ಸಂಜೆಯ ವರೆಗೆ ಕೆಲಸಮಾಡಿ ಬೇಸತ್ತು ಬೇಸತ್ತು ಪೋಲೀಸರು ಅದೇ ಬಂದೂಕನ್ನು ಗೋಡೆಗೆ ಆನಿಸಿ ಒರಗಿಕೊಂಡಿದ್ದರು. ಇದೆ ಸುಸಂಧಿಯೆಂದು ಯಂಕಣ್ಣನು ಓಡುತ್ತ ಒಳಗೆ ಹೋಗಿ ಮೊದಲು ಬಂದೂಕುಗಳನ್ನು ಸ್ವಾಧೀನಪಡಿಸಿಕೊಂಡು ಪಿಸ್ತೂಲನ್ನು ಮಾಮಲೆದಾರರ ಕುತ್ತಿಗೆಗೆ ಹಿಡಿದನು. ಇದನ್ನು ಅವರು ಕಂಡು ಚಟ್ಟನೆ ಚೀರಿ ಕಣ್ಣನ್ನು ಮುಚ್ಚಿ ದೊಪ್ಪನೆಂದು ನೆಲಕ್ಕೆ ಬಿದ್ದರು. ಮಹದೇವಪ್ಪನವರು ಇದನ್ನು ಕಂಡು ಗಾಬರಿಯಾಗಿ ಓಡಿಬಂದವರೆ ಮಾಮಲೆದಾರರನ್ನು ಎಬ್ಬಿಸಿ ನಿಮಗೆ ಹಿಂಸೆ ಕೊಡುವದಿಲ್ಲವೆಂದು ಪ್ರತಿಜ್ಞೆ ಮಾಡಲು ಮಾಮಲೆದಾರರು ಕಣ್ಣನ್ನು ತೆರೆದರು. ತೆರೆದ ಕೂಡಲೆ ಯಂಕಣ್ಣನ ಮೂರ್ತಿಯನ್ನು ಕಂಡು ಮತ್ತೆ ಕಣ್ಣು ಮುಚ್ಚಿದರು. “ ನಾವು ಏನನ್ನೂ ಮಾಡುವದಿಲ್ಲ ಮಾಮಲೆದಾರರೆ ಸುಮ್ಮನೆ ಆ ಹಪ್ತೆಯ ಹಣವನ್ನು ಕೊಟ್ಟುಬಿಡಿ. ಅಂದರೆ ನಾವು ಹೋಗುತ್ತೇವೆ. ” ಎಂದು ಯಂಕಣ್ಣನು ಹೇಳಿದನು. ಮಾಮಲೆದಾರರು ತಮ್ಮ ಟೊಂಕದಲ್ಲಿದ್ದ ಕೀಲಿಕೈಯನ್ನು ಬಿಚ್ಚಿ ಒಗೆದರು. ಭರಮನು ಅದನ್ನು ತೆಗೆದುಕೊಂಡು ಪೆಟ್ಟಿಗೆಯಲ್ಲಿದ್ದ ಚೀಲವನ್ನು ತೆಗೆದು ಮಾಮಲೆದಾರರ ಎದುರು ಇಟ್ಟನು. ಅದನ್ನು ಅವರು ಎತ್ತಿ ನಡುಗುವ ಕೈಯಿಂದ ಮಹದೇವಪ್ಪನವರ ಕೈಯಲ್ಲಿಟ್ಟರು. ಇವರು ಅದನ್ನು ತೆಗೆದುಕೊಂಡು ಮಾಮಲೆದಾರರನ್ನು ನಮಸ್ಕರಿಸಿ ಹೊರಟರು. ಹೊರಡುವ ಕಾಲಕ್ಕೆ “ ಗೌಡ ಕುಲಕರ್ಣಿಯರಿಗೆ ಏನಾದರೂ ತ್ರಾಸ ಕೊಟ್ಟರೆ ನಿಮ್ಮ ಮಕ್ಕಳಿಗೆ ಎಳ್ಳನ್ನು ಸಿದ್ಧಮಾಡಲು ಹೇಳಿದಂತೆಯೆ ನೋಡಿರಿ ” ಎಂದು ಯಂಕಣ್ಣನು ಮಾಮಲೆದಾರರಿಗೆ ಸೂಚಿಸಿ ಹೊರಬಂದನು. ಪೋಲೀಸರು ಬಂದೂಕು ಕಳೆದುಕೊಂಡು ಸುಮ್ಮನೆ ಕುಳಿತರು. ಎಲ್ಲರೂ ಸ್ತಬ್ಧರಾಗಿದ್ದರು. ಒಬ್ಬರ ಮುಖದ ಮೇಲೂ ಕಳೆಯಿಲ್ಲ. ಇತ್ತ ಗೌಡರು ಏನನ್ನೂ ಅರಿಯದಂತೆ ಮೊಸರಿನ ಗಡಿಗೆಗಳನ್ನು ಹೊರಿಸಿಕೊಂಡು ಬಂದರು. ಹೀಗೆ ಕುಳಿತದ್ದನ್ನು ನೋಡಿ ಅವರೂ ಆಶ್ಚರ್ಯ ವ್ಯಕ್ತಮಾಡಿ ಮಾಮಲೆದಾರರನ್ನು ಕೇಳಿದರು. ಮಾಮಲೆದಾರರಿಗೆ ಬಾಯಿಯೆ ಬರಲಿಲ್ಲ. ಕೊನೆಗೆ ಗೌಡರು ಪೋಲೀಸನೊಬ್ಬನಿಂದ ಕೇಳಿಕೊಂಡು ಅವರನ್ನು ಸಮಾಧಾನಗೊಳಿಸಿ ಅವಲಕ್ಕಿ ಮೊಸರನ್ನು ತಿನ್ನಿಸಿದರು. ಅತ್ತ ಮಾಮಲೆದಾರರನ್ನು ಚಾವಡಿಯಲ್ಲಿ ಮಲಗಲು ಬಿಟ್ಟು ತಾವು ಮನೆಗೆ ಬಂದು ಮಹದೇವಪ್ಪನವರಿಗೆ ಅವರ ಕಾರ್ಯದ ಬಗ್ಗೆ ಸಂತೋಷ ವ್ಯಕ್ತ ಮಾಡಿ ಅಭಿನಂದನೆಗಳನ್ನು ಸಲ್ಲಿಸಿ ಅವರ ರಾತ್ರಿಯ ಊಟವನ್ನು ಉತ್ಸಾಹಪೂರ್ವಕವಾಗಿ ಮಾಡಿಸಿದರು.

ಮುಂಜಾನೆ ಎದ್ದು ಮಾಮಲೇದಾರರು ತಮ್ಮ ಪ್ರಾತಃಕಾಲದ ವಿಧಿಗಳನ್ನು ಕೊನೆಗೊಳಿಸಿ ಚಹಾ ಸೇವಿಸಿ ಚಕ್ಕಡಿಯನ್ನು ಹತ್ತಿದರು. ಗೌಡ ಕುಲಕರ್ಣಿಯರು ಅವರನ್ನು ಬೀಳ್ಕೊಟ್ಟು ಮನೆಗೆ ಬಂದರು.

ಮಹದೇವಪ್ಪನವರು ಅಂದು ಅಲ್ಲಿಯೆ ಕಳೆದು ರಾತ್ರಿ ತಮ್ಮ ಪಯಣವನ್ನು ಬೆಳೆಸಿದರು.

ಇತ್ತ ಮಾಮಲೇದಾರರು ಗುಡಗೇರಿಗೆ ತಲುಪಿ ಸರಕಾರಕ್ಕೆ ಹೆಬ್ಬಾಳ ಗ್ರಾಮದ ಹಪ್ತೆಯ ಬಗ್ಗೆ ತಿಳಿಸಿದರು. ಸುಪರಿಂಟೆಂಡೆಂಟರು(?) ಆ ಸಂಸ್ಥಾನಿಕರಿಗೆ ಆವಾಗ ಎಚ್ಚರಾಯಿತು. ಒಂದು ಪೋಲೀಸಪಡೆಯನ್ನು ಫೌಜದಾರ ಸಮೇತ ಹೆಬ್ಬಾಳಕ್ಕೆ ಕೊಟ್ಟು ಕಳಿಸಿದರು. ಅಲ್ಲದೆ ಪುಂಡುಗಂದಾಯವನ್ನು ಹಾಕಿದರು. ಪೋಲೀಸರೆಲ್ಲ ಹೆಬ್ಬಾಳಕ್ಕೆ ಬಂದು ಪುಂಡುಗಂದಾಯವನ್ನು ವಸೂಲು ಮಾಡಲು ಹೊರಟರೆ ಊರವರೆಲ್ಲ ಬಾಗಿಲು ಹಾಕಿಕೊಂಡು ಒಳಗೆ ಕುಳಿತುಬಿಟ್ಟರು. ಊರಲ್ಲಿ ಅಡ್ಡಾಡಿದರೆ ಹನಿ ಹಾಲು ಮೊಸರನ್ನು ಯಾರೂ ಕೊಡದಾದರು. ಇದನ್ನು ನೋಡಿ ‘ಅರೇ ಅಲ್ಲಾ!’ ಎಂದು ತಮ್ಮ ಗಡ್ಡವನ್ನು ಝಾಡಿಸಿಕೊಂಡು ತಮ್ಮ ಫೌಜದಾರರಿಗೆ ತಿಳಿಸಿದರು. ಅವರೂ ಅಲ್ಲಲ್ಲಿ ಪ್ರಯತ್ನ ಮಾಡಿ ಸ್ವಲ್ಪ ಹಾಲು ಮೊಸರನ್ನು ದೊರಕಿಸಿ ತಮ್ಮ ಹೊಟ್ಟೆಯನ್ನು ಪೂರ್ತಿಯಾಗಿ ತುಂಬಿಸಿಕೊಂಡರು.

ಅತ್ತ ಅವರು ಸವಣೂರ ನಿಲ್ದಾಣವನ್ನು ಅಗ್ನಿಗೆ ಆಹುತಿಯನ್ನಾಗಿ ಕೊಟ್ಟರು. ಆರ್ಜಗಿಯ ಧರ್ಮಶಾಲೆಯ ಕಾರ್ತೀಕ ಹಚ್ಚಿದರು. ಹೊಸರಿತ್ತಿಯ ಚಾವಡಿಯನ್ನು ಹೋಳಿಮಾಡಿದರು. ಅಂತೂ ಒಂದೊಂದೇ ಕಾರ್ಯಗಳು ಮೇಲಿಂದ ಮೇಲೆ ಜರುಗುತ್ತಲೆ ಇದ್ದವು. ಹೆಬ್ಬಾಳದಲ್ಲಿ ಕುಳಿತುಕೊಂಡು ಇದನ್ನು ಕೇಳಿ ಅವರ ಶೋಧನೆಯನ್ನು ಪ್ರಾರಂಭಿಸಿದರು. ಇವೆಲ್ಲವು ಗಳ ಸಂಭ್ರಮದಲ್ಲಿ ಯಂಕಣ್ಣನು ತನ್ನ ಸಾಹಸವನ್ನು ತೋರಿಸಿದ್ದರೂ ಹಿಂಸೆ ಮಾತ್ರ ಆಗಿತ್ತು. ಇದನ್ನು ಕಂಡು ಮಹದೇವಪ್ಪನವರಿಗೆ ಸಹನೆಯಾಗದಾಗಲು ಯಂಕಣ್ಣನನ್ನು ಒಳಕಾಗಿ ಬಯ್ದರು. “ ಯಂಕಣ್ಣಾ ಅಂದು ರಾತ್ರಿ ಮುಖಂಡರ ಬಂಧನವಾದಾಗ ಗಾಂಧೀಜಿಯವರು ಏನನ್ನು ಹೇಳಿದರು ಗೊತ್ತೆ? ‘ಮಾಡಿರಿ ಇಲ್ಲವೆ [illegible]

[illegible] ಎಂದು [illegible] ಇವರ ಬರವನ್ನು ಕಾಯುತ್ತಿದ್ದರು.

[illegible] ಬಂದಿದ್ದಿತು. ಪೋಲೀಸರೆಲ್ಲ ಎದ್ದು [illegible] ಹೋಗಿದ್ದರು. ಪೋಲೀಸಪ್ಪನು [illegible] ಯಲ್ಲಿ ಲೀನವಾಗಿದ್ದರು. ಫೌಜದಾರರು ಎದ್ದು ಕುಳಿತು ಸಿದ್ಧರಾಗಿದ್ದರು. ಮಹದೇವಪ್ಪನವರ ಚಕ್ಕಡಿಯು [illegible] ಬಂದು [illegible] ಮಹದೇವಪ್ಪನವರೂ [illegible] ಚಕ್ಕಡಿಯಿಂದ ಇಳಿದರು. ಅದೇ ಎದ್ದು ಕುಳಿತ ಫೌಜದಾರರು ತಮ್ಮ ಪಿಸ್ತೂಲನ್ನು ಹಿಡಿದುಕೊಂಡೇ ಎದ್ದರು. ಎದುರಿಗೆ ಚಕ್ಕಡಿಯಿಂದ ಇಳಿದ ಇವರನ್ನು ನೋಡಿ ಅನಾಯಾಸವಾ [illegible] ಸಿಕ್ಕಿದ್ದಿತೆಂದು ತಿಳಿದು

“ಮರಣಕ್ಕೆ ಸಿದ್ಧನಾಗು ಮಹದೇವಾ” ಎಂದು ಪಿಸ್ತೂಲನ್ನು ಹಿಡಿದರು.

“ಮರಣಕ್ಕೆ ನಾನು ಎಂದೋ ಸಿದ್ಧನಾಗಿದ್ದೇನೆ. ಗಾಂಧಿ ಆಶ್ರಮವನ್ನು ಬಿಟ್ಟು [illegible] ಆಶ್ರಮ ತೆಗೆದು ಈ ಚಲೇಜಾವ್ ಚಳವಳಿಗೆ ತಲೆಯನ್ನು ಒಡ್ಡಿದ ಕೂಡಲೆ ಮರಣಕ್ಕೆ ಸಿದ್ಧನಾಗಿದ್ದೇನೆ. ನನಗೆ ನಿಮ್ಮಂತೆ [illegible] ತಲೆಬಗ್ಗಿಸಿ, ಪರರ [illegible] ಬೇಡಾ ಅಂತಲೆ ನಾನು [illegible] ನೆಂದು ಯಾವಾಗಲೂ ಸಾರಿ ಹೇಳುತ್ತೇನೆ.”

ಫೌಜದಾರರು ತಮ್ಮ ಪಿಸ್ತೂಲನ್ನು ಸರಿಪಡಿಸಿಕೊಂಡು ಇವನ ಕೆಚ್ಚೆದೆಯನ್ನು ಕಂಡು ಆಶ್ಚರ್ಯಚಕಿತರಾಗಿ ಫಯರ್! ಎಂದು ಹಾರಿಸಿದರು. ಕೂಡಲೆ ಮಹದೇವಪ್ಪನ ಮಗ್ಗುಲಲ್ಲಿದ್ದ ಭರಮನು ಸರಿದು ಮಹದೇವಪ್ಪನ ಎದುರಿಗೆ ನಿಂತನು. ಗುಂಡು ಬಂದು ಭರಮನ ಹೊಟ್ಟೆಗೆ ತಾಕಿತು. ಧೊಪ್ಪನೆಂದು ಭರಮನು ಮಹದೇವಪ್ಪನ ಮೈ ಮೇಲೆ ಬಿದ್ದನು. ಕಾರಣಾಂತರದಿಂದ ಸ್ವಲ್ಪ ಹಿಂದುಳಿದ ಯಂಕಣ್ಣನು ಈ ಸಪ್ಪಳ ಕೇಳಿ ಇದೇನೋ ಸಂಭವಿಸಿದೆಂದು ತನ್ನ ಪಿಸ್ತೂಲನ್ನು ಹೊರದೆಗೆದು ಓಡುತ್ತ ಬಂದನು. ಇದನ್ನು ನೋಡಿ ಪರಿಸ್ಥಿತಿ ತಿಳಿದುಕೊಂಡವನೆ ತನ್ನ ಪಿಸ್ತೂಲಿನಿಂದ ಹಿಂಬದಿಗೆ ಮರೆಯಾಗಿ ನಿಂತ ಫೌಜದಾರನಿಗೆ ಗುಂಡು ಹಾರಿಸಿದನು. ಕೂಡಲೆ ಇದೇನು ನೋಡ ಹಾಯ್! ಎಂದು ನೆಲಕ್ಕೆ ಬಿದ್ದನು. ಮಹದೇವಪ್ಪನವರು “ ಇದನ್ನೇನು ಮಾಡಿದಿ ಯಂಕಣ್ಣ ? ನಾನೆಂದೂ ಹಿಂಸೆ ಮಾಡುವದಿಲ್ಲವೆಂದು ಪ್ರತಿಜ್ಞೆ ಮಾಡಿದ್ದಿಲ್ಲವೆ” ಎಂದು ಅಂದರು.

“ಇದೇನೂ ಅಲ್ಲ ಮಹಾದೇವಪ್ಪನವರೆ ನೀವು ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರ ಮಾಡಿದೆನಷ್ಟೆ. ಎಂದು ಅದೇ ಗುಂಡನ್ನು ತನ್ನ ಎದೆಗೆ ಹಾರಿಸಿಕೊಂಡನು. ಮಹದೇವಪ್ಪನವರು ಇದನ್ನು ಕಂಡು ಹಾಯ್ ಎಂದು ಚೀರಿದರು. ಕೂಡಲೆ ಯಂಕಣ್ಣನು ಬೀಳಲು ಅವನನ್ನು ಎತ್ತಿ ತಮ್ಮ ತೊಡೆಯ ಮೇಲೆ ಮಲಗಿಸಿಕೊಂಡು ಗಾಳಿಯನ್ನು ಹಾಕಹತ್ತಿದರು. “ನನ್ನ ಕಾರ್ಯವನ್ನಂತೂ ಮಾಡಿದೆ. ನಾನು ಇನ್ನು ಹಿಂಸೆಯನ್ನು ಮಾಡುವದಿಲ್ಲ. ಮಹದೇವಪ್ಪನವರೆ. ರಾಯರಿಗೂ ಹೀಗೆ ಹೇಳಕಳಿಸಿರಿ. ಇವು ಸ್ವಾತಂತ್ರ್ಯ ಸಿಗುವವರೆಗೂ ನಿಮ್ಮ [illegible] ಸಾಗಿಸಿರಿ” ಎಂದು ಅವರ ತೊಡೆಯ ಮೇಲೆ ಒರಗಿ ಬಿಟ್ಟನು. !

ಆರ್ಥಿಕ ಪರಿಸ್ಥಿತಿಯು ಒತ್ತಾಯದ ಮೂಲಕ [illegible] ಹಿಂದುಸ್ತಾನಕ್ಕೆ [illegible] ಆರ್ಥಿಕ ವಿಷಯದಲ್ಲಿ [illegible] ಹಿಂದುಸ್ತಾನಗಳಲ್ಲಿ [illegible] ಗಾಂಧೀಜಿಯವರನ್ನು [illegible] ಹಿಂದುಸ್ತಾನಕ್ಕೆ [illegible]

Reg. No. B. 3148

Licenced to Post without Pre-payment

12-47



ಜ್ಯೋತಿಷಿ:— ಕೃಷ್ಣಶಾಸ್ತ್ರಿ ಭಟ, ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ

ಡಿಸೆಂಬರ ೮ ರಿಂದ ೧೪ ರ ವರೆಗೆ

ಮೇಷ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲ. ಆದರೆ ಮನೆಯಲ್ಲಿಯ ಹಿರಿಯರಿಂದ ವಿಪರೀತ ಮಾತುಗಳ ಆಗ್ರಹ ಹಿಡಿಯುವದು ಮತ್ತು ಮಕ್ಕಳೂ ಅನ್ಯಪಕ್ಷಾರ್ಥ ಹುಚ್ಚು ಚ್ಚಾರವನ್ನು ನಡೆಸುವರು. ಇದರಿಂದ ಪ್ರಾಪಂಚಿಕ ಸುಖದಲ್ಲಿ ಉದಾಸೀನತೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಸಾಧಾರಣವೆ. ಆದರೆ ಅವಚಿತ ಲಾಭದ ಸಂಭವ ಬಹಳ. ಸ್ವಪ್ನ ಶುಭ ಮತ್ತು ಭಾವೀಸೂಚಕ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೯, ೧೦, ೧೩, ೧೪ ಅನುಕೂಲ.

ವೃಷಭ

ಪ್ರಕೃತಿಯಲ್ಲಿ ಹೆಚ್ಚಿನ ಕ್ಷೀಣತೆ ಎನಿಸುತ್ತ ನಡೆಯುವದು. ಹೆಂಡತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣವೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ತುಂಬ. ಮಿತ್ರರಿಂದ ಉತ್ತೇಜಕ ಕೃತ್ಯಗಳು. ವೆಚ್ಚ ಹೆಚ್ಚುತ್ತ ನಡೆಯುವದು. ಆದರೆ ಹೇತು ಸಾಧ್ಯ. ಸ್ವತಃದ ಮನೆ ಇಲ್ಲವೆ ಊರಿಗಿಂತ ಅನ್ಯ ಸ್ಥಳದಲ್ಲಿ ಹೆಚ್ಚು ಸುಖ ಮತ್ತು ಆದರ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಹಿತದ್ದು. ಕೃತ್ತಿಕೆಯ ಕೊನೆಯ ೨ ಮತ್ತು ರೋಹಿಣಿಯ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೧೧, ೧೨ ಅನುಕೂಲ.

ಮಿಥುನ

ಸ್ವಂತಕ್ಕೆ ಮತ್ತು ಹೆಂಡತಿಗೆ ಅಲ್ಪಸ್ವಲ್ಪ ಕಾಹಿಲೆ ಮತ್ತು ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕಡಮೆ. ಆಪ್ತರು ಮತ್ತು ನೆರೆಯವರಿಂದ ಬಹಳ ಛಲನೆ. ಉದ್ಯೋಗದಲ್ಲಿ ಲಾಭ ಅನುಕೂಲ. ಆದರೆ ಪ್ರಗತಿ ಮತ್ತು ಪ್ರತಿಷ್ಠೆ ಕಡಮೆ. ಮಕ್ಕಳಲ್ಲಿ ಸ್ವಲ್ಪ ಉನ್ನತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಕಿಂಚಿತ್ ಯಶಸ್ಸು. ಸಜ್ಜನರಲ್ಲಿ ನಿಮ್ಮ ವಿಷಯಕ್ಕೆ ತಪ್ಪು ತಿಳಿವಳಿಕೆ ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಕೆಲಮಟ್ಟಿಗೆ ಅನುಕೂಲ. ಆರಿದ್ರೆಯ ಕೊನೆಯ ಮತ್ತು ಪುನರ್ವಸುವಿನ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೯, ೧೩, ೧೪ ಅನುಕೂಲ.

ಕರ್ಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ ಆದರೆ ಸ್ತ್ರೀ ಸುಖದಲ್ಲಿ ವಿರಸ. ಆದರಂತೆಯೇ ಸ್ತ್ರೀ ಸಮಾಜದಲ್ಲಿ ನಿಮ್ಮ ಬಗ್ಗೆ ಬಹಳ ಅನಾದರ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆಯೂ ಬಹಳ ಉತ್ತಮ. ಆದರೆ ಲಾಭ ಮಾತ್ರ ಬಹಳ ಕುಂದುತ್ತ ಹೋಗುವದು. ಮಿತ್ರರಲ್ಲಿ ವಿರೋಧ. ಸ್ಥಾವರದಲ್ಲಿ ಒಮ್ಮೆಲೆ ಬಹಳ ಹಾನಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಆದರೆ ಪುಷ್ಯದ ಕೊನೆಯ ೨ ಮತ್ತು ಆಶ್ಲೇಷಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೮, ೧೧, ೧೨ ಅನುಕೂಲ.

ಸಿಂಹ

ನಿಮ್ಮ ಪ್ರಕೃತಿ ಅನುಕೂಲ ಆದರೆ ಹೆಂಡತಿಗೆ ಕಿರುಕುಳ ಕಾಹಿಲೆ. ಆದರೆ ಉಭಯತರಲ್ಲಿ ಮತ್ತೈಕ್ಯ ಮತ್ತು ಪ್ರೇಮದ ಹೆಚ್ಚಳ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣವೇ. ಉದ್ಯೋಗದಲ್ಲಿ ಪ್ರಗತಿ ಅನುಕೂಲ ಆದರೆ ಪ್ರತಿಷ್ಠೆ ಮತ್ತು ಲಾಭ ಅಸ್ಪಷ್ಟ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಮಿತ್ರರಲ್ಲಿ ವಿರೋಧ ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಬಹಳ ಉತ್ತಮ. ಮಘಾದ ಕೊನೆಯ ೨ ಮತ್ತು ಪೂರ್ವಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೮, ೯, ೧೦ ಅನುಕೂಲ.

ಕನ್ಯಾ

ಪ್ರಕೃತಿ ಬಹಳ ಉತ್ತಮ. ಸ್ತ್ರೀ ಸುಖ ಅನುಕೂಲ. ಆದರೆ ಮನೆಯಲ್ಲಿಯ ಉಳಿದವರಲ್ಲಿ ಮತ್ತು ನಿಮ್ಮಲ್ಲಿ ಬಹಳ ಕಲಹ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ ಆದರೆ ಪ್ರತಿಷ್ಠೆ ಥಳಥಳಿಸುವದು. ನಿರರ್ಥಕ ವೆಚ್ಚ ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಆದರೆ ವೆಚ್ಚ ಮತ್ತು ತೊಂದರೆಯೂ ಅದೇ ಪ್ರಮಾಣದಲ್ಲಿ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾದ ಕೊನೆಯ ೨ ಮತ್ತು ಹಸ್ತಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೮, ೧೧, ೧೨ ಅನುಕೂಲ.

ತುಲಾ

ಪ್ರಕೃತಿ ಉತ್ತಮ ಸ್ತ್ರೀಸುಖ ಅನುಕೂಲ. ಎಲ್ಲ ಬಗೆಯಿಂದ ಪ್ರಾಪಂಚಿಕ ಸುಖದ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಪ್ರತಿಷ್ಠೆಗಿಂತ ಹೆಚ್ಚು ಅನುಕೂಲ. ಮಿತ್ರರಿಂದ ವಿಶೇಷ ಮಹತ್ವದ ಸಹಾಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ಮೊದಲನೆ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೯, ೧೦, ೧೧, ೧೨ ಅನುಕೂಲ.

ವೃಶ್ಚಿಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ ಆದರೆ ಯಾವಾಗಾದರೊಮ್ಮೆ ಹೆಂಡತಿಯ ಗೂಢ ಬೇಕಂತಲೆ ತಿಕ್ಕಾಟದ ವರ್ತನ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಅತಿ ಉತ್ತಮ. ಪ್ರಭುತ್ವ ಇಲ್ಲವೆ ಅಧಿಕಾರದ ಹೆಚ್ಚಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಮಿತ್ರಸುಖ ಉತ್ತಮ, ಪ್ರವಾಸಾದಿ ಕೆಲಸ ಹಿತದ್ದು. ಅನುರಾಧೆಯ ಕೊನೆಯ ೨ ಮತ್ತು ಜ್ಯೇಷ್ಠಾದ ಮೊದಲನೆ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೧೧, ೧೨, ೧೩, ೧೪ ಅನುಕೂಲ.

ಧನು

ಪ್ರಕೃತಿ ಸಾಧಾರಣವೆ, ಹೆಂಡತಿಗೆ ಸ್ವಲ್ಪ ಕಾಹಿಲೆ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಮಧ್ಯಮ. ಉದ್ಯೋಗದಲ್ಲಿ ಲಾಭ ಅನುಕೂಲ. ಆದರೆ ಪ್ರಗತಿ ಮತ್ತು ಪ್ರತಿಷ್ಠೆ ಬಹಳ ಮಂದ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಪ್ರವಾಸಾದಿ, ಕೆಲಸ ಅತಿ ತೊಂದರೆಯದು. ಮೂಲಾದ ಕೊನೆಯ ೨ ಮತ್ತು ಪೂರ್ವಾಷಾಢಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೮, ೯, ೧೦ ಅನುಕೂಲ.

ಮಕರ

ಪ್ರಕೃತಿ ಸಾಧಾರಣವೆ, ಮಕ್ಕಳಲ್ಲಿ ಒಬ್ಬರಿಗೆ ಬಹಳ ಕ್ಲೇಶ, ಪ್ರತಿಯೊಂದರಲ್ಲಿಯೂ ಹೆಂಡತಿಯ ಅಸಮಾಧಾನ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆಗೆ ಮಾತ್ರ ಬಹಳ ಕುಂದು. ಯಾವಳೊ ಒಬ್ಬ ಹೆಣ್ಣುಮಗಳ ಶತ್ರುತ್ವ ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಚಮತ್ಕಾರಿಕ ಕಾರಣದಿಂದ ಅಡ್ಡಿ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಉತ್ತರಾಷಾಢಾದ ಕೊನೆಯ ಮತ್ತು ಶ್ರವಣಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೮, ೧೧, ೧೨ ಅನುಕೂಲ.

ಕುಂಭ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ, ಆದರೂ ಹೆಂಡತಿಯು ಪ್ರತಿಯೊಂದರಲ್ಲಿಯೂ ನಿರರ್ಥಕವಾಗಿ ರೊಚ್ಚಿಗೇಳುವಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಹೆಂಡತಿಯಲ್ಲಿ ಹೆಚ್ಚು ಆಸಕ್ತಿ. ವಾದದಲ್ಲಿ ಸ್ಪರ್ಧೆಯಲ್ಲಿ ಯಶಸ್ಸು. ಪ್ರವಾಸಾದಿ ಕೆಲಸ ಹಿತದ್ದು. ಶತತಾರಿಕೆಯ ಕೊನೆಯ ಮತ್ತು ಪೂರ್ವಾಭಾದ್ರಪದದ ಮೊದಲನೆ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೯, ೧೧, ೧೨, ೧೪ ಅನುಕೂಲ.

ಮೀನ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಆದರೆ ಅಪ್ರಿಯ ಅತಿಥಿಗಳ ಗದ್ದಲ ಬಹಳವಾಗುವದರಿಂದ ಮನಸ್ಸಿನಲ್ಲಿ ವಿರಸ. ಉದ್ಯೋಗದಲ್ಲಿ ದೊಡ್ಡ ಪ್ರಗತಿ. ಹೆಸರು ಆಗುವಂತೆ ಪ್ರತಿಷ್ಠೆ ಮತ್ತು ಅಂದಾಜಿಗಿಂತ ಹೆಚ್ಚು ಲಾಭ. ಹೆಂಗಸರ ಮೇಲೆ ಹೆಚ್ಚು ಛಾಪು. ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಜಯ. ಪ್ರವಾಸಾದಿ ಕೆಲಸ ಹಿತದ್ದು. ಉತ್ತರಾ ಭಾದ್ರಪದದ ಕೊನೆಯ ಮತ್ತು ರೇವತಿಯ ಮೊದಲನೆ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೧೧, ೧೩, ೧೪ ಅನುಕೂಲ.

ಚಿತ್ರದುರ್ಗ ವರ್ತಕ ಗುಮಾಸ್ತರ ಸಭೆ ... ಶ್ರೀ ಕೊರಡಗಿ ಕೊಟ್ರಪ್ಪನವರನ್ನು ಅಧ್ಯಕ್ಷರನ್ನಾಗಿ ಆರಿಸಿ ಶ್ರೀ ವೀರಬಸಪ್ಪನವರನ್ನು ಉಪಾಧ್ಯಕ್ಷರನ್ನಾಗಿ ಹಾಗು ಎಸ್ ಜಯದೇ... ರನ್ನು ಕಾರ್ಯದರ್ಶಿಗಳನ್ನಾಗಿ ಆರಿಸಲಾಯಿ...

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ 'ಲೋಕಶಿಕ್ಷಣ ಟ್ರಸ್ಟ'ದ ಪರವಾಗಿ ಹ. ರಾ. ಪೂರ್ಣ... ಹೊರಡಿಸಿದ ... ಅವರಿಂದ